CAREERS360

# KARNATAKA II PUC KANNADA

## Model Paper

QUESTION PAPER SAMPLE PAPER MODEL PAPER MODEL QUESTIONS ANSWER KEY ANSWER CODES SOLUTIONS RESPONSE SHEET ... (background watermark)

**ಕರ್ನಾಟಕ ಸರ್ಕಾರ**

**ಪದವಿ ಪೂರ್ವ ಶಿಕ್ಷಣ ಇಲಾಖೆ**

**ದ್ವಿತೀಯ ಪಿ.ಯು.ಸಿ ಕನ್ನಡ (01) ಪ್ರಶ್ನೆಕೋಶ**

## ದ್ವಿತೀಯ ಪಿಯುಸಿ ಕನ್ನಡ ಭಾಷಾ ಪಠ್ಯಪುಸ್ತಕದ ಪ್ರಶ್ನೆಕೋಶ ರಚನಾ ಸಮಿತಿ

**ಅಧ್ಯಕ್ಷರು :**
ಶ್ರೀ ಕೆ.ಎಸ್.ಸಿದ್ಧಲಿಂಗಪ್ಪ
ಪ್ರಾಚಾರ್ಯರು
ಎಂಪ್ರೆಸ್ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು,
ತುಮಕೂರು.

**ಪರಿಶೀಲಕರು :**
ಡಾ.ಎಚ್.ಎಸ್.ಸತ್ಯನಾರಾಯಣ
ಹಿರಿಯ ಕನ್ನಡ ಉಪನ್ಯಾಸಕರು
ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು,
ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಂಗಳೂರು – 560004

---

**: ಸದಸ್ಯರು :**

೧. ಡಾ. ಅರ್ಜುನ ಗೊಳಸಂಗಿ
ಹಿರಿಯ ಕನ್ನಡ ಉಪನ್ಯಾಸಕರು
ಜೆ.ಸಿ.ಟಿ.ಎಂ. ಪದವಿ ಪೂರ್ವ ಕಾಲೇಜು
ಹುಲಕೋಟಿ, ಗದಗ ಜಿಲ್ಲೆ.

೨. ಶ್ರೀ ತಿಮ್ಮರಾಜು
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು
ಲಕ್ಷ್ಮೀಪುರಂ, ಮೈಸೂರು.

೩. ಶ್ರೀ ಜಿ.ಬಿ.ವಿರೂಪಾಕ್ಷ
ಹಿರಿಯ ಕನ್ನಡ ಉಪನ್ಯಾಸಕರು
ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು,
ಬಸವನಹಳ್ಳಿ ಬಡಾವಣೆ, ಚಿಕ್ಕಮಗಳೂರು.

೪. ಡಾ. ವೈ.ಎಂ.ಯಾಕೊಳ್ಳಿ
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು
ಸವದತ್ತಿ, ಬೆಳಗಾವಿ ಜಿಲ್ಲೆ.

೫. ಡಾ. ಸಾಸ್ವೇಹಳ್ಳಿ ಸತೀಶ್
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು
ಮಾಳೂರು, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ.

೬. ಡಾ. ವಾಸುದೇವ ಬೆಳ್ಳೆ
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು
ಬೊಕ್ಕಪಟ್ಟಣ, ಮಂಗಳೂರು –575006

೭. ಡಾ. ಎಂ.ಡಿ.ಸುದರ್ಶನ್
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ಕಳಸಾಪುರ, ಚಿಕ್ಕಮಗಳೂರು ಜಿಲ್ಲೆ – 577146

೮. ಶ್ರೀ ರೋಹಿತ್ ಕೆ.
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ಆಲೂರು, ಹಾಸನ – 573203

೯. ಶ್ರೀ ಸದಾಶಿವ ಹೊಳ್ಳ
ಕನ್ನಡ ಉಪನ್ಯಾಸಕರು
ವಿವೇಕ ಪದವಿ ಪೂರ್ವ ಕಾಲೇಜು,
ಕೋಟ, ಉಡುಪಿ ಜಿಲ್ಲೆ.

೧೦. ಶ್ರೀ ರೇಣುಕಾರಾಧ್ಯ ಎಚ್. ಎಸ್.
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ಮುಸುವಿನಕೊಪ್ಪಲು, ತಿ.ನರಸೀಪುರ, ಮೈಸೂರು ಜಿಲ್ಲೆ.

೧೧. ಡಾ. ಜಿ.ವಿ.ರಾಜೇಶ್ವರಿ
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ಬೇಗಾರು, ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ.

೧೨. ಶ್ರೀಮತಿ ಶೀಲಾ ಪ್ರಕಾಶ್ ಎಸ್.ಎನ್.
ಕನ್ನಡ ಉಪನ್ಯಾಸಕರು
ಎನ್.ಎಂ.ಕೆ.ಆರ್.ವಿ ಮಹಿಳಾ ಪದವಿ ಪೂರ್ವ ಕಾಲೇಜು
ಜಯನಗರ, ಬೆಂಗಳೂರು – 11

೧೩. ಶ್ರೀಮತಿ ಗಂಗಾಂಬಿಕಾ ಎಸ್.
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ಕಾಡುಗುಡಿ, ಬೆಂಗಳೂರು – 560087

# : ಪರಿವಿಡಿ :


**ಪದ್ಯ ಭಾಗ :**

1. ಕದಡಿದ ಸಲಿಲಂ ತಿಳಿವಂದದೆ – ನಾಗಚಂದ್ರ
2. ವಚನಗಳು
   2.1 ಬಸವಣ್ಣನವರ ವಚನಗಳು
   2.2 ಉರಿಲಿಂಗಪೆದ್ದಿಯ ವಚನಗಳು
3. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು – ಕುಮಾರವ್ಯಾಸ
4. ಪಗೆಯಂ ಬಾಲಕನೆಂಬರೇ – ಪುಲಿಗೆರೆ ಸೋಮನಾಥ
5. ಜಾಲಿಯ ಮರದಂತೆ – ಪುರಂದರದಾಸರು
6. ಹಬ್ಬಲಿ ಅವರ ರಸಬಳ್ಳಿ – ಜನಪದ
7. ಬೆಳಗು ಜಾವ – ದ.ರಾ. ಬೇಂದ್ರೆ
8. ಮುಂಬೈ ಜಾತಕ – ಜಿ.ಎಸ್. ಶಿವರುದ್ರಪ್ಪ
9. ಶಿಲುಬೆ ಏರಿದ್ದಾನೆ – ಕೆ.ಎಸ್. ನಿಸಾರ್ ಅಹಮದ್
10. ಒಂದು ಹೂ ಹೆಚ್ಚಿಗೆ ಇಡುತೀನಿ – ಲಲಿತಾ ಸಿದ್ಧಬಸವಯ್ಯ
11. ಹತ್ತಿ... ಚಿತ್ತ... ಮತ್ತು... – ಟಿ. ಯಲ್ಲಪ್ಪ
12. ಒಮ್ಮೆ ನಗುತ್ತೇವೆ – ಸುಕನ್ಯಾ ಮಾರುತಿ

**ಗದ್ಯ ಭಾಗ :**

1. ಮುಟ್ಟಿಸಿಕೊಂಡವನು – ಪಿ. ಲಂಕೇಶ್
2. ವಾಲ್‌ಪರೈ : ಅಭಿವೃದ್ಧಿ ತಂದ ದುರಂತ – ಕೃಪಾಕರ ಸೇನಾನಿ, ಕೆ. ಪುಟ್ಟಸ್ವಾಮಿ
3. ಆಯ್ಕೆಯಿದೆ ನಮ್ಮ ಕೈಯಲ್ಲಿ – ನೇಮಿಚಂದ್ರ
4. ಕನ್ನಡವನ್ನು ಕಟ್ಟುವ ಕೆಲಸ – ಹಾ.ಮಾ. ನಾಯಕ
5. ಧಣಿಗಳ ಬೆಳ್ಳಿಲೋಟ – ಎಚ್. ನಾಗವೇಣಿ
6. ಬದುಕನ್ನು ಪ್ರೀತಿಸಿದ ಸಂತ – ಎಚ್.ಆರ್. ರಾಮಕೃಷ್ಣರಾವ್
7. ತಿರುಳ್ಗನ್ನಡದ ಬೆಳ್ನುಡಿ – ಮುದ್ದಣ
8. ಹಳ್ಳಿಯ ಚಹಾ ಹೋಟೇಲುಗಳು – ವೀರೇಂದ್ರ ಸಿಂಪಿ

**ದೀರ್ಘಗದ್ಯ :**

1. ಕೃಷ್ಣೇಗೌಡನ ಆನೆ – ಕೆ.ಪಿ. ಪೂರ್ಣಚಂದ್ರ ತೇಜಸ್ವಿ

**ರಚನೆ ಮತ್ತು ಭಾಷಾಭ್ಯಾಸ :**

1. 'ಪಲ್ಲವ' – ಕನ್ನಡ ಭಾಷಾ ಅಭ್ಯಾಸ ಪುಸ್ತಕ

**ಮಾದರಿ ಪ್ರಶ್ನೆಪತ್ರಿಕೆಗಳು :**

## : ಪದ್ಯಭಾಗ :

### 1. ಕದಡಿದ ಸಲಿಲಂ ತಿಳಿವಂದದೆ – ನಾಗಚಂದ್ರ

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ರಾವಣನ ಎದುರು ಪ್ರತ್ಯಕ್ಷವಾದ ವಿದ್ಯಾದೇವತೆ ಯಾರು? (ಜ್ಞಾನ)
2. ಲಕ್ಷ್ಮೀಧರ ಎಂದರೆ ಯಾರು? (ಜ್ಞಾನ)
3. ಯಾರನ್ನು ಕೊಲ್ಲುವುದಿಲ್ಲವೆಂದು ವಿದ್ಯಾದೇವತೆ ಹೇಳಿತು? (ಜ್ಞಾನ)
4. ರಾವಣನ ಅಂತಃಪುರದವರನ್ನು ಹಿಂಸಿಸಿದವರು ಯಾರು? (ಜ್ಞಾನ)
5. ಮಯತನೂಜೆ ಎಂದರೆ ಯಾರು? (ಜ್ಞಾನ)
6. ರಾವಣನು ಮಹಾಪೂಜೆಯನ್ನು ಎಲ್ಲಿ ಮಾಡಿಸಿದ? (ಜ್ಞಾನ)
7. ವಿಯಚ್ಚರಾಧಿಪ ಎಂದರೆ ಯಾರು? (ಜ್ಞಾನ)
8. ರಾವಣ ಸೀತೆಯನ್ನು ಎಲ್ಲಿರಿಸಿದ್ದನು? (ಜ್ಞಾನ)
9. ರಾವಣನ ಆಗಮನವನ್ನು ಸೀತೆಗೆ ತೋರಿದವರು ಯಾರು? (ಜ್ಞಾನ)
10. ರಾವಣನ ಮಾತು ಕೇಳಿ ಮೂರ್ಛೆ ಹೋದವರು ಯಾರು? (ಜ್ಞಾನ)
11. ಸೀತೆ ಯಾವುದನ್ನು ಹುಲ್ಲಿಗೆ ಸಮಾನ ಎಂದು ಭಾವಿಸಿದಳು? (ಜ್ಞಾನ)
12. ಸೀತೆಯ ಬಗ್ಗೆ 'ಅನುಕಂಪೆ' ಹುಟ್ಟಿದ್ದು ಯಾರಲ್ಲಿ? (ಜ್ಞಾನ)
13. ತನ್ನಿಂದ ತಾನೇ ತಿಳಿಯಾಗುವುದು ಯಾವುದು? (ಜ್ಞಾನ)
14. ರಾವಣನಿಗೆ ಯಾರ ಬಗ್ಗೆ ವೈರಾಗ್ಯ ಮೂಡಿತು? (ಜ್ಞಾನ)
15. ಪ್ರಾಣಪ್ರಿಯರು ಯಾರು? (ಜ್ಞಾನ)
16. ಸೀತೆಯನ್ನು ರಾವಣ ಯಾರಿಂದ ಬೇರ್ಪಡಿಸಿದ್ದನು? (ಜ್ಞಾನ)
17. ಪೌರುಷಪ್ರಣಯಿ ಯಾರು? (ಜ್ಞಾನ)
18. ವಿಭೀಷಣ ಯಾರು? (ಜ್ಞಾನ)
19. ರಾವಣನಿಗೆ ಹಿತವನ್ನು ಹೇಳಿದವರು ಯಾರು? (ಜ್ಞಾನ)
20. ಸೌಮಿತ್ರಿ ಯಾರು? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ಬಹುರೂಪಿಣೀ ವಿದ್ಯೆಯನ್ನು ರಾವಣ ಹೇಗೆ ಸಾಧಿಸಿದ? (ಗ್ರಹಿಕೆ)
2. ಬಹುರೂಪಿಣೀ ವಿದ್ಯೆ ರಾವಣನಿಗೆ ಏನೆಂದು ಆಶ್ವಾಸನೆಯಿತ್ತಿತು? (ಗ್ರಹಿಕೆ)
3. ರಾವಣ ತನ್ನ ಅಂತಃಪುರದ ಸ್ತ್ರೀಯರನ್ನು ಹೇಗೆ ಸಂತೈಸಿದನು? (ಗ್ರಹಿಕೆ)
4. ರಾವಣ ಜಾನಕಿಯನ್ನು ನೋಡಲು ಎಲ್ಲಿಗೆ? ಯಾರು ಬರುವಂತೆ ಬಂದನು? (ಗ್ರಹಿಕೆ)
5. ಸೀತೆಯ ತಲ್ಲಣಕ್ಕೆ ಕಾರಣವೇನು? (ಗ್ರಹಿಕೆ)
6. ರಾವಣನು ಸೊಕ್ಕಿನಿಂದ ಸೀತೆಯನ್ನುದ್ದೇಶಿಸಿ ಆಡಿದ ಮಾತುಗಳಾವುವು? (ಗ್ರಹಿಕೆ)
7. ಸೀತೆ ರಾವಣನನ್ನು ಏನೆಂದು ಬೇಡಿಕೊಂಡಳು? (ಗ್ರಹಿಕೆ)
8. ರವಿಗೂ–ರಾವಣನಿಗೂ ಇರುವ ಸಂಬಂಧವನ್ನು ಕವಿ ಹೇಗೆ ಹೋಲಿಸಿದ್ದಾನೆ? (ಗ್ರಹಿಕೆ)
9. ರಾವಣ ತನ್ನನ್ನು 'ಅವಿವೇಕಿ' ಎಂದು ಏಕೆ ಕರೆದುಕೊಂಡ? (ಗ್ರಹಿಕೆ)
10. ವ್ಯಸನಿಗಳು ಏನೇನೆಲ್ಲವನ್ನು ನಿರ್ಲಕ್ಷಿಸುತ್ತಾರೆ? (ಗ್ರಹಿಕೆ)
11. ರಾವಣನು ತನ್ನ ಆಪ್ತರನ್ನು ಕುರಿತು ಏನೆಂದು ಹೇಳಿದ? (ಗ್ರಹಿಕೆ)
12. ಈಗಲೇ ಸೀತೆಯನ್ನು ರಾಮನಿಗೊಪ್ಪಿಸಲು ರಾವಣ ಬಯಸಲಿಲ್ಲವೇಕೆ? (ಗ್ರಹಿಕೆ)
13. ರಾವಣ ಅಂತಿಮವಾಗಿ ಯಾವ ನಿರ್ಧಾರಕ್ಕೆ ಬರುತ್ತಾನೆ? (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. ಉಳಿದವರಳಿವೆನಗೇವುದು? (ಅಭಿವ್ಯಕ್ತಿ)
2. ನೋಡಿದಂ ಮಯತನೂಜೆಯ ಬಾಡಿದ ವಕ್ತ್ರಪದ್ಮಮಂ. (ಅಭಿವ್ಯಕ್ತಿ)
3. ಸಮಧಿಕರಾರ್ ಜಗತ್ತ್ರಯದೊಳಿನ್ನೆನಗೆ? (ಅಭಿವ್ಯಕ್ತಿ)
4. ಅರಲಂಬುಗಳಿಲ್ಲದ ಕಾಮನೆಂಬಿನಂ. (ಅಭಿವ್ಯಕ್ತಿ)
5. ಏನಂ ಕೇಳ್ದಪೆನೋ.... ಪೊಲ್ಲವಾರ್ತೆಯನ್. (ಅಭಿವ್ಯಕ್ತಿ)
6. ಅಸಾಧ್ಯಮಪ್ಪ ಮರುವಕ್ಕಮಿಲ್ಲ. (ಅಭಿವ್ಯಕ್ತಿ)
7. ರಘುತನೂಜನ ಆಯುಃಪ್ರಾಣಂ ಬರೆಗಂ ಬಾರದಿರು. (ಅಭಿವ್ಯಕ್ತಿ)
8. ಕದಡಿದ ಸಲಿಲಂ ತಿಳಿವಂದದೆ. (ಅಭಿವ್ಯಕ್ತಿ)
9. ಉದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ. (ಅಭಿವ್ಯಕ್ತಿ)
10. ಅಪೇಕ್ಷಿಸುವೆನೇ ಗುಣಹಾನಿಯನೆನ್ನ ಪಾಪದಿಂ. (ಅಭಿವ್ಯಕ್ತಿ)
11. ಕಂದರ್ಪ ವಿಮೋಹದಿಂದಗಲ್ಚಿದೆ. (ಅಭಿವ್ಯಕ್ತಿ)
12. ಹಿತಾಹಿತ ಚಿಂತೆಯನೇಕೆ ಮಾಡುವಂ. (ಅಭಿವ್ಯಕ್ತಿ)
13. ಬೆಸನಿಗಳಾರುಮೆತ್ತಲರಿವರ್. (ಅಭಿವ್ಯಕ್ತಿ)
14. ರಣಾಗ್ರದೊಳ್ ಪಿಡಿದು ತಂದಾಂ ಕೊಟ್ಟಪೆಂ. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭವನ್ನು ವಿವರವಾಗಿ ಬರೆಯಿರಿ. (ಪ್ರಶಂಸೆ)
2. ಪ್ರಮದವನದಲ್ಲಿ ರಾವಣ–ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ. (ಪ್ರಶಂಸೆ)
3. ರಾವಣನ ಮನಃಪರಿವರ್ತನೆಯ ಸಂದರ್ಭವನ್ನು ಕವಿ ಹೇಗೆ ಚಿತ್ರಿಸಿದ್ದಾನೆ? ವಿವರಿಸಿ. (ಪ್ರಶಂಸೆ)
4. ವಿಭೀಷಣನ ಬಗೆಗೆ ರಾವಣನ ಪಶ್ಚಾತ್ತಾಪವನ್ನು ವಿವರಿಸಿ. (ಪ್ರಶಂಸೆ)
5. ರಾವಣನಲ್ಲಿ ಕಂಡುಬರುವ ಪಶ್ಚಾತ್ತಾಪವನ್ನು ಕವಿ ಹೇಗೆ ನಿರೂಪಿಸಿದ್ದಾನೆ? (ಪ್ರಶಂಸೆ)
6. 'ಕದಡಿದ ಸಲಿಲಂ ತಿಳಿವಂದದೆ' ಕಾವ್ಯಭಾಗದಲ್ಲಿ ಬರುವ ರಾವಣನ ವ್ಯಕ್ತಿತ್ವವನ್ನು ವಿಮರ್ಶಿಸಿ, ನಿಮ್ಮ ಮಾತುಗಳಲ್ಲಿ ಉತ್ತರಿಸಿ. (ಪ್ರಶಂಸೆ)

******

## 2.1. ಬಸವಣ್ಣನವರ ವಚನಗಳು

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ತನು ಯಾವಾಗ ಕರಗಬೇಕು? (ಜ್ಞಾನ)
2. ಯಾರ ಕೈಯಲ್ಲಿ ಚಂದ್ರಾಯುಧವಿದ್ದು ಫಲವಿಲ್ಲ? (ಜ್ಞಾನ)
3. ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ? (ಜ್ಞಾನ)
4. ಮಾಣಿಕ್ಯ ಯಾರ ಕೈಯಲ್ಲಿದ್ದು ಫಲವಿಲ್ಲ? (ಜ್ಞಾನ)
5. ಶಿವ ಪಥವನ್ನು ಅರಿಯದಿದ್ದರೆ ಏನಾಗುವುದು? (ಜ್ಞಾನ)
6. ಯಾವುದು ಹತ್ತಿ ಉರಿದಡೆ ನಿಲಲುಬಾರದು? (ಜ್ಞಾನ)
7. ಬಸವಣ್ಣನವರ ವಚನಾಂಕಿತ ಯಾವುದು? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ಯಾವ ಗುಣಗಳಿಲ್ಲದವನು ಡಾಂಭಿಕನೆನಿಸುತ್ತಾನೆ? (ಗ್ರಹಿಕೆ)
2. ಹಂದೆ ಮತ್ತು ಅಂಧಕನ ಕೈಯಲ್ಲಿ ಏನೇನು ಇದ್ದು ಫಲವಿಲ್ಲ? (ಗ್ರಹಿಕೆ)
3. ಶಿವಪಥವನ್ನು ಅರಿಯದವನನ್ನು ಹೇಗೆ ವಿಡಂಬಿಸಲಾಗಿದೆ? (ಗ್ರಹಿಕೆ)
4. ಯಾವಾಗ ನಿಲಬಹುದು? ಯಾವಾಗ ನಿಲಲಾಗದು? (ಗ್ರಹಿಕೆ)

5. ಏರಿ ಮತ್ತು ಬೇಲಿಯ ಕರ್ತವ್ಯವೇನು? (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. ಎನ್ನಲ್ಲಿ ಇವಿಲ್ಲಾಗಿ ಆನು ಡಂಬಕ ಕಾಣಿರೇ. (ಅಭಿವ್ಯಕ್ತಿ)
2. ಅರ್ಥರೇಖೆಯಿದ್ದಲ್ಲಿ ಫಲವೇನು, ಆಯುಷ್ಯರೇಖೆ ಇಲ್ಲದನ್ನಕ್ಕ. (ಅಭಿವ್ಯಕ್ತಿ)
3. ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು? (ಅಭಿವ್ಯಕ್ತಿ)
4. ಧರೆಹತ್ತಿ ಉರಿದರೆ ನಿಲಲುಬಾರದು. (ಅಭಿವ್ಯಕ್ತಿ)
5. ತಾಯ ಮೊಲೆವಾಲು ನಂಜಾಗಿ ಕೊಲುವಡೆ. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ಬಸವಣ್ಣನವರ ಪ್ರಕಾರ ನೈಜಭಕ್ತಿಯ ಲಕ್ಷಣಗಳಾವುವು? (ಪ್ರಶಂಸೆ)
2. ಶಿವಪಥವನ್ನರಿಯದವನ ಭಕ್ತಿ ನಿರರ್ಥಕವೆಂಬುದನ್ನು ಬಸವಣ್ಣನವರು ಯಾವ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ?(ಪ್ರಶಂಸೆ)
3. ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ? (ಪ್ರಶಂಸೆ)
4. ಬಸವಣ್ಣನವರ ವಚನಗಳ ಆಶಯವೇನು? (ಪ್ರಶಂಸೆ)

******

## 2.2 ಉರಿಲಿಂಗಪೆದ್ದಿಯ ವಚನಗಳು

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ಉರಿಲಿಂಗಪೆದ್ದಿಯ ವಚನಗಳ ಅಂಕಿತ ಯಾವುದು? (ಜ್ಞಾನ)
2. ಯಾವುದರಿಂದ ಪರಿಮಳವನ್ನು ಅರಿಯಬಹುದು? (ಜ್ಞಾನ)
3. ಮಹಾಘನ ನಿರಾಳ ಪರಶಿವನಿಂದ ಏನು ತೋರಿತು? (ಜ್ಞಾನ)
4. ಗುರು ಲಘುವರ್ತನದಲ್ಲಿ ವರ್ತಿಸಿದರೆ ಏನು ಆಗದು? (ಜ್ಞಾನ)
5. ಯಾರು ಅನ್ಯಲಿಂಗವನ್ನು ನೆನೆಯುವುದಿಲ್ಲ? (ಜ್ಞಾನ)
6. ಗುರು ಹೇಗೆ ವರ್ತಿಸಬಾರದು? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ಸೂರ್ಯ ಮತ್ತು ದೀಪಗಳಿಂದಾಗುವ ಉಪಯೋಗಗಳಾವವು? (ಗ್ರಹಿಕೆ)
2. ಯಾರು ಮನೆಮನೆಯನ್ನು ತಿರಿಯನು? ಕೆರೆಯುದಕವನ್ನರಸದವನು ಯಾರು? (ಗ್ರಹಿಕೆ)
3. ಗುರುವಿನ ಲಕ್ಷಣಗಳಾವುವು? (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. ಪುಷ್ಪವಿಲ್ಲದೆ ಪರಿಮಳವನ್ನರಿಯಬಹುದೆ. (ಅಭಿವ್ಯಕ್ತಿ)
2. ತೊರೆಯೊಳಗಿದ್ದವನು ತೃಷೆಯಾಗಲರಸುವನೆ ಕೆರೆಯುದಕವ. (ಅಭಿವ್ಯಕ್ತಿ)
3. ಅನ್ಯ ಲಿಂಗಗಳ ನೆನೆವನೆ ನಿಮ್ಮ ಭಕ್ತನು. (ಅಭಿವ್ಯಕ್ತಿ)
4. ಲಘು ಗುರುವಪ್ಪನೇ? ಗುರು ಲಘುವಪ್ಪನೇ? (ಅಭಿವ್ಯಕ್ತಿ)
5. ತಾನೆ ಲಘುಮಾಡಿ ಲಘುವಾದನಯ್ಯ. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ಮಂಗಳ ಲಿಂಗದ ಮಹತ್ವವನ್ನು ಹೇಗೆ ವಿವರಿಸಲಾಗಿದೆ? (ಪ್ರಶಂಸೆ)
2. ಗುರು ಲಘುವರ್ತನದಲ್ಲಿ ಏಕೆ ವರ್ತಿಸಬಾರದು? (ಪ್ರಶಂಸೆ)
3. ಉರಿಲಿಂಗಪೆದ್ದಿಯ ವಚನಗಳ ಆಶಯವೇನು? (ಪ್ರಶಂಸೆ)

******

## 3. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು –ಕುಮಾರವ್ಯಾಸ

### ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

1. ಧರ್ಮರಾಯನಿಗೆ ಎಂಥ ಗರ ಹೊಡೆದಿದೆ? (ಜ್ಞಾನ)
2. ಅಣ್ಣನಾಜ್ಞೆಯಲಿ ಭ್ರಮಿತನಾದವನು ಯಾರು? (ಜ್ಞಾನ)
3. ಪಾಂಚಾಲನಂದನೆ ಯಾರು? (ಜ್ಞಾನ)
4. ರಾಜಸಭೆಯೊಳಗೆ ದ್ರೌಪದಿಯನ್ನು ಒದೆದವರು ಯಾರು? (ಜ್ಞಾನ)
5. ಭೀಮನಿಗೆ ಯಾರ ಆಜ್ಞೆಯ ಭಯವಿದೆ? (ಜ್ಞಾನ)
6. ಯಾರನ್ನು ಯಮಲೋಕಕ್ಕೆ ಕಳಿಸಲು ದ್ರೌಪದಿ ಭೀಮನಿಗೆ ಹೇಳುತ್ತಾಳೆ? (ಜ್ಞಾನ)
7. 'ಗಂಡರೋ ನೀವ್ ಭಂಡರೋ' ಎಂದು ಕೇಳಿದವರಾರು? (ಜ್ಞಾನ)
8. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು ಎಂದವರಾರು? (ಜ್ಞಾನ)
9. ದ್ರೌಪದಿಯನ್ನು ಮಂದೆಗೆಳೆಸಿದ ಪಾಪಿ ಯಾರು? (ಜ್ಞಾನ)
10. ದ್ರೌಪದಿ ಎಷ್ಟು ಬಾರಿ ಅವಮಾನಕ್ಕೆ ಒಳಗಾಗಿದ್ದೇನೆಂದು ಹೇಳಿದ್ದಾಳೆ? (ಜ್ಞಾನ)
11. ಅರಣ್ಯವಾಸದಲ್ಲಿದ್ದಾಗ ದ್ರೌಪದಿಯನ್ನು ಎಳೆದೊಯ್ದವರಾರು? (ಜ್ಞಾನ)
12. ಮನದೊಳಗೆ ಹಗೆಗಳನು ಹಿಂಡಿದವರಾರು? (ಜ್ಞಾನ)
13. ಯಾರ ಬಸುರನ್ನು ಬಗೆಯುವುದಾಗಿ ಭೀಮ ಹೇಳುತ್ತಾನೆ? (ಜ್ಞಾನ)

### ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

1. ಭೀಮನೇ ಮಿಡುಕುಳ್ಳ ಗಂಡನೆಂದು ದ್ರೌಪದಿ ಏಕೆ ಭಾವಿಸಿದಳು? (ಗ್ರಹಿಕೆ)
2. ಕೊಲಲಕ್ಷಮರೆಂದು ದ್ರೌಪದಿ ಯಾರನ್ನು ಕುರಿತು ಹೇಳಿದ್ದಾಳೆ? (ಗ್ರಹಿಕೆ)
3. ನಿದ್ದೆಯಿಂದ ಎಬ್ಬಿಸುವ ಕ್ಷಣ ಭೀಮನ ಪ್ರತಿಕ್ರಿಯೆ ಹೇಗಿರಬಹುದೆಂದು ದ್ರೌಪದಿ ಯೋಚಿಸುತ್ತಾಳೆ? (ಗ್ರಹಿಕೆ)
4. ಮಲಗಿರುವ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು? (ಗ್ರಹಿಕೆ)
5. ತಾನು ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಏಕೆ ಹೇಳುತ್ತಾಳೆ? (ಗ್ರಹಿಕೆ)
6. ಉಳಿದ ನಾಲ್ವರು ಪಾಂಡವರ ಭಿನ್ನ ಸ್ವಭಾವಗಳ ಬಗ್ಗೆ ದ್ರೌಪದಿಯ ಅಭಿಪ್ರಾಯವೇನು? (ಗ್ರಹಿಕೆ)
7. ಗಂಡರೈವರು ಮೂರುಲೋಕದ ಗಂಡರಾರು? ಹೆಸರಿಸಿ. (ಗ್ರಹಿಕೆ)
8. ಹೆಂಡತಿಯ ಹರಿಬಕ್ಕಾಗಿ ಗಂಡುಗೂಸು ಏನು ಮಾಡುತ್ತಾನೆ? (ಗ್ರಹಿಕೆ)
9. ತೋಳಹೊರೆ ನಿಮಗೇಕೆ ಎಂದು ದ್ರೌಪದಿ ಹೇಳಲು ಕಾರಣವೇನು? (ಗ್ರಹಿಕೆ)

### ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):

1. ಎನ್ನವೊಲು ಮುನ್ನಾರು ನವೆದವರುಂಟು. (ಅಭಿವ್ಯಕ್ತಿ)
2. ಯಮಸುತಂಗರುಹುವೆನೆ ಧರ್ಮಕ್ಷಮೆಯ ಗರಹೊಡೆದಿಹುದು. (ಅಭಿವ್ಯಕ್ತಿ)
3. ಕಲಿ ಭೀಮನೇ ಮಿಡುಕುಳ್ಳ ಗಂಡನು. (ಅಭಿವ್ಯಕ್ತಿ)
4. ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ. (ಅಭಿವ್ಯಕ್ತಿ)
5. ನೀನಲ್ಲದುಳಿದವರುಚಿತ ಬಾಹಿರರು. (ಅಭಿವ್ಯಕ್ತಿ)
6. ಕೆಲಬರು ಗಳಿಸಿದೊಡೆ ಕೆಲರುಂಡು ಜಾರುವರು. (ಅಭಿವ್ಯಕ್ತಿ)
7. ಒಬ್ಬಳನಾಳಲಾರಿರಿ ಗಂಡರೋ ನೀವ್ ಭಂಡರೋ. (ಅಭಿವ್ಯಕ್ತಿ)
8. ರಾಯನಾಜ್ಞೆಯ ಕಣ್ಣಿಯಲಿ ಬಿಗಿವಡೆದು ಕೆಡೆದೆವು. (ಅಭಿವ್ಯಕ್ತಿ)
9. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು ಭಂಗಿತರು. (ಅಭಿವ್ಯಕ್ತಿ)
10. ಕೂಳುಗೇಡಿಂಗೊಡಲ ಹೊರುವಿರಿ. (ಅಭಿವ್ಯಕ್ತಿ)
11. ಹಗೆಗಳನು ಹಿಂಡಿದನು ಮನದೊಳಗೆ. (ಅಭಿವ್ಯಕ್ತಿ)
12. ಎಮ್ಮಣ್ಣನಾಜ್ಞೆಯ ಗೆರೆಯ ದಾಂಟಿದೆ ದಾಂಟಿದೆನು. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು? (ಪ್ರಶಂಸೆ)
2. ತನಗಾದ ಅವಮಾನವನ್ನು ದ್ರೌಪದಿ ಭೀಮನಿಗೆ ಹೇಳಿಕೊಂಡ ಬಗೆಯನ್ನು ವಿವರಿಸಿ. (ಪ್ರಶಂಸೆ)
3. ಭೀಮನು ದ್ರೌಪದಿಯನ್ನು ಹೇಗೆ ಸಂತೈಸಿದನು? (ಪ್ರಶಂಸೆ)
4. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿರಿ. (ಪ್ರಶಂಸೆ)
5. ದ್ರೌಪದಿಯ ಪಾತ್ರದ ಹಿನ್ನೆಲೆಯಲ್ಲಿ ಹೆಣ್ಣಿನ ಅಸಹಾಯಕತೆ ಹಾಗೂ ಶೋಷಣೆಯ ರೂಪಗಳನ್ನು ವಿವರಿಸಿ. (ಪ್ರಶಂಸೆ)
6. ತನಗೊದಗಿದ ಅಪಾಯವನ್ನು ನಿವಾರಿಸಿಕೊಳ್ಳುವ ದ್ರೌಪದಿಯ ಜಾಣ್ಮೆಯನ್ನು ವಿವರಿಸಿ. (ಪ್ರಶಂಸೆ)
7. ಈ ಕಾವ್ಯಭಾಗದಲ್ಲಿ ಮೂಡಿಬಂದಿರುವ ಭೀಮ–ದ್ರೌಪದಿಯರ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ. (ಪ್ರಶಂಸೆ)

******

## 4. ಪಗೆಯಂ ಬಾಲಕನೆಂಬರೇ – ಪುಲಿಗೆರೆ ಸೋಮನಾಥ

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ಜ್ಞಾನವನ್ನು ಸಂಪಾದಿಸಿದಾಗ ಮನುಷ್ಯ ಏನಾಗುತ್ತಾನೆ? (ಜ್ಞಾನ)
2. ಹಲವು ಹಳ್ಳಗಳು ಸೇರಿ ಏನಾಗುತ್ತದೆ? (ಜ್ಞಾನ)
3. ಎಂತಹ ಧನ ವ್ಯರ್ಥವಾಗುತ್ತದೆ? (ಜ್ಞಾನ)
4. ನಿಷ್ಪ್ರಯೋಜಕನಾದ ಮಗ ಯಾರು? (ಜ್ಞಾನ)
5. ಯಾವಾಗ ಮಳೆ ಬಂದರೆ ಪ್ರಯೋಜನವಿಲ್ಲ? (ಜ್ಞಾನ)
6. ಯಾವುದನ್ನು ಚಿಕ್ಕದೆಂದು ಮುಟ್ಟಬಾರದು? (ಜ್ಞಾನ)
7. ಸಾಕುವುದಕ್ಕೆ ವಿಶ್ವಾಸಿಯಲ್ಲದ ಜಂತು ಯಾವುದು? (ಜ್ಞಾನ)
8. ಪಕ್ಷಿಯನ್ನು ಸಾಕುತ್ತೇನೆಂದು ಯಾವ ಪಕ್ಷಿಯನ್ನು ಸಂಪ್ರೀತಿಯಿಂದ ಸಾಕುವುದಿಲ್ಲ? (ಜ್ಞಾನ)
9. ಹಗೆಯನ್ನು ಏನೆಂದು ಉಪೇಕ್ಷಿಸಬಾರದೆಂದು ಸೋಮನಾಥನು ಹೇಳಿದ್ದಾನೆ? (ಜ್ಞಾನ)
10. ಅರೆಯನ್ನು ಸೀಳಲು ಬಳಸುವ ಸಾಧನ ಯಾವುದು? (ಜ್ಞಾನ)
11. ಉಪಾಯಬಲ್ಲ ಒಬ್ಬನು ಎಷ್ಟು ಜನರಿಗೆ ಸಮಾನನಾಗುತ್ತಾನೆ? (ಜ್ಞಾನ)
12. ಸನ್ನೆ ಎಂತಹ ಸತ್ವವನ್ನೊಳಗೊಂಡಿದೆ? (ಜ್ಞಾನ)
13. ವೀರನಾದವನು ಏನನ್ನು ಬಲ್ಲವನಾಗಿರಬೇಕೆಂದು ಸೋಮನಾಥನು ಹೇಳಿದ್ದಾನೆ? (ಜ್ಞಾನ)
14. ರಾಜನಾದವನು ಏನನ್ನು ತೊರೆಯಬೇಕು? (ಜ್ಞಾನ)
15. ಯಾರನ್ನು ಯೋಗಿ ಎನ್ನಬಹುದು? (ಜ್ಞಾನ)
16. ಲೋಕದಲ್ಲಿ ನಿಜವಾದ ಮಡಿ ಯಾವುದು? (ಜ್ಞಾನ)
17. ಪುಲಿಗೆರೆ ಸೋಮನಾಥನ ಅಂಕಿತ ಯಾವುದು? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ಯಾರಿಂದ ಯಾವುದನ್ನು ಹೇಗೆ ಕಲಿಯಬೇಕೆಂದು ಸೋಮನಾಥನು ಹೇಳಿದ್ದಾನೆ? (ಗ್ರಹಿಕೆ)
2. ಧನ ಮತ್ತು ಸುತನ ವಿಷಯದಲ್ಲಿ ಸೋಮನಾಥನ ಅಭಿಪ್ರಾಯವೇನು? (ಗ್ರಹಿಕೆ)
3. ಮಳೆ ಮತ್ತು ಬಂಧುಗಳ ವಿಚಾರದಲ್ಲಿ ಸೋಮನಾಥ ಕವಿ ಏನು ಹೇಳಿದ್ದಾನೆ? (ಗ್ರಹಿಕೆ)
4. ಚಾಣ ಮತ್ತು ಸನ್ನೆ ಇವುಗಳ ಉಪಯೋಗವೇನು? (ಗ್ರಹಿಕೆ)
5. ರಾಜ ಮತ್ತು ಮಂತ್ರಿಗಳಿಗೆ ಯಾವ ಅರ್ಹತೆಗಳಿರಬೇಕೆಂದು ಸೋಮನಾಥನು ಹೇಳಿದ್ದಾನೆ? (ಗ್ರಹಿಕೆ)
6. ವೀರ ಮತ್ತು ಯೋಗಿಗೆ ಯಾವ ಗುಣಗಳಿರಬೇಕು? (ಗ್ರಹಿಕೆ)
7. ಶುಚಿ ಮತ್ತು ಸ್ವಾದಗಳನ್ನು ಕುರಿತು ಸೋಮನಾಥನ ಅಭಿಪ್ರಾಯಗಳೇನು? (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. ಕೆಲವಂ ಬಲ್ಲವರಿಂದ ಕಲ್ತು. (ಅಭಿವ್ಯಕ್ತಿ)
2. ಪಲವುಂ ಪಳ್ಳ ಸಮುದ್ರವೈ. (ಅಭಿವ್ಯಕ್ತಿ)

3. ಆಪತ್ತಿನೊಳ್ ಮಣಿದು ನೋಡದ ಬಂಧುವೇತಕೆ. (ಅಭಿವ್ಯಕ್ತಿ)
4. ಕಾಲೋಚಿತಕ್ಕೈದಿದಾ ತೃಣವೇ ಪರ್ವತವಲ್ಲವೇ. (ಅಭಿವ್ಯಕ್ತಿ)
5. ಚೇಳ್ ಚಿಕ್ಕದೆಂದಳ್ಕರಿಂ ತೆಗೆಯಲ್ ಕಚ್ಚದೇ. (ಅಭಿವ್ಯಕ್ತಿ)
6. ಪಗೆಯಂ ಬಾಲಕನೆಂಬರೆ. (ಅಭಿವ್ಯಕ್ತಿ)
7. ಸನ್ನೆ ಸಾವಿರ ಕಾಲಾಳಿನ ಸತ್ವವೈ. (ಅಭಿವ್ಯಕ್ತಿ)
8. ಲೋಕದೊಳ್ ಮಡಿಯೇ ನಿರ್ಮಲ ಚಿತ್ತವೈ. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ಜ್ಞಾನವನ್ನು ಹೊಂದುವ ಮಾರ್ಗ ಯಾವುದೆಂಬುದನ್ನು ಕವಿ ಹೇಗೆ ವಿವರಿಸಿದ್ದಾನೆ? (ಪ್ರಶಂಸೆ)
2. ಸಕಾಲಕ್ಕೆ ಒದಗುವ ಸಹಾಯವೇ ಶ್ರೇಷ್ಠ ಎಂಬುದನ್ನು ಕವಿ ಹೇಗೆ ತಿಳಿಸಿದ್ದಾನೆ? (ಪ್ರಶಂಸೆ)
3. ಯಾವ ಯಾವ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ? (ಪ್ರಶಂಸೆ)
4. ವೀರ, ಮಂತ್ರಿ, ರಾಜ, ಯೋಗಿಗೆ ಇರಬೇಕಾದ ಅರ್ಹತೆಗಳೇನು? (ಪ್ರಶಂಸೆ)
5. ನಿರ್ಮಲಚಿತ್ತದ ಅಗತ್ಯವನ್ನು ಸೋಮನಾಥ ಕವಿ ಹೇಗೆ ನಿರೂಪಿಸಿದ್ದಾನೆ? (ಪ್ರಶಂಸೆ)

******

## 5. ಜಾಲಿಯ ಮರದಂತೆ – ಪುರಂದರದಾಸರು

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ಜಾಲಿಯ ಮರದಂತಿರುವವರು ಯಾರು? (ಜ್ಞಾನ)
2. ಧರೆಯೊಳಗೆ ದುರ್ಜನರು ಯಾವ ರೀತಿ ಇದ್ದಾರೆ? (ಜ್ಞಾನ)
3. ಜಾಲಿಯ ಮರ ಯಾರಿಗೆ ನೆರಳು ಕೊಡುವುದಿಲ್ಲ? (ಜ್ಞಾನ)
4. ಜಾಲಿಯ ಮರ ಯಾರಿಗೆ ಹಣ್ಣು ಕೊಡುವುದಿಲ್ಲ? (ಜ್ಞಾನ)
5. ಜಾಲಿಯಲ್ಲಿ ಯಾವುದರ ವಾಸನೆಯಿಲ್ಲ? (ಜ್ಞಾನ)
6. ಜಾಲಿಯ ರಸಾಸ್ವಾದ ಹೇಗಿರುತ್ತದೆ? (ಜ್ಞಾನ)
7. ದುರ್ಗಂಧ ಬಿಡದಿರುವುದು ಯಾವುದು? (ಜ್ಞಾನ)
8. ತತ್ವಜ್ಞಾನವನ್ನು ಕೇಳದವರು ಯಾರು? (ಜ್ಞಾನ)
9. ಘೋರಪಾಪಿ ಯಾವುದನ್ನು ಬಿಡುವುದಿಲ್ಲ? (ಜ್ಞಾನ)
10. ಯಾವ ಮಾತಿಗೆ ಕೊನೆಯಿಲ್ಲವೆಂದು ಪುರಂದರದಾಸರು ಹೇಳಿದ್ದಾರೆ? (ಜ್ಞಾನ)
11. ಜಾಲಿಯ ಮುಳ್ಳು ಹೇಗೆ ಆವರಿಸುತ್ತದೆ? (ಜ್ಞಾನ)
12. ಪುರಂದರದಾಸರ ಕೀರ್ತನೆಗಳ ಅಂಕಿತ ಯಾವುದು? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ಜಾಲಿಯ ಮರದ ನಿರರ್ಥಕತೆಯನ್ನು ಪುರಂದರದಾಸರು ಹೇಗೆ ತಿಳಿಸಿದ್ದಾರೆ? (ಗ್ರಹಿಕೆ)
2. ಯಾರಿಗೆ ಷಡ್ರಸಾನ್ನವನಿಕ್ಕಿ ಉಪಯೋಗವಿಲ್ಲ? ಏಕೆ? (ಗ್ರಹಿಕೆ)
3. ಯಾರಿಗೆ ತತ್ವಜ್ಞಾನವನ್ನು ಹೇಳಿ ಪ್ರಯೋಜನವಿಲ್ಲ? (ಗ್ರಹಿಕೆ)
4. ದುರ್ಜನರ ಕಾರ್ಯ ಯಾವ ಬಗೆಯದು? (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತೆ. (ಅಭಿವ್ಯಕ್ತಿ)
2. ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ. (ಅಭಿವ್ಯಕ್ತಿ)

3. ನಾರುವ ದುರ್ಗಂಧ ಬಿಡಬಲ್ಲುದೆ. (ಅಭಿವ್ಯಕ್ತಿ)
4. ಬಿನ್ನಾಣದ ಮಾತಿಗೆ ಕೊನೆಯಿಲ್ಲ. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ಜಾಲಿಯ ಮರವು ನಿರುಪಯುಕ್ತವೆಂಬುದನ್ನು ಪುರಂದರದಾಸರು ಹೇಗೆ ನಿರೂಪಿಸಿದ್ದಾರೆ? (ಪ್ರಶಂಸೆ)
2. ಜಾಲಿಮರ ಮತ್ತು ದುರ್ಜನರನ್ನು ಸಮೀಕರಿಸಿರುವುದರ ಔಚಿತ್ಯವನ್ನು ಚರ್ಚಿಸಿ. (ಪ್ರಶಂಸೆ)
3. ಸಮಾಜಕಂಟಕರ ಬಗೆಗೆ ಪುರಂದರದಾಸರ ಅಭಿಪ್ರಾಯಗಳನ್ನು ಸಂಗ್ರಹಿಸಿರಿ. (ಪ್ರಶಂಸೆ)

******

## 6. ಹಬ್ಬುಲಿ ಅವರ ರಸಬಳ್ಳಿ – ಜನಪದ

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ಬಡತನ ಬಂದರ ಯಾರನ್ನು ಬಡಿಯಬೇಡವೆಂದು ಜನಪದರು ಹೇಳುತ್ತಾರೆ? (ಜ್ಞಾನ)
2. ಉತ್ತಮರ ಗೆಳೆತನ ಹೇಗೆ ಇರಬೇಕು? (ಜ್ಞಾನ)
3. ಮಂದಿ ಮಕ್ಕಳೊಂದಿಗೆ ಹೇಗಿರಬೇಕು? (ಜ್ಞಾನ)
4. ಎಂತಹ ನೆರೆಯವರು ಇರಬೇಕು? (ಜ್ಞಾನ)
5. ಸುಟ್ಟು ಸುಣ್ಣದ ಹರಳಾದದ್ದು ಯಾವುದು? (ಜ್ಞಾನ)
6. ಬ್ಯಾಸಗಿ ದಿವಸಕ್ಕ ಯಾವ ಮರ ತಂಪು? (ಜ್ಞಾನ)
7. ತಾಯಿಯನ್ನ ಯಾವುದಕ್ಕೆ ಹೋಲಿಸಲಾಗಿದೆ? (ಜ್ಞಾನ)
8. ಹೆಣ್ಣು ಮಕ್ಕಳ ದುಃಖವನ್ನು ಯಾರು ಬಲ್ಲರು? (ಜ್ಞಾನ)
9. ನೀರಿಲ್ಲದ ಕೆರೆಗೆ ಬಂದು ತಿರುಗಿ ಹೋಗುವುದು ಏನು? (ಜ್ಞಾನ)
10. ಗರತಿಯು ಹಾಲುಂಡ ತವರಿಗೆ ಏನೆಂದು ಹರಸುತ್ತಾಳೆ? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ಬಡತನ ಹೇಗೆ ಬಯಲಾಯಿತು? (ಗ್ರಹಿಕೆ)
2. ಹಿತ್ತಾಳೆಗಿಂತ ಬಲುಹೀನ ಯಾವುದು? (ಗ್ರಹಿಕೆ)
3. ಇದ್ದಷ್ಟು ಬುದ್ಧಿಯನ್ನು ಹೇಗೆ ಕಳೆದುಕೊಳ್ಳುತ್ತಾರೆ? (ಗ್ರಹಿಕೆ)
4. ಕಣ್ಣೆಂಜಲು, ಬಾಯೆಂಜಲು ಯಾವುದು? (ಗ್ರಹಿಕೆ)
5. ಹಡೆದವ್ವನನ್ನು ಯಾವಾಗ ನೆನೆಯಬೇಕು? (ಗ್ರಹಿಕೆ)
6. ಹಡೆದ ತಂದೆ–ತಾಯಿಯ ಮಹತ್ವ ತಿಳಿಸಿರಿ. (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. ಬಂಗಾರ ನಿನಗ ಸ್ಥಿರವಲ್ಲ. (ಅಭಿವ್ಯಕ್ತಿ)
2. ಬಡತನವೆಲ್ಲ ಬಯಲಾಗ. (ಅಭಿವ್ಯಕ್ತಿ)
3. ಹಿತ್ತಾಳೆಗಿಂತ ಬಲುಹೀನ. (ಅಭಿವ್ಯಕ್ತಿ)
4. ನೀ ತಂಪ ನನ್ನ ತವರೀಗಿ. (ಅಭಿವ್ಯಕ್ತಿ)
5. ಜ್ಯೋತಿ ನಿನ್ಯಾರ ಹೋಲರ. (ಅಭಿವ್ಯಕ್ತಿ)
6. ಬಾಳ ಮರುಗ್ಯಾಳ ಮನದಾಗ. (ಅಭಿವ್ಯಕ್ತಿ)
7. ನೀರಿಲ್ಲದ ಕೆರೆಗೆ ಕರುಬಂದು. (ಅಭಿವ್ಯಕ್ತಿ)
8. ಹಬ್ಬುಲಿ ಅವರ ರಸಬಳ್ಳಿ. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. 'ಬಂಗಾರ ನಿನಗ ಸ್ಥಿರವಲ್ಲ' ಎಂಬ ಮಾತಿನ ಸ್ವಾರಸ್ಯವನ್ನು ವಿವರಿಸಿರಿ. (ಪ್ರಶಂಸೆ)
2. ಜನಪದರು ಹೇಳುವಂತೆ ನೆರೆಹೊರೆಯವರು ಹೇಗಿರಬೇಕು? ವಿವರಿಸಿರಿ. (ಪ್ರಶಂಸೆ)
3. ಹೆಣ್ಣು ಮಕ್ಕಳ ದುಃಖವನ್ನು ಬಲ್ಲವರು ಯಾರು? ಹೇಗೆ? (ಪ್ರಶಂಸೆ)
4. ಗರತಿಯು ತವರಿಗೆ ಏನೆಂದು ಹರಸುತ್ತಾಳೆ? (ಪ್ರಶಂಸೆ)
5. ಜನಪದರು ತಾಯಿ–ತವರಿನ ಬಗೆಗೆ ಇರಿಸಿಕೊಂಡ ಪ್ರೀತಿ ಎಂತಹದು? (ಪ್ರಶಂಸೆ)
6. ಜನಪದರು ಬಾಳಿ ಬದುಕಿದ ರೀತಿಯನ್ನು ತ್ರಿಪದಿಗಳ ಹಿನ್ನೆಲೆಯಲ್ಲಿ ವಿವರಿಸಿ. (ಪ್ರಶಂಸೆ)

******

## 7. ಬೆಳಗು ಜಾವ – ದ.ರಾ.ಬೇಂದ್ರೆ

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ಜೇನ್ನೊಣದ ಹೆದೆಗೆ ಹೂಬಾಣ ಹೂಡಿದವರು ಯಾರು? (ಜ್ಞಾನ)
2. ಬೇಟೆಗಾರ ಯಾರು? (ಜ್ಞಾನ)
3. ಹುಸಿನಿದ್ದೆ ಸಾಕು ಎಂದು ಕವಿ ಯಾರಿಗೆ ಹೇಳುತ್ತಾರೆ? (ಜ್ಞಾನ)
4. ಯಾವುದಕ್ಕೆ ಸೆಳವಿದೆಯೆಂದು ಕವಿ ಹೇಳುತ್ತಾರೆ? (ಜ್ಞಾನ)
5. ಕವಿಯ ಪ್ರಕಾರ ಯಾವುದು ಮತ್ತೆ ಚಿಗುರುತ್ತದೆ? (ಜ್ಞಾನ)
6. ಯಾವುದು ಚಿಂತನದಿ ಮುಳುಗಿರಲಿ ಎಂದು ಕವಿ ಆಶಿಸುತ್ತಾರೆ? (ಜ್ಞಾನ)
7. ಜಗವು ಯಾವುದಕ್ಕೆ ಸೋತಿದೆ? (ಜ್ಞಾನ)
8. ಕ್ಷಣ ಉರುಳಿದರೆ ಏನಾಗಬಹುದೆಂದು ಕವಿ ಹೇಳುತ್ತಾರೆ? (ಜ್ಞಾನ)
9. ಅಂಗಡಿಯ ಕದವ ಯಾವಾಗ ತೆರೆಯಬೇಕೆಂದು ಕವಿ ಹೇಳಿದರು? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ಬೆಳಕು–ಬೇಟೆಗಾರ ಹೇಗೆ ಬರುತ್ತಾನೆ? (ಗ್ರಹಿಕೆ)
2. ಕವಿ ಬೇಂದ್ರೆ ಮಕ್ಕಳಿಗೆ ಬಾಳಿನ ಬಗ್ಗೆ ಕೊಡುವ ಸಂದೇಶವೇನು? (ಗ್ರಹಿಕೆ)
3. ಹುಸಿನಿದ್ದೆ ಸಾಕು, ಎದ್ದೇಳಿ ಎಂದು ಕವಿ ಮಕ್ಕಳಿಗೆ ಹೇಳಲು ಕಾರಣವೇನು? (ಗ್ರಹಿಕೆ)
4. ಕವಿಯ ಪ್ರಕಾರ ಮುಪ್ಪು ಮತ್ತು ಹರೆಯದ ನಡುವಿನ ವ್ಯತ್ಯಾಸವೇನು? (ಗ್ರಹಿಕೆ)
5. ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಏನು ಹೇಳಿದ್ದಾರೆ? (ಗ್ರಹಿಕೆ)
6. ಮಕ್ಕಳಿಗೆ ಏನೆಂದು ಕೂಗು ಕೇಳಿತು? (ಗ್ರಹಿಕೆ)
7. ಮಾರನ ಬಾಣ, ಹೆದೆಗಳ ವಿಶೇಷವೇನು? (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. ಬಲೆ ಬೀಸಿ ಬಂದ, ಅಗೋ ಬೆಳಕು–ಬೇಟೆಗಾರ. (ಅಭಿವ್ಯಕ್ತಿ)
2. ತುಂಬಿರುವ ತನಕ ತುಂತುಂಬಿ ಕುಡಿಯಬೇಕು. (ಅಭಿವ್ಯಕ್ತಿ)
3. ಮರಣ ಬಂದೀತು ಕ್ಷಣವು ಉರುಳಿ.(ಅಭಿವ್ಯಕ್ತಿ)
4. ಬರಲುಂಟೆ ಸುಗ್ಗಿ ಮತ್ತೆ? (ಅಭಿವ್ಯಕ್ತಿ)
5. ಮುಳುಗಿರಲಿ ಮುಪ್ಪು ಚಿಂತನದಿ.(ಅಭಿವ್ಯಕ್ತಿ)
6. ಹುಸಿ ನಿದ್ದೆಗಿದ್ದೆ ಸಾಕು. (ಅಭಿವ್ಯಕ್ತಿ)
7. ಅವರು ಬರಲಿಕ್ಕು ಇಲ್ಲ ಮರಳಿ.(ಅಭಿವ್ಯಕ್ತಿ)
8. ಬಾನ್ ಹೊಗರಲುಂಟು ಮರ ಚಿಗುರಲುಂಟು. (ಅಭಿವ್ಯಕ್ತಿ)

### ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

1. ಮಾನವನ ಜೀವನದ ಸಾರ್ಥಕತೆ ಎಲ್ಲಿದೆಯೆಂದು ಕವಿ ಬೇಂದ್ರೆ ಹೇಳಿದ್ದಾರೆ? (ಪ್ರಶಂಸೆ)
2. ಜೀವನದ ಉದ್ದೇಶ ಮತ್ತು ಆದರ್ಶಗಳನ್ನು ಹೇಗೆ ಸಫಲಗೊಳಿಸಿಕೊಳ್ಳಬೇಕು ಎಂದು ಬೇಂದ್ರೆ ಕರೆ ಕೊಡುತ್ತಾರೆ? (ಪ್ರಶಂಸೆ)
3. 'ಬೆಳಗು ಜಾವ' ಕವನದ ಮೂಲಕ ಕವಿ ಬೇಂದ್ರೆ ಹೇಳಿರುವ ವಿಚಾರಗಳಾವುವು? (ಪ್ರಶಂಸೆ)
4. ಬಾಳಿನ ಅಶಾಶ್ವತೆ ಮತ್ತು ಪ್ರಕೃತಿಯ ನಿತ್ಯನೂತನತೆಯ ಗುಣವನ್ನು 'ಬೆಳಗು ಜಾವ' ಕವನದಲ್ಲಿ ಕವಿ ಹೇಗೆ ವಿವರಿಸಿದ್ದಾರೆ?(ಪ್ರಶಂಸೆ)
5. ಕವಿ ವರ್ಣಿಸುವ ಮೂಡಲವು ಕಣ್ಣು ತೆರೆದಾಗಿನ ಚಟುವಟಿಕೆಗಳೇನು? ವಿವರಿಸಿ. (ಪ್ರಶಂಸೆ)
6. ಕವಿಯು ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಲು ಕಾರಣಗಳೇನು? (ಪ್ರಶಂಸೆ)

******

## 8. ಮುಂಬೈ ಜಾತಕ – ಜಿ. ಎಸ್. ಶಿವರುದ್ರಪ್ಪ

### ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

1. ಮಗು ಹುಟ್ಟಿದ್ದು ಎಲ್ಲಿ? (ಜ್ಞಾನ)
2. ಮುಂಬೈಯಲ್ಲಿ ಬೆಳಗಿನಿಂದ ಸಂಜೆಯತನಕ ಕಾಣುವುದೇನು? (ಜ್ಞಾನ)
3. ಹೊರಲೋಕವನ್ನು ಪರಿಚಯಿಸಿ ಎಚ್ಚರಿಕೆ ಕೊಟ್ಟವಳು ಯಾರು? (ಜ್ಞಾನ)
4. ಕುಳಿತು ಕೆಮ್ಮುವ ಪ್ರಾಣಿ ಯಾರು? (ಜ್ಞಾನ)
5. ತಾನಾಗಿ ಕಲಿತದ್ದು ಏನನು? (ಜ್ಞಾನ)
6. ಲಕ್ಷದಾರಿಗಳ ಚದುರಂಗದಾಟ ಯಾವುದು? (ಜ್ಞಾನ)
7. ಕನಸು ಬಂಡಿಯ ಕೆಳಗೆ ನಿದ್ರಿಸುವುದು ಹೇಗೆ? (ಜ್ಞಾನ)
8. ರಸ್ತೆಯಂಚಿನಲ್ಲೇ ಕೈ ಹಿಡಿದು ನಡೆಸಿದವಳು ಯಾರು? (ಜ್ಞಾನ)
9. ಕಾದೂ ಕಾದೂ ತೂಕಡಿಸುವುದು ಯಾರು? (ಜ್ಞಾನ)

### ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

1. ಮಗು ಹುಟ್ಟಿ, ಬೆಳೆದುದು ಎಲ್ಲಿ? (ಗ್ರಹಿಕೆ)
2. ಮಗು ಏನನ್ನು ಕುಡಿದು ಬೆಳೆಯುವುದು? (ಗ್ರಹಿಕೆ)
3. ಮಗು ಏನೇನು ಕಲಿಯಿತು? (ಗ್ರಹಿಕೆ)
4. ಮಗುವಿನ ಪಾಲಿಗೆ ತಾಯಿ ಹೇಗಿದ್ದಾಳೆ? (ಗ್ರಹಿಕೆ)
5. ತಂದೆ ಮಗುವಿಗೆ ಕಾಣಿಸಿಕೊಳ್ಳುವ ಬಗೆ ಹೇಗೆ? (ಗ್ರಹಿಕೆ)
6. ಮಗು ಕಲಿತ ವಿದ್ಯೆಗಳು ಯಾವುವು? (ಗ್ರಹಿಕೆ)
7. ಮುಂಬೈ ಅವಸರದ ಜೀವನ ಚಿತ್ರಕ್ಕೆ ಎರಡು ಉದಾಹರಣೆ ನೀಡಿ. (ಗ್ರಹಿಕೆ)
8. ತತ್ತರಿಸುತ್ತ ಮಲಗುವುದು ಎಲ್ಲಿ? (ಗ್ರಹಿಕೆ)

### ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):

1. ಅವಸರದ ಹೆಜ್ಜೆಯ ಮೇಲೆ ಸರಿವ ಸಾವಿರ ಕೊರಳು. (ಅಭಿವ್ಯಕ್ತಿ)
2. ರಸ್ತೆ ದಾಟುವಾಗೆಚ್ಚರಿಕೆ. (ಅಭಿವ್ಯಕ್ತಿ)
3. ರಸ್ತೆಯಂಚಿನಲ್ಲೇ ಕೈ ಹಿಡಿದು ನಡೆಸಿದವಳು. (ಅಭಿವ್ಯಕ್ತಿ)
4. ಕುಳಿತು ಕೆಮ್ಮುವ ಪ್ರಾಣಿ. (ಅಭಿವ್ಯಕ್ತಿ)
5. ನೂರಾರು ಜಾಹೀರಾತುಗಳು ತಲೆಗೆ ತುರುಕಿದ್ದು. (ಅಭಿವ್ಯಕ್ತಿ)
6. ಬಟ್ಟೆಯಲಿ ಮೈ ತುರುಕಿ ಓಡುವುದು. (ಅಭಿವ್ಯಕ್ತಿ)
7. ನೀನಾಗಿ ಕಲಿತದ್ದು ಬಲು ಕಡಿಮೆ. (ಅಭಿವ್ಯಕ್ತಿ)
8. ಎಲ್ಲಾದರೂ ಸರಿಯೆ, ಬೇರೂರು, ಹೀರು. (ಅಭಿವ್ಯಕ್ತಿ)

### ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

1. ಮುಂಬೈ ಜಾತಕದಲ್ಲಿ ಮಕ್ಕಳ ಬಾಲ್ಯದ ಚಿತ್ರಣ ಹೇಗೆ ನಿರೂಪಿತವಾಗಿದೆ? (ಪ್ರಶಂಸೆ)
2. ತಂದೆ–ತಾಯಿಗಳು ಮಗುವಿಗೆ ಗೋಚರಿಸುವ ಬಗೆಯನ್ನು ವಿವರಿಸಿ. (ಪ್ರಶಂಸೆ)
3. ಮಗು ಕಲಿತದ್ದನ್ನು ಮತ್ತು ವಿದ್ಯಾಭ್ಯಾಸ ಮಾಡುವ ವಿವರಗಳನ್ನು ವಿಶ್ಲೇಷಿಸಿ. (ಪ್ರಶಂಸೆ)
4. ನಗರ ಜೀವನದ ಯಾಂತ್ರಿಕ ವಿವರಗಳು ಕವಿತೆಯಲ್ಲಿ ಹೇಗೆ ಚಿತ್ರಿತಗೊಂಡಿದೆ? ವಿವರಿಸಿ. (ಪ್ರಶಂಸೆ)

******

## 9. ಶಿಲುಬೆ ಏರಿದ್ದಾನೆ – ಕೆ.ಎಸ್.ನಿಸಾರ್ ಅಹಮ್ಮದ್

### ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

1. ಕೇಕು ಮತ್ತು ಚಳಿ ಮನೆಗೆ ಏನನ್ನು ಹೊತ್ತು ತಂದಿವೆ? (ಜ್ಞಾನ)
2. ಕ್ರಿಸ್ಮಸ್ ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ ಯಾವ ರೂಪ ಕರುಣಿಸಿದೆ? (ಜ್ಞಾನ)
3. ಕ್ರಿಸ್ಮಸ್ ಸಂದರ್ಭದಲ್ಲಿ ಹತ್ತಿ ಯಾವ ಕೆಲಸ ಮಾಡಿದೆ? (ಜ್ಞಾನ)
4. ಶಿಲುಬೆಯೇರಿದವರು ಯಾರು? (ಜ್ಞಾನ)
5. ಕ್ರಿಸ್ತನ ಎಡಕ್ಕೂ ಬಲಕ್ಕೂ ಯಾರನ್ನು ತೂಗಿ ಸನ್ಮಾನಿಸಲಾಯಿತು? (ಜ್ಞಾನ)
6. ಜೀಸಸ್‌ನ ಮುಖಮುದ್ರೆ ಏನನ್ನು ನುಡಿವಂತಿದೆ? (ಜ್ಞಾನ)
7. ಜೀಸಸ್‌ನ ಶಿಲುಬೆಗೇರಿಸಿದವರು ಯಾರ ವಕಾಲತ್ತು ನಡೆಸಿದವರಾಗಿದ್ದಾರೆ? (ಜ್ಞಾನ)
8. ಕವಿ ಯಾವುದಕ್ಕೆ ಆಜ್ಯ ಎನ್ನುತ್ತಾರೆ? (ಜ್ಞಾನ)
9. ಏನು ಬಂದೇ ತೀರುತ್ತದೆ ಎಂಬ ನಂಬಿಕೆಯಲ್ಲಿ ಜೀಸಸ್ ಶಿಲುಬೆ ಏರಿದ್ದಾನೆ? (ಜ್ಞಾನ)
10. ಕವಿಯ ಪ್ರಕಾರ ತಿಂಗಳಿಗೊಂದು ಸಲವೂ ದೀಪಹಚ್ಚದ ಸ್ಥಳ ಯಾವುದು? (ಜ್ಞಾನ)
11. ದಲಿತ ವಾಸಸ್ಥಳಗಳು ಹೇಗಿವೆ? (ಜ್ಞಾನ)
12. ಜೀಸಸ್ ಯಾರ ಕಂಬನಿಯನ್ನು ಒರೆಸುತ್ತಾರೆ? (ಜ್ಞಾನ)
13. ಯಾರ ಕಂಬನಿಯನ್ನೊರೆಸಿ ಜೀಸಸ್ ದಿನನಿತ್ಯ ಶಿಲುಬೆ ಏರಿದ್ದಾನೆ? (ಜ್ಞಾನ)

### ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

1. ಕ್ರಿಸ್ಮಸ್ ಮನೆಗೆ ಏನನ್ನು ಹೊತ್ತು ತಂದಿದೆ? (ಗ್ರಹಿಕೆ)
2. ಗೋಡೆಯಲ್ಲಿರುವ ಕ್ರಿಸ್ತನ ಚಹರೆ ಹೇಗಿದೆ? (ಗ್ರಹಿಕೆ)
3. ಶಿಲುಬೆಗೇರಿದ ಯೇಸುವಿನ ದೇಹ ಯಾರಿಗೆ, ಏನನ್ನು ನುಡಿವಂತಿದೆ? (ಗ್ರಹಿಕೆ)
4. ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ? (ಗ್ರಹಿಕೆ)
5. ಕ್ರಿಸ್ತ ಎಲ್ಲೆಲ್ಲಿ ಶಿಲುಬೆಗೇರಿದ್ದಾನೆ? (ಗ್ರಹಿಕೆ)
6. ಯಾವ ವಸ್ತುಗಳು ಕಾಲರಾಯನ ಗುಜರಿ ಸೇರಿಲ್ಲ? (ಗ್ರಹಿಕೆ)
7. ಯಾವ ಸಂದೇಶವನ್ನು ನೀಡುವ ರೀತಿಯಲ್ಲಿ ಜೀಸಸ್ ಶಿಲುಬೆಯೇರಿದ್ದಾನೆ? (ಗ್ರಹಿಕೆ)

### ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):

1. ಯಾತನೆಗೂ ನಲ್ವಾತನೇ ನುಡಿವ ಮುಖಮುದ್ರೆ. (ಅಭಿವ್ಯಕ್ತಿ)
2. ಮನ್ನಿಸಲಿ ನಿಮ್ಮನ್ನ ಆ ದೇವರೆ! (ಅಭಿವ್ಯಕ್ತಿ)
3. ಕಾಲರಾಯನ ಗುಜರಿ ಸೇರಿಲ್ಲ. (ಅಭಿವ್ಯಕ್ತಿ)
4. ವೇಷ ಮರೆಸಿವೆ ಅಷ್ಟೆ – ಈ ಎಲ್ಲ ಕೇಡುಗಳು. (ಅಭಿವ್ಯಕ್ತಿ)
5. ಬಂದೇ ತೀರುತ್ತದೆ ದೈವೀರಾಜ್ಯ. (ಅಭಿವ್ಯಕ್ತಿ)
6. ದಿನನಿತ್ಯ ಶಿಲುಬೆಯೇರಿದ್ದಾನೆ ಜೀಸಸ್. (ಅಭಿವ್ಯಕ್ತಿ)

### ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

1. ಕ್ರಿಸ್ಮಸ್ ಆಗಮನವನ್ನು ಕವಿ ಹೇಗೆ ಚಿತ್ರಿಸಿದ್ದಾರೆ? (ಪ್ರಶಂಸೆ)
2. ಶಿಲುಬೆಗೇರಿದ ಜೀಸಸ್‌ನ ದೇಹ ಏನನ್ನು ಹೇಳುವಂತಿದೆ? ವಿವರಿಸಿ. (ಪ್ರಶಂಸೆ)
3. ಕ್ರಿಸ್ತನ ಕಾಲದ ಕೇಡುಗಳು ಈಗ ಹೇಗೆ ವೇಷ ಮರೆಸಿಕೊಂಡಿವೆ? ವಿವರಿಸಿ. (ಪ್ರಶಂಸೆ)
4. ಯಾವ ಸ್ಥಳಗಳಲ್ಲಿ ಜೀಸಸ್ ದಿನನಿತ್ಯ ಶಿಲುಬೆ ಏರಿದ್ದಾನೆ? ಚರ್ಚಿಸಿ. (ಪ್ರಶಂಸೆ)
5. 'ಶಿಲುಬೆ ಏರಿದ್ದಾನೆ' ಕವನದಲ್ಲಿ ಜೀಸಸ್ ವ್ಯಕ್ತಿತ್ವ ಮತ್ತು ಆತನ ಮಹತ್ವವನ್ನು ಕವಿ ಯಾವ ರೀತಿ ನಿರೂಪಿಸಿದ್ದಾರೆ? ವಿವರಿಸಿ.(ಪ್ರಶಂಸೆ)

******

## 10. ಒಂದು ಹೂ ಹೆಚ್ಚಿಗೆ ಇಡುತೀನಿ – ಲಲಿತಾ ಸಿದ್ಧಬಸವಯ್ಯ

### ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

1. ಮುದುಕಿಯ ಭಯಕ್ಕೆ ಕಾರಣವೇನು? (ಜ್ಞಾನ)
2. ಮುದುಕಿ ಯಾರ ಜೊತೆ ಇದ್ದಾಳೆ? (ಜ್ಞಾನ)
3. ಮುದುಕಿಗೆ ಯಾರಿಂದ ಫೋನ್ ಕರೆ ಬಂದಿತ್ತು? (ಜ್ಞಾನ)
4. ಮುದುಕ ಇರುವುದೆಲ್ಲಿ? (ಜ್ಞಾನ)
5. ಮುದುಕಿ ಯಾರೊಂದಿಗೆ ಮಾತಾಡಿ ತನ್ನ ಬಾಯತುರಿಕೆ ಕಡಿಮೆ ಮಾಡಿಕೊಳ್ಳುತ್ತಾಳೆ? (ಜ್ಞಾನ)
6. ಮುದುಕ ಏನನ್ನು ತಬ್ಬಿ ಹಿಡಿದಿದ್ದಾನೆ? (ಜ್ಞಾನ)
7. ಮುದುಕಿ ಮಹಡಿಯ ಮೇಲಿರುವ ಯಾರನ್ನು ಕಾಡಿ ಕರೆಯುತ್ತಾಳೆ? (ಜ್ಞಾನ)
8. ಮೊಮ್ಮಗಳು ಏನು ಮಾಡುತ್ತಿದ್ದಳು? (ಜ್ಞಾನ)
9. ಮೊಮ್ಮಗಳು ಫೋನೆತ್ತಿ ಕುಕ್ಕಿ ಏನೆಂದಳು? (ಜ್ಞಾನ)
10. ಮುದುಕಿ ಯಾರಿಗೆ ಹೊರಗಿನ ಕೆಲಸ ಸಮ್ಮಿಲಿಸಲಿ ಎನ್ನುತ್ತಾಳೆ? (ಜ್ಞಾನ)
11. ಮುದುಕಿ ಯಾವ ದೇವರಿಗೆ ಹರಕೆ ಹೊತ್ತಳು? (ಜ್ಞಾನ)
12. ಮುದುಕಿಯು ಏನೆಂದು ಹರಕೆ ಹೊತ್ತಳು? (ಜ್ಞಾನ)

### ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

1. ಮಗ ಏನೇನೆಂದು ಗದರಬಹುದು ಎಂದು ಮುದುಕಿ ಯೋಚಿಸುತ್ತಾಳೆ? (ಗ್ರಹಿಕೆ)
2. ಮುದುಕಿಯ ಜೀವ ಎಳೆಯುತ್ತಿರುವುದೇಕೆ? (ಗ್ರಹಿಕೆ)
3. ಮುದುಕ ಮುದುಕಿಯನ್ನು ಮಕ್ಕಳು ಹೇಗೆ ಹಂಚಿಕೊಂಡಿದ್ದಾರೆ? (ಗ್ರಹಿಕೆ)
4. ಮುದುಕ ಏನೆಂದು ಗೋಗರೆಯುತ್ತಾನೆ? (ಗ್ರಹಿಕೆ)
5. ಮೊಮ್ಮಗಳ ಆತುರಕ್ಕೆ ಮುದುಕಿ ಏನೆಂದುಕೊಂಡಳು? (ಗ್ರಹಿಕೆ)
6. ಮುದುಕಿ ಮಹಡಿ ಹತ್ತುವ ರೀತಿ ಹೇಗೆ? (ಗ್ರಹಿಕೆ)
7. ಸೊಸೆಗೆ ಹೊರಗಿನ ಕೆಲಸ ಬರಲೆಂದು ಮುದುಕಿ ಬಯಸಿದ್ದೇಕೆ? (ಗ್ರಹಿಕೆ)
8. ಮುದುಕಿಯು ಯಾರನ್ನು ಏನೆಂದು ಪ್ರಾರ್ಥಿಸುವಳು? (ಗ್ರಹಿಕೆ)

### ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):

1. 'ಎಷ್ಟುಸಲವಮ್ಮ ಹೇಳುವುದು ನಿನಗೆ?' (ಅಭಿವ್ಯಕ್ತಿ)
2. ಹಂಚಿಕೊಂಡಿದ್ದಾರೆ ಅಪ್ಪ ಅಮ್ಮನನ್ನು. (ಅಭಿವ್ಯಕ್ತಿ)
3. ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು. (ಅಭಿವ್ಯಕ್ತಿ)
4. ಪಾಪ ಮುದುಕ ದೂರದ ಅಸ್ಸಾಮಿನಲ್ಲಿ. (ಅಭಿವ್ಯಕ್ತಿ)

5. ಮಾತೇ ಮರೆತು ಹೋಗಿದೆ ಕಣೆ. (ಅಭಿವ್ಯಕ್ತಿ)
6. ಬಿಡುಗಡೆಗೆ ಹಾತೊರೆದು ರೈಟನ್ನೆ ರಾಂಗೆಂದಳೋ. (ಅಭಿವ್ಯಕ್ತಿ)
7. 'ಹಲೋ ನಾನೇ ಕಣ್ರೀ ಮಾತಾಡ್ರಿ ಮಾತಾಡ್ರಿ'. (ಅಭಿವ್ಯಕ್ತಿ)
8. ಒಂದು ಹೂ ಹೆಚ್ಚಿಗೆ ಇಡುತೀನಿ ನಿನ್ನ ಗಟ್ಟಿಪಾದಕ್ಕೆ. (ಅಭಿವ್ಯಕ್ತಿ)
9. ಇನ್ನೊಂದು ಸೇರ್ಪಡೆ ಆ ಲೀಲಾಮಾತ್ರನಿಗೆ. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ದೂರದ ಅಸ್ಸಾಮಿನಲ್ಲಿ ಇರುವ ಮುದುಕನ ಸ್ಥಿತಿಯನ್ನು ವಿವರಿಸಿ. (ಪ್ರಶಂಸೆ)
2. ಮಗ, ಸೊಸೆ ಮತ್ತು ಮೊಮ್ಮಗಳು ಮುದುಕಿಯನ್ನು ಹೇಗೆ ನಡೆಸಿಕೊಳ್ಳುವರು? (ಪ್ರಶಂಸೆ)
3. ಮುದುಕನ ಕುರಿತು ಮುದುಕಿಯ ನೆನಕೆಗಳೇನು? (ಪ್ರಶಂಸೆ)
4. ಮುದುಕಿಯ ತಳಮಳ ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ? (ಪ್ರಶಂಸೆ)
5. ವೃದ್ಧರ ತವಕ-ತಲ್ಲಣಗಳನ್ನು ಕವಯಿತ್ರಿ ಹೇಗೆ ಚಿತ್ರಿಸಿದ್ದಾರೆ? (ಪ್ರಶಂಸೆ)

******

## 11. ಹತ್ತಿ... ಚಿತ್ತ... ಮತ್ತು... – ಟಿ. ಯಲ್ಲಪ್ಪ

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ಹಣತೆಯಲ್ಲಿ ಹೊಸೆದು ಬತ್ತಿಯಾಗಿರುವುದು ಯಾವುದು? (ಜ್ಞಾನ)
2. ಎಣ್ಣೆಯಲ್ಲಿ ನೆನೆದ ಬತ್ತಿ ಹೇಗೆ ಕಾಣುತ್ತದೆ? (ಜ್ಞಾನ)
3. ಚಿತ್ತವನ್ನು ಯಾವುದಕ್ಕೆ ಹೋಲಿಸಲಾಗಿದೆ? (ಜ್ಞಾನ)
4. ಜಗದೊಳು ಸದ್ದಿಲ್ಲದೆ ಸಾಗುತ್ತಿರುವುದು ಯಾವುದು? (ಜ್ಞಾನ)
5. ಅನಾಥಭಾವವನ್ನು ಸೂಚಿಸುವ ಪದ ಯಾವುದು? (ಜ್ಞಾನ)
6. ನಿದ್ದೆ ತಿಳಿದು ಎದ್ದದ್ದು ಯಾರು? (ಜ್ಞಾನ)
7. ಹತ್ತಿಯ ಬೀಜಕ್ಕೆ ಯಾವುದು ತಪ್ಪದ ಕರ್ಮ? (ಜ್ಞಾನ)
8. ವ್ಯರ್ಥವಲ್ಲದ ಕೆಲಸವು ಯಾವುದು? (ಜ್ಞಾನ)
9. ತೈಲ ತೀರಿದ್ದು ಹೇಗೆ ತಿಳಿಯುತ್ತದೆ? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ಎಣ್ಣೆಯಲ್ಲಿ ನೆನೆದು ಉರಿವ ಬತ್ತಿಯನ್ನು ಯಾವ ಯಾವುದಕ್ಕೆ ಹೋಲಿಸಲಾಗಿದೆ? (ಗ್ರಹಿಕೆ)
2. ಮಾಗುವ ಜೀವದ ಪಯಣ ಹೇಗೆ ಸಾಗುತ್ತಿದೆ? (ಗ್ರಹಿಕೆ)
3. ಆತ್ಮಕ್ಕೆ ಕಮಟು ಹತ್ತುವುದು ಎಂದರೇನು? (ಗ್ರಹಿಕೆ)
4. ಎಣ್ಣೆ ತೀರಿದ ದೀಪಗಳು ಏನನ್ನು ಸೂಚಿಸುತ್ತವೆ? (ಗ್ರಹಿಕೆ)
5. ಹತ್ತಿಯ ಬೀಜ ಲೋಕದ ಹಿತಕ್ಕೆ ತನ್ನನ್ನು ಹೇಗೆ ಸುಟ್ಟುಕೊಳ್ಳುತ್ತದೆ? (ಗ್ರಹಿಕೆ)
6. ಆತ್ಮಪರಿನಿರ್ವಾಣದ ಸೊಬಗನ್ನು ಕವಿ ಹೇಗೆ ಚಿತ್ರಿಸಿದ್ದಾರೆ? (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. ಬೆಳಕ ಬಟ್ಟೆಯ ತೊಡುವ ಯೋಗಿಯಂತೆ! (ಅಭಿವ್ಯಕ್ತಿ)
2. ಮಾಗುವ ಜೀವದ ಪಯಣ ಸಾಗುತ್ತಿದೆ ಸದ್ದಿಲ್ಲದೆ. (ಅಭಿವ್ಯಕ್ತಿ)
3. ನಿದ್ದೆ ತಿಳಿದೆದ್ದ ಮಗು ಅತ್ತದ್ದು ಹಾಲಿಗೋ ಅಮ್ಮನಿಗೋ. (ಅಭಿವ್ಯಕ್ತಿ)
4. ಎಣ್ಣೆ ತೀರಿರುವ ದೀಪಗಳಿಗೆ ಬತ್ತಿ ಹೊಸೆಯುವ ಕೆಲಸ. (ಅಭಿವ್ಯಕ್ತಿ)
5. ಬೆಣ್ಣೆಯಾಗುವ ಕರ್ಮ ತಪ್ಪಿದ್ದಲ್ಲ. (ಅಭಿವ್ಯಕ್ತಿ)
6. ಈ ಪರಿಯ ಸೊಬಗು ಇನ್ನಾವ ಜೀವದೊಳು ಕಾಣಲರಿಯೆ! (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ಹತ್ತಿಯ ಬೀಜದ ಮತ್ತು ಮಾನವ ಜೀವದ ಪಯಣವನ್ನು ಕವಿ ಹೇಗೆ ಸಮೀಕರಿಸಿದ್ದಾರೆ? (ಪ್ರಶಂಸೆ)
2. ಬತ್ತಿ, ಎಣ್ಣೆ, ಭಕ್ತ, ಯೋಗಿ, ಜೇಡ – ಇವುಗಳ ಆತ್ಮ ಸಮರ್ಪಣೆಯ ಆಶಯವನ್ನು ಕವಿತೆ ಹೇಗೆ ಚಿತ್ರಿಸಿದೆ? (ಪ್ರಶಂಸೆ)
3. 'ಹತ್ತಿ... ಚಿತ್ತ... ಮತ್ತು...' ಕವಿತೆಯ ಸ್ವಾರಸ್ಯವನ್ನು ಚರ್ಚಿಸಿರಿ. (ಪ್ರಶಂಸೆ)

******

## 12. ಒಮ್ಮೆ ನಗುತ್ತೇವೆ – ಸುಕನ್ಯಾ ಮಾರುತಿ

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ದನಗಳಿಗೆ ಏನಿಲ್ಲ? (ಜ್ಞಾನ)
2. ಜನರಿಗೆ ಯಾವುದಕ್ಕೆ ಗತಿಯಿಲ್ಲ? (ಜ್ಞಾನ)
3. ನನ್ನವರು ಏನನ್ನು ಕಿತ್ತು ತಿನ್ನುತ್ತಿದ್ದಾರೆ? (ಜ್ಞಾನ)
4. ಕವಯಿತ್ರಿ ಯಾರಲ್ಲಿ ಮೊರೆ ಇಡುತ್ತಾರೆ? (ಜ್ಞಾನ)
5. ಕವಯಿತ್ರಿ ಯಾವುದಕ್ಕೆ ಧಿಕ್ಕಾರವಿರಲಿ ಎನ್ನುತ್ತಾರೆ? (ಜ್ಞಾನ)
6. ಕವಯಿತ್ರಿ ಯಾವುದನ್ನು ಆಪೋಶನ ಮಾಡುತ್ತೇನೆ ಎನ್ನುತ್ತಾರೆ? (ಜ್ಞಾನ)
7. ಜನರನ್ನು ಯಾವುದರಿಂದ ಪಾರು ಮಾಡುತ್ತೇನೆಂದು ಕವಯಿತ್ರಿ ಹೇಳುವರು? (ಜ್ಞಾನ)
8. ಒಮ್ಮೆ ನಗುತ್ತೇವೆ ಕವಿತೆಯನ್ನು ಬರೆದವರು ಯಾರು? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ದನಗಳಿಗೆ ಜನಗಳಿಗೆ ಏನೇನು ಇಲ್ಲ? (ಗ್ರಹಿಕೆ)
2. ಕವಯಿತ್ರಿ ಮುಗಿಲತ್ತ ಕೈಚಾಚಿ ಏಕೆ ನಿಂತಿದ್ದಾರೆ? (ಗ್ರಹಿಕೆ)
3. ತನ್ನವರನ್ನು ಯಾರು ಕೈಹಿಡಿಯದಿದ್ದಾಗ ಏನೇನು ಮಾಡುತ್ತೇನೆಂದು ಕವಯಿತ್ರಿ ಹೇಳಿದ್ದಾರೆ? (ಗ್ರಹಿಕೆ)
4. ಜನರನ್ನು ಕವಯಿತ್ರಿ ಯಾವ ಯಾವುದರಿಂದ ಪಾರು ಮಾಡುವುದಾಗಿ ಹೇಳಿದ್ದಾರೆ? (ಗ್ರಹಿಕೆ)
5. ಕವಯಿತ್ರಿ ನಗುವ ನಗು ಎಂತಹುದು? (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. ಗಂಜಿಗೂ ಗತಿಯಿಲ್ಲ. (ಅಭಿವ್ಯಕ್ತಿ)
2. ಕತಕತನೆ ಕುದಿವ ಅಗ್ನಿಪರ್ವತವಾಗಿದ್ದೇನೆ. (ಅಭಿವ್ಯಕ್ತಿ)
3. ಮುಗಿಲತ್ತ ಕೈಚಾಚಿ ನಿಂತಿದ್ದೇನೆ. (ಅಭಿವ್ಯಕ್ತಿ)
4. ಧಗಧಗ ಉರಿವ ಜ್ವಾಲಾಮುಖಿಯಾಗಿದ್ದೇನೆ. (ಅಭಿವ್ಯಕ್ತಿ)
5. ದೀನದಲಿತತನಕ್ಕೆ ಧಿಕ್ಕಾರವಿರಲಿ! (ಅಭಿವ್ಯಕ್ತಿ)
6. ಒಮ್ಮೆ ನಕ್ಕೇ ನಗುತ್ತೇವೆ. (ಅಭಿವ್ಯಕ್ತಿ)
7. ದನ, ಜನ ಎಲ್ಲ ಕೂಡಿ ನಗುತ್ತೇವೆ. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ಕವಯಿತ್ರಿ ಅಗ್ನಿಪರ್ವತ ಜ್ವಾಲಾಮುಖಿ ಆಗಿದ್ದೇನೆ ಎನ್ನಲು ಕಾರಣಗಳೇನು? (ಪ್ರಶಂಸೆ)
2. ಕವಯಿತ್ರಿ ತನ್ನವರ ನೋವನ್ನು ಹೋಗಲಾಡಿಸಲು ಏನೇನು ಮಾಡುತ್ತೇನೆಂದು ಹೇಳುತ್ತಾರೆ? (ಪ್ರಶಂಸೆ)
3. 'ಒಮ್ಮೆ ನಗುತ್ತೇವೆ' ಎಂಬ ಕವಿತೆಯಲ್ಲಿ ವ್ಯಕ್ತವಾಗುವ ನಗುವಿನ ವೈಶಿಷ್ಟ್ಯ ವಿವರಿಸಿರಿ. (ಪ್ರಶಂಸೆ)

******

## : ಗದ್ಯಭಾಗ :

### 1. ಮುಟ್ಟಿಸಿಕೊಂಡವನು – ಪಿ.ಲಂಕೇಶ್

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ಬಸಲಿಂಗನ ಹೆಂಡತಿಯ ಹೆಸರೇನು? (ಜ್ಞಾನ)
2. ಬಸಲಿಂಗನಿಗೆ ಕಾಣಿಸಿಕೊಂಡ ತೊಂದರೆ ಯಾವುದು? (ಜ್ಞಾನ)
3. ಬಸಲಿಂಗನಿಗೆ ಮೊದಲು ಯಾವ ಕಣ್ಣಿನಲ್ಲಿ ನೋವು ಆರಂಭವಾಯಿತು? (ಜ್ಞಾನ)
4. 'ಮುಟ್ಟಿಸಿಕೊಂಡವನು' ಕತೆಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಯ ವೈದ್ಯರ ಹೆಸರೇನು? (ಜ್ಞಾನ)
5. ಸರ್ಕಾರಿ ಆಸ್ಪತ್ರೆಯ ಬಗ್ಗೆ ಬಸಲಿಂಗನಲ್ಲಿದ್ದ ಅಭಿಪ್ರಾಯವೇನು? (ಜ್ಞಾನ)
6. ಬಸಲಿಂಗನು ಡಾ. ತಿಮ್ಮಪ್ಪನಿಗೆ ಏನೆಂದು ಸುಳ್ಳು ಹೇಳಿದನು? (ಜ್ಞಾನ)
7. ಬಸಲಿಂಗ ವೈದ್ಯರಿಗಾಗಿ ಅಲೆದಾಗ ಜೊತೆಗಿದ್ದ ರಾಜಕಾರಣಿ ಯಾರು? (ಜ್ಞಾನ)
8. ಬಸಲಿಂಗನ ಕಾಯಿಲೆ ದೇಹದ ಮಟ್ಟದಿಂದ ಯಾವ ಸ್ತರವನ್ನು ತಲುಪತೊಡಗಿತ್ತು? (ಜ್ಞಾನ)
9. ಡಾ. ತಿಮ್ಮಪ್ಪ ಬಸಲಿಂಗನಿಗೆ ಯಾವ ವೈದ್ಯರನ್ನು ಕಾಣಬೇಕೆಂದು ಸೂಚಿಸಿದರು? (ಜ್ಞಾನ)
10. ಕೊನೆಗೆ ಬಸಲಿಂಗ ಯಾವುದರಿಂದ ಮುಕ್ತನಾಗಿದ್ದ? (ಜ್ಞಾನ)
11. ದಿಕ್ಕು ದಿವಾಳಿ ಇಲ್ಲದವರು ಹೋಗುವ ಜಾಗ ಯಾವುದೆಂದು ಬಸಲಿಂಗ ಭಾವಿಸಿದ್ದ? (ಜ್ಞಾನ)
12. ಕೊನೆಯ ಪ್ರಯತ್ನವಾಗಿ ಬಸಲಿಂಗ ಯಾವ ಆಸ್ಪತ್ರೆಯ ವೈದ್ಯರನ್ನು ಕಾಣಲು ತೀರ್ಮಾನಿಸಿದ? (ಜ್ಞಾನ)
13. ಸೂತಕವನ್ನು ಪರಿಹರಿಸಲು ಬಸಲಿಂಗ ಏನು ಮಾಡಿದನು? (ಜ್ಞಾನ)
14. ಬಸಲಿಂಗ ತನ್ನ ಕಣ್ಣು ಹೋಗಲು ಯಾರು ಕಾರಣವೆಂದು ತಿಳಿಯುತ್ತಾನೆ? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲ ಯಾಕೆ? (ಗ್ರಹಿಕೆ)
2. ಹೆಂಡ್ತಿ ಸಿದ್ಲಿಂಗಿ ಏನು ಹೇಳುತ್ತಲೇ ಇದ್ದಳು? (ಗ್ರಹಿಕೆ)
3. ಬಸಲಿಂಗನಿಗೆ ತನ್ನ ಕಷ್ಟದ ಮುಂದೆ ಯಾವುದು ಗೌಣವಾಗಿ ಕಾಣತೊಡಗಿದವು? (ಗ್ರಹಿಕೆ)
4. ಕಣ್ಣನ್ನು ಪರೀಕ್ಷಿಸಿದ ಡಾ. ತಿಮ್ಮಪ್ಪ ಬಸಲಿಂಗನಿಗೆ ಏನೆಂದು ಹೇಳಿದರು? (ಗ್ರಹಿಕೆ)
5. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು? (ಗ್ರಹಿಕೆ)
6. ಅನ್ಯ ಡಾಕ್ಟರುಗಳು ಬಸಲಿಂಗನ ಕಾಯಿಲೆ ಬಗ್ಗೆ ಏನೆಂದು ಪ್ರತಿಕ್ರಿಯಿಸಿದರು? (ಗ್ರಹಿಕೆ)
7. ಡಾ. ಚಂದ್ರಪ್ಪ ಬಸಲಿಂಗನಿಗೆ ಡಾ. ತಿಮ್ಮಪ್ಪನ ಬಗ್ಗೆ ಕೊಟ್ಟ ಅಭಿಪ್ರಾಯವೇನು? (ಗ್ರಹಿಕೆ)
8. ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗತೊಡಗಿತ್ತು? (ಗ್ರಹಿಕೆ)
9. ಬಸಲಿಂಗ ಹೊಸ ಎತ್ತುಗಳನ್ನು ಹೊಂಚಿಕೊಳ್ಳಬೇಕೆಂಬುದಕ್ಕೆ ಕಾರಣವೇನು? (ಗ್ರಹಿಕೆ)
10. ಬಸಲಿಂಗ ತನ್ನ ಕಷ್ಟಗಳನ್ನು ಡಾ. ತಿಮ್ಮಪ್ಪನವರಲ್ಲಿ ಏನೆಂದು ತೋಡಿಕೊಂಡ? (ಗ್ರಹಿಕೆ)
11. ಎಡಗಣ್ಣಿನ ನೋವು ಪುನಃ ಕಾಣಿಸಿಕೊಂಡ ಮೇಲೆ ಬಸಲಿಂಗ ಏನು ಮಾಡಿದನು? (ಗ್ರಹಿಕೆ)
12. ಡಾ. ತಿಮ್ಮಪ್ಪ ತನ್ನ ರೋಗಿ ಬಸಲಿಂಗನಲ್ಲಿ ಆಗಿದ್ದ ಯಾವ ಬದಲಾವಣೆಯನ್ನು ಗಮನಿಸಿದರು? (ಗ್ರಹಿಕೆ)
13. ಡಾ. ತಿಮ್ಮಪ್ಪ ನೋವಿನಿಂದ ಬಸಲಿಂಗನಿಗೆ ಹೇಳಿದ ಮಾತುಗಳೇನು? (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. ಆಪರೇಷನ್ ಆಗಬೇಕು, ಪರವಾಗಿಲ್ಲವಾ? (ಅಭಿವ್ಯಕ್ತಿ)
2. ನೀರು ಬಿದ್ದರೆ ಕಣ್ಣು ಹೋಗುವ ಅಪಾಯ ಇದೆ. (ಅಭಿವ್ಯಕ್ತಿ)
3. ಬಸಲಿಂಗಪ್ಪ, ನೀನು ತುಂಬಾ ಒಳ್ಳೆಯವನು. (ಅಭಿವ್ಯಕ್ತಿ)
4. ಅವರು ನನ್ನಷ್ಟೇ ಒಳ್ಳೆಯ ಡಾಕ್ಟರು, ಏನೂ ತಪ್ಪು ತಿಳಿಯಬೇಡ. (ಅಭಿವ್ಯಕ್ತಿ)

5. ಈ ಮುಟ್ಟುವಿಕೆ ನಾನು ಊಹಿಸದೆ ಇದ್ದದ್ದನ್ನು ಮಾಡಿದೆ. (ಅಭಿವ್ಯಕ್ತಿ)
6. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ. (ಅಭಿವ್ಯಕ್ತಿ)
7. ಈ ಸಲ ತಲೆಗೆ ನೀರು ಸೋಂಕಿಸಕೂಡದು. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು? (ಪ್ರಶಂಸೆ)
2. ಕಣ್ಣುನೋವು ಶುರುವಾದ ಆರಂಭದಲ್ಲಿ ಬಸಲಿಂಗ ಪಡೆದುಕೊಂಡ ಚಿಕಿತ್ಸೆ ಯಾವ ರೀತಿಯದು? (ಪ್ರಶಂಸೆ)
3. ಬಸಲಿಂಗ ಡಾ. ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೆ ಇರಲು ಕಾರಣವೇನು? (ಪ್ರಶಂಸೆ)
4. ಬಸಲಿಂಗನಿಗೆ ಸಿಟ್ಟು ಬರಲು ಕಾರಣವೇನು? ಅದನ್ನು ಆತ ಯಾವ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ? (ಪ್ರಶಂಸೆ)
5. ಬಸಲಿಂಗ ಕೊನೆಯಲ್ಲಿ ತೆಗೆದುಕೊಂಡ ನಿರ್ಧಾರ ಯಾವುದು? ಅದಕ್ಕೆ ಕಾರಣಗಳೇನು? (ಪ್ರಶಂಸೆ)
6. ಡಾ. ತಿಮ್ಮಪ್ಪನವರ ವ್ಯಕ್ತಿತ್ವವನ್ನು ನಿರೂಪಿಸಿ.(ಪ್ರಶಂಸೆ)
7. ವ್ಯಕ್ತಿಯ ಜಾತಿಪ್ರಜ್ಞೆ ಉಂಟುಮಾಡುವ ನೋವು, ತಳಮಳ, ಸಮಸ್ಯೆಗಳನ್ನು 'ಮುಟ್ಟಿಸಿಕೊಂಡವನು' ಕತೆಯಲ್ಲಿ ಹೇಗೆ ನಿರೂಪಿಸಲಾಗಿದೆ? (ಪ್ರಶಂಸೆ)

******

## 2. ವಾಲ್‌ಪರೈ : ಅಭಿವೃದ್ಧಿ ತಂದ ದುರಂತ – ಕೃಪಾಕರ ಸೇನಾನಿ, ಕೆ.ಪುಟ್ಟಸ್ವಾಮಿ

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ಬ್ರಿಟಿಷರಲ್ಲಿ ಹಾಯ್ದು ಬಂದಿರುವ ಆನುಷಂಗಿಕ ಗುಣ ಯಾವುದು? (ಜ್ಞಾನ)
2. ವಾಲ್‌ಪರೈಗೆ ಬಂದ ಬ್ರಿಟಿಷ್ ಪ್ರಜೆ ಯಾರು? (ಜ್ಞಾನ)
3. ಕಗ್ಗತ್ತಲ ಖಂಡ ಯಾವುದು? (ಜ್ಞಾನ)
4. ಮಾರ್ಷ್ ವಾಲ್‌ಪರೈಗೆ ಬಂದುದು ಯಾವಾಗ? (ಜ್ಞಾನ)
5. ಮಾರ್ಷ್‌ನ ಜೊತೆಗಾರನ ಹೆಸರೇನು? (ಜ್ಞಾನ)
6. ಕೆಂಪು ಪಟ್ಟಿಗೆ ಸೇರಿದ ಪ್ರಾಣಿ ಯಾವುದು? (ಜ್ಞಾನ)
7. ವಾಲ್‌ಪರೈನ ದುರಂತದ ಮೂಲ ಬೀಜಗಳು ಯಾವ ರೂಪದಲ್ಲಿ ಬಂದವು? (ಜ್ಞಾನ)
8. ಮಾರ್ಷ್‌ನ ಚಹಾ ತೋಟದ ಯಶಸ್ಸು ಯಾರನ್ನು ಕೈಬೀಸಿ ಕರೆಯಿತು? (ಜ್ಞಾನ)
9. ವಾಲ್‌ಪರೈ ಈಗ ಹೇಗೆ ಕಾಣುತ್ತಿದೆ? (ಜ್ಞಾನ)
10. ಕಾನೂನಿನಲ್ಲಿ ಯಾವುದಕ್ಕೆ ಅವಕಾಶವಿಲ್ಲ? (ಜ್ಞಾನ)
11. ಬದುಕುಳಿಯುವ ಛಲತೊಟ್ಟ ಹಾಡು ಹಕ್ಕಿ ಯಾವುದು? (ಜ್ಞಾನ)
12. ವಾಲ್‌ಪರೈ ಯಾವ ರಾಜ್ಯದಲ್ಲಿದೆ? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ಬ್ರಿಟಿಷರು ಬರುವ ಮೊದಲು ವಾಲ್‌ಪರೈ ಹೇಗಿತ್ತು? (ಗ್ರಹಿಕೆ)
2. ಮಾರ್ಷ್‌ನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು? (ಗ್ರಹಿಕೆ)
3. ವಾಲ್‌ಪರೈನ ನೀರವತೆ ಹೇಗೆ ನಾಶವಾಯಿತು? (ಗ್ರಹಿಕೆ)
4. ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ? (ಗ್ರಹಿಕೆ)
5. ಸಿಂಹಬಾಲದ ಕೋತಿಗಳಿಗೆ ಒದಗಿದ ತೊಂದರೆ ಏನು? (ಗ್ರಹಿಕೆ)
6. ಹಾಡುಹಕ್ಕಿಗಳ ಬದುಕಿಗೆ ಯಾವುದು ಆಧಾರವಾಗಿತ್ತು? (ಗ್ರಹಿಕೆ)
7. ಈಗ ಹಾಡು ಹಕ್ಕಿಗಳ ನೆಲೆ ಯಾವುದು? (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. ಮಾರ್ಷ್‌ಗೆ ತಾನೊಂದು ಚಕ್ರವ್ಯೂಹದಲ್ಲಿ ಸಿಕ್ಕಿ ಬಿದ್ದಿರುವುದು ಅರಿವಾಗುವಾಗ ತಡವಾಗಿತ್ತು. (ಅಭಿವ್ಯಕ್ತಿ)
2. ಈ ಪ್ರದೇಶಕ್ಕೆ ಆಗ ಹೆಸರೇ ಇರಲಿಲ್ಲ. (ಅಭಿವ್ಯಕ್ತಿ)
3. ಅದು ಅವರು ಆವರೆಗೂ ನೋಡಿರದ ಪ್ರಾಣಿ. (ಅಭಿವ್ಯಕ್ತಿ)
4. ದುರಂತದ ಮೂಲ ಬೀಜಗಳು ಚಹಾಗಿಡದ ರೂಪದಲ್ಲಿ ಬಂದವು. (ಅಭಿವ್ಯಕ್ತಿ)
5. ವಾಲ್‌ಪರೈ ಅರಣ್ಯದ ಮೇಲಿನ ಅತ್ಯಾಚಾರಕ್ಕೆ ಸರ್ಕಾರ ಉತ್ತೇಜನ ನೀಡಿತು. (ಅಭಿವ್ಯಕ್ತಿ)
6. ಕೋತಿಗಳಿಗೆ 'ದಯಾಮೃತ್ಯು' ಕರುಣಿಸಲೂ ಕಾನೂನಿನಲ್ಲಿ ಅವಕಾಶವಿಲ್ಲ. (ಅಭಿವ್ಯಕ್ತಿ)
7. ಕಾರ್ಮಿಕರು ಕೆಂಪುಬಾವುಟ ಹಿಡಿದು ಹೋರಾಟಕ್ಕೆ ಸಜ್ಜಾಗಿದ್ದಾರೆ. (ಅಭಿವ್ಯಕ್ತಿ)
8. ಹಾಡುವುದು ಅವುಗಳಿಗೆ ಅನಿವಾರ್ಯ; ಅವುಗಳ ಕರ್ಮ! (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ಹದಿನೆಂಟನೇ ಶತಮಾನದ ಅಂತ್ಯದಲ್ಲಿದ್ದ ವಾಲ್‌ಪರೈಯನ್ನು ಚಿತ್ರಿಸಿರಿ. (ಪ್ರಶಂಸೆ)
2. ವಾಲ್‌ಪರೈಗೆ ಬಂದ ಮಾರ್ಷ್ ಅಲ್ಲಿ ಹೇಗೆ ನೆಲೆಯೂರಿದ? ವಿವರಿಸಿರಿ. (ಪ್ರಶಂಸೆ)
3. ಅಂತಾರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್‌ಪರೈಗೆ ಒದಗಿದ ಸಮಸ್ಯೆಗಳೇನು? (ಪ್ರಶಂಸೆ)
4. ಸಿಂಹಬಾಲದ ಕೋತಿಗಳು ಮತ್ತು ಹಾಡುಹಕ್ಕಿಗಳಿಗಾದ ಅನನುಕೂಲಗಳಾವುವು? ವಿವರಿಸಿ. (ಪ್ರಶಂಸೆ)
5. ಅಭಿವೃದ್ಧಿ ತರುವ ಪ್ರಾಕೃತಿಕ ನಾಶದ ಸ್ವರೂಪವನ್ನು ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ. (ಪ್ರಶಂಸೆ)

******

## 3. ಆಯ್ಕೆಯಿದೆ ನಮ್ಮ ಕೈಯಲ್ಲಿ – ನೇಮಿಚಂದ್ರ

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ಲೇಖಕಿಗೆ ಯಾವಾಗ ರೇಗಿ ಹೋಗುತ್ತಿತ್ತು? (ಜ್ಞಾನ)
2. ಲೇಖಕಿಯ ಪತಿ ಯಾವ ತೊಂದರೆಯಿಂದ ಬಳಲಿದರು? (ಜ್ಞಾನ)
3. 'ಕಿಡ್ನಿಸ್ಟೋನ್' ಬಗ್ಗೆ ತಿಳಿಯಲು ಲೇಖಕಿ ಯಾರನ್ನು ಭೇಟಿ ಮಾಡಿದರು? (ಜ್ಞಾನ)
4. ಲೇಖಕಿಯ ಪತಿಯನ್ನು ಸೋನಗ್ರಫಿ ರೂಮಿಗೆ ಕರೆದೊಯ್ದುದೇಕೆ? (ಜ್ಞಾನ)
5. ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ಯಾರು ನೆನಪಾಗುತ್ತಾರೆ? (ಜ್ಞಾನ)
6. ನಲವತ್ತನೇ ವಯಸ್ಸಿನಲ್ಲಿ ಪುನಃ ವಿದ್ಯಾಭ್ಯಾಸ ಮುಂದುವರೆಸಿ ಪ್ರಸಿದ್ಧ ನ್ಯಾಯವಾದಿಯಾದವರು ಯಾರು? (ಜ್ಞಾನ)
7. ದುರಾಸೆಯ ಹುಡುಗನನ್ನು ನಿರಾಕರಿಸಿದವರು ಯಾರು? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ಯಾವ ಉತ್ತರಗಳಿಂದ ಲೇಖಕಿಗೆ ತೃಪ್ತಿಯಾಗಲಿಲ್ಲ? (ಗ್ರಹಿಕೆ)
2. ಯಾರು ಯಾರಿಗೆ ಕಿಡ್ನಿಸ್ಟೋನ್ ಆಗಿತ್ತು? (ಗ್ರಹಿಕೆ)
3. ಕಮಲ ಮೇಡಂ ವೈದ್ಯರ ಯಾವ ಸಲಹೆಯನ್ನು ರೂಢಿಸಿಕೊಂಡರು? (ಗ್ರಹಿಕೆ)
4. ಮುದ್ದೇಗೌಡರು ಪಥ್ಯದ ವಿಚಾರವಾಗಿ ಹೊಂದಿದ್ದ ನಿಲುವು ಯಾವುದು? (ಗ್ರಹಿಕೆ)
5. ಸೀತಾಳ ಓದುವ ಆಸಕ್ತಿ ಹೇಗಿತ್ತು? (ಗ್ರಹಿಕೆ)
6. ಸೀತಾಳ ಬಯಕೆ, ನಂಬಿಕೆಗಳು ಹೇಗಿದ್ದವು? (ಗ್ರಹಿಕೆ)
7. ತಾನು ಅದೃಷ್ಟವಂತೆ ಎಂದು ಲೇಖಕಿ ಭಾವಿಸಲು ಕಾರಣವೇನು? (ಗ್ರಹಿಕೆ)
8. ಲೇಖಕಿಯ ಪತಿಯ ಎದುರಿಗಿದ್ದ ಎರಡು ಆಯ್ಕೆಗಳು ಯಾವುವು? (ಗ್ರಹಿಕೆ)
9. ದೂರು ಹೇಳಿದ ಸೀತಾಗೆ ಲೇಖಕಿ ನೀಡಿದ ಸಲಹೆ ಏನು? (ಗ್ರಹಿಕೆ)
10. ಲೇಖಕಿ ಯಾವುದನ್ನು 'ಅದೃಷ್ಟ' ಎನ್ನುತ್ತಾರೆ? (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. 'ಅದೃಷ್ಟ'ವನ್ನೇ ಅವಲಂಬಿಸಿ ಬದುಕಲು ಸಾಧ್ಯವೇ? (ಅಭಿವ್ಯಕ್ತಿ)
2. ಮತ್ತೆ ಅವರಿಗೆ ಮೂತ್ರಪಿಂಡದ ಕಲ್ಲು ಕಾಣಿಸಿರಲಿಲ್ಲ. (ಅಭಿವ್ಯಕ್ತಿ)
3. 'ನಾನು ನಾಲ್ಕುಬಾರಿ ಆಪರೇಷನ್ ಮಾಡಿಸಿಕೊಂಡಿದ್ದೇನೆ.' (ಅಭಿವ್ಯಕ್ತಿ)
4. 'ನೋಡು, ನಿನ್ನ ಎದುರು ಎರಡು ಆಯ್ಕೆಗಳಿವೆ.' (ಅಭಿವ್ಯಕ್ತಿ)
5. 'ಎಷ್ಟು ಬೇಕಾದರೂ ಓದಿಸಲು' ಸಿದ್ಧರಿದ್ದ ಅಪ್ಪಂದಿರು. (ಅಭಿವ್ಯಕ್ತಿ)
6. 'ಈ ಅದೃಷ್ಟ ನಿನಗೂ ಇತ್ತಲ್ಲೆ?' (ಅಭಿವ್ಯಕ್ತಿ)
7. 'ಎಸ್.ಎಸ್.ಎಲ್.ಸಿ. ಕಟ್ಟು, ಟೈಪಿಂಗ್ ಏನಾದರೂ ಕಲಿ..' (ಅಭಿವ್ಯಕ್ತಿ)
8. ಮುಂಬಯಿಯ ಪ್ರಸಿದ್ಧ ನ್ಯಾಯವಾದಿಯಾದರು. (ಅಭಿವ್ಯಕ್ತಿ)
9. ಬದುಕು ನಮ್ಮೆದುರು ನೂರು ಅವಕಾಶಗಳನ್ನು ಇಟ್ಟಿದೆ. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ರಜೆಗೆಂದು ಮೈಸೂರಿಗೆ ಹೋದಾಗ ಲೇಖಕಿಯ ಪತಿಗಾದ ತೊಂದರೆಯೇನು? (ಪ್ರಶಂಸೆ)
2. ಕಮಲ ಮೆಡಂಗೆ ಮೂತ್ರಪಿಂಡದಲ್ಲಿ ಕಲ್ಲು ಮೂಡಿದ್ದೇಕೆ? (ಪ್ರಶಂಸೆ)
3. ಲೇಖಕಿಯ ಪತಿಯ ಮೂತ್ರಪಿಂಡದ ಕಲ್ಲು ಕರಗಿಹೋಗಿದ್ದು ಹೇಗೆ? (ಪ್ರಶಂಸೆ)
4. ಸೀತಾ ಎಂಬ ಗೆಳತಿಯ ಗುಣ-ಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ? (ಪ್ರಶಂಸೆ)
5. ಪ್ರಸಿದ್ಧ ನ್ಯಾಯವಾದಿಯಾದ ಫ್ಲೇವಿಯಾ ತಮ್ಮ ಬದುಕಿನ ಹೋರಾಟದಲ್ಲಿ ಹೇಗೆ ಯಶಸ್ವಿಯಾದರು? (ಪ್ರಶಂಸೆ)
6. ಬದುಕಿನಲ್ಲಿ ಆಯ್ಕೆಗಳು ಮುಖ್ಯ ಎಂಬುದನ್ನು ಲೇಖಕಿ ಹೇಗೆ ನಿರೂಪಿಸಿದ್ದಾರೆ? (ಪ್ರಶಂಸೆ)
7. ಅದೃಷ್ಟವನ್ನೇ ಅವಲಂಬಿಸಿ ಬದುಕಲು ಸಾಧ್ಯವಿಲ್ಲ ಎಂಬುದನ್ನು ಈ ಲೇಖನ ಹೇಗೆ ಪ್ರತಿಪಾದಿಸುತ್ತದೆ? (ಪ್ರಶಂಸೆ)

******

## 4. ಕನ್ನಡವನ್ನು ಕಟ್ಟುವ ಕೆಲಸ – ಹಾ.ಮಾ.ನಾಯಕ

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ಎ.ಆರ್.ಕೃಷ್ಣಶಾಸ್ತ್ರಿಗಳು ಎಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು? (ಜ್ಞಾನ)
2. ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ಯಾವುದು? (ಜ್ಞಾನ)
3. ಪ್ರಾಂತೀಯ ಭಾಷೆಗಳ ಸ್ಥಾನವನ್ನು ಆಕ್ರಮಿಸುತ್ತಿರುವ ಭಾಷೆಗಳಾವುವು? (ಜ್ಞಾನ)
4. ಯಾವ ಮರ್ಯಾದೆಯನ್ನು ನಾವು ಮೀರಬಾರದು? (ಜ್ಞಾನ)
5. ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು ಏನಾಗುತ್ತಾರೆ? (ಜ್ಞಾನ)
6. ಯಾವುದು ನಮ್ಮ ಮೈಗೆ ಹತ್ತುವುದು? (ಜ್ಞಾನ)
7. ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು ಯಾರು? (ಜ್ಞಾನ)
8. ತಮ್ಮ ರಾಜ್ಯದಲ್ಲಿ ತಾವೇ ತಬ್ಬಲಿಗಳಾಗುತ್ತಿರುವವರು ಯಾರು? (ಜ್ಞಾನ)
9. ಬದುಕು ಯಾವುದನ್ನು ಬಿಟ್ಟು ಇರುವುದಿಲ್ಲ? (ಜ್ಞಾನ)
10. ಕನ್ನಡದ ಸಮಸ್ಯೆಗಳಿಗೆ ಪರಿಹಾರ ದೊರಕಿಸಲು ನಾವು ಏನು ಮಾಡಬೇಕು? (ಜ್ಞಾನ)
11. ಹಾ.ಮಾ.ನಾಯಕರ ಮೊದಲ ಪ್ರೀತಿ ಯಾವುದು? (ಜ್ಞಾನ)
12. ಹಾ.ಮಾ.ನಾಯಕರಿಗೆ ಯಾವಾಗ ಹೈದರಾಬಾದ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಕೈಗೆ ಸಿಕ್ಕಿತು? (ಜ್ಞಾನ)
13. ವಿಮಾನ ನಿಲ್ದಾಣದ ಎಲ್ಲ ಪ್ರಕಟಣೆಗಳೂ ಯಾವ ಭಾಷೆಗಳಲ್ಲಿರುವುದು ಅಗತ್ಯ? (ಜ್ಞಾನ)
14. ಪ್ರಾದೇಶಿಕ ಭಾಷೆಯಲ್ಲಿ ಕಡ್ಡಾಯ ಶಿಕ್ಷಣ ಕೊಡುವುದು ಯಾರ ಕರ್ತವ್ಯವಾಗಿರುತ್ತದೆ? (ಜ್ಞಾನ)
15. ಹೊರಜಗತ್ತಿನ ಸಂಪರ್ಕಕ್ಕಾಗಿ ನಮಗೆ ಯಾವ ಭಾಷೆ ಬೇಕು? (ಜ್ಞಾನ)
16. ಕರ್ನಾಟಕದ ಅನೇಕ ಕಡೆ ಯಾರು ಅಲ್ಪಸಂಖ್ಯಾತರಾಗುತ್ತಿದ್ದಾರೆ? (ಜ್ಞಾನ)

### ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

1. ಹಾ.ಮಾ.ನಾಯಕರಲ್ಲಿ ಕನ್ನಡ ಪ್ರೀತಿ ಸ್ಫುರಿಸಿದ್ದು ಹೇಗೆ? (ಗ್ರಹಿಕೆ)
2. ಎ.ಆರ್.ಕೃಷ್ಣಶಾಸ್ತ್ರಿಗಳ ಭಾಷಣ ಓದಿ ಹಾ.ಮಾ.ನಾಯಕರಲ್ಲಿ ಮೂಡಿದ ಭಾವನೆಗಳಾವುವು? (ಗ್ರಹಿಕೆ)
3. ಕರ್ನಾಟಕದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಹಾಮಾನಾ ಅಪೇಕ್ಷಿಸಿದ್ದಾರೆ? (ಗ್ರಹಿಕೆ)
4. ಕೇಂದ್ರದ ರೈಲು, ಅಂಚೆ ಇಲಾಖೆಗಳು ಯಾವ ಧೋರಣೆ ಬೆಳೆಸಿಕೊಂಡಿವೆ? (ಗ್ರಹಿಕೆ)
5. ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು? (ಗ್ರಹಿಕೆ)
6. ನಮ್ಮ ಸಾರ್ವಜನಿಕ ಶಾಲೆಗಳ ಬಗ್ಗೆ ಹಾ.ಮಾ.ನಾಯಕರ ಅಭಿಪ್ರಾಯವೇನು? (ಗ್ರಹಿಕೆ)
7. ಕನ್ನಡದ ಸಮಸ್ಯೆಗಳು ಎಲ್ಲಿಯವರೆಗೂ ಇದ್ದೇ ಇರುತ್ತವೆ? (ಗ್ರಹಿಕೆ)
8. ಕನ್ನಡದ ಬಗ್ಗೆ ಮಾತಾಡಲು ನಾವು ಯೋಗ್ಯತೆ ಗಳಿಸುವುದು ಯಾವಾಗ? (ಗ್ರಹಿಕೆ)
9. ಹಾ.ಮಾ.ನಾಯಕರು ತಿಳಿಸಿದ ರಾಜಮನ್ನಾರ್ ಸಮಿತಿಯ ವರದಿ ಏನು? (ಗ್ರಹಿಕೆ)
10. ಎಲ್ಲೆಲ್ಲಿ ಹೋದಾಗ ನಾವು ಪರದೇಶಿಗಳೆಂಬ ಭಾವನೆ ಬರುತ್ತದೆ? (ಗ್ರಹಿಕೆ)
11. ಶಿಕ್ಷಣ ತಜ್ಞರೆನ್ನಿಸಿಕೊಂಡವರಿಗೂ ಅನೇಕ ಸಲ ತಿಳಿಯದಿರದ ವಿಚಾರ ಯಾವುದು? (ಗ್ರಹಿಕೆ)
12. ಇಂಗ್ಲಿಷ್ ಮೂಲಕವಾದ ಶಿಕ್ಷಣ ಹೇಗಿರುತ್ತದೆ? (ಗ್ರಹಿಕೆ)

### ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):

1. ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಲಾರಿರಿ. (ಅಭಿವ್ಯಕ್ತಿ)
2. ಇಂಗ್ಲಿಷ್ ಹಿಂದಿ ಬಾರದವರು ವಿಮಾನ ಪ್ರಯಾಣ ಮಾಡಬಾರದೆ? (ಅಭಿವ್ಯಕ್ತಿ)
3. ನಾವು ಪರದೇಶಿಗಳೆಂಬ ಭಾವನೆ ಬರುತ್ತದೆ. (ಅಭಿವ್ಯಕ್ತಿ)
4. ನಮ್ಮ ಭಾಷೆಯಲ್ಲಿ ಓದಿದ್ದೇ ಮೈಗೆ ಹತ್ತುವುದು. (ಅಭಿವ್ಯಕ್ತಿ)
5. ಒಂದೊಂದು ಭಾಷೆಯೂ ಒಂದೊಂದು ವರ. (ಅಭಿವ್ಯಕ್ತಿ)
6. ನಾವು ಯಾವ ಪತ್ರಿಕೆಗಳನ್ನು ಓದುತ್ತಿದ್ದೇವೆ? (ಅಭಿವ್ಯಕ್ತಿ)
7. ಕನ್ನಡಿಗರು ಮೊದಲು ಕನ್ನಡಿಗರಾಗಬೇಕು. (ಅಭಿವ್ಯಕ್ತಿ)
8. ಇಲ್ಲಿ ಸವತಿ ಮಾತ್ಸರ್ಯಕ್ಕೆ ಎಡೆಯಿಲ್ಲ. (ಅಭಿವ್ಯಕ್ತಿ)

### ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

1. ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಕನ್ನಡತನವಿಲ್ಲದಿರುವ ಬಗ್ಗೆ ಹಾಮಾನಾ ಹೇಗೆ ಟೀಕಿಸಿದ್ದಾರೆ? (ಪ್ರಶಂಸೆ)
2. ಹೊರನಾಡಿನಿಂದ ಬಂದು ಕನ್ನಡ ನಾಡಿನಲ್ಲಿ ನೆಲೆಸಿರುವವರ ಜವಾಬ್ದಾರಿಗಳನ್ನು ಹಾಮಾನಾ ಹೇಗೆ ವಿವರಿಸಿದ್ದಾರೆ? (ಪ್ರಶಂಸೆ)
3. ನಮಗೆ ಬೇಕಾಗಿರುವ ಕನ್ನಡ ಮಾಧ್ಯಮ ಶಿಕ್ಷಣ ಮತ್ತು ಇಂಗ್ಲಿಷ್ ಭಾಷೆಯ ಸಂಬಂಧ ಯಾವ ಸ್ವರೂಪದ್ದಾಗಿರಬೇಕೆಂದು ಹಾಮಾನಾ ಹೇಳಿದ್ದಾರೆ? (ಪ್ರಶಂಸೆ)
4. ಪೋಷಕರು ಖಾಸಗಿ ಶಾಲೆಗಳ ಕಡೆ ಹೊರಳಲು ಹಾಮಾನಾ ಯಾವ ಕಾರಣಗಳನ್ನು ಉದಾಹರಿಸುತ್ತಾರೆ? (ಪ್ರಶಂಸೆ)
5. ಕನ್ನಡಿಗರೆನ್ನಿಸಿಕೊಳ್ಳಲು ಯಾವ ಯೋಗ್ಯತೆಯ ಪ್ರಶ್ನೆಗಳು ನಮ್ಮನ್ನು ಚುಚ್ಚಬೇಕು? ವಿವರಿಸಿ. (ಪ್ರಶಂಸೆ)
6. ಕನ್ನಡಿಗರ ಉದ್ಯೋಗದ ತೀವ್ರತರ ಸಮಸ್ಯೆಗೆ ಸಂಬಂಧಿಸಿದ ಹಾ.ಮಾ.ನಾಯಕರ ಅಭಿಪ್ರಾಯಗಳನ್ನು ತಿಳಿಸಿ. (ಪ್ರಶಂಸೆ)

******

## 5. ಧಣಿಗಳ ಬೆಳ್ಳಿಲೋಟ – ಎಚ್.ನಾಗವೇಣಿ

### ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

1. ಧಣಿಗಳ ಮನೆಯ ಪಕ್ಕದಲ್ಲಿ ಹರಿಯುತ್ತಿದ್ದ ಹೊಳೆ ಯಾವುದು? (ಜ್ಞಾನ)
2. 'ಗುಡ್ಡ' ಹೊಳೆಯಲ್ಲಿ ಯಾವ ಆಟ ಆಡುತ್ತಿದ್ದನು? (ಜ್ಞಾನ)
3. ಹೊಳೆ ಯಾವುದಕ್ಕೆ ಹೊಂಚುಹಾಕುತ್ತಿರುತ್ತದೆ? (ಜ್ಞಾನ)

4. ಧಣಿಗಳ ಹೆಸರೇನು? (ಜ್ಞಾನ)
5. ಬೆಳ್ಳಿಲೋಟ ಲಪಟಾಯಿಸಿದ ಅಪವಾದವನ್ನು ಯಾರ ಮೇಲೆ ಹೊರಿಸಲಾಯಿತು? (ಜ್ಞಾನ)
6. ಧಣಿ ಎಂದಿಗೂ ಯಾರನ್ನು ನಂಬುವುದಿಲ್ಲ? (ಜ್ಞಾನ)
7. ಧಣಿಗಳು ಹೊಳೆಯ ಹೂಳೆತ್ತಲು ಯಾರಿಗೆ ಸೂಚಿಸಿದರು? (ಜ್ಞಾನ)
8. ಹೂಳೆತ್ತುವ ಕೆಲಸದ ಒತ್ತಡ ಯಾವ ರೀತಿಯದು? (ಜ್ಞಾನ)
9. ಬೆಳ್ಳಿಲೋಟ ಏನನ್ನು ಕಳೆದುಕೊಂಡಿತ್ತು? (ಜ್ಞಾನ)
10. ಧಣಿಗಳ ದಾಂಪತ್ಯಕ್ಕೆ ಯಾವುದು ಮೂಕಸಾಕ್ಷಿಯಾಗಿತ್ತು? (ಜ್ಞಾನ)
11. ಚಿನ್ನಮ್ಮ ಧಣಿಗಳ ಬೆಳ್ಳಿಲೋಟವನ್ನು ಎಲ್ಲಿ ಎಸೆದಳು? (ಜ್ಞಾನ)

### ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ):

1. ಮುಂಜಾನೆ ಚಿನ್ನಮ್ಮ ಯಾವ ಕೆಲಸದಲ್ಲಿ ತೊಡಗಿದ್ದಳು? (ಗ್ರಹಿಕೆ)
2. ನದಿಯ ಒಡಲು ಯಾವಾಗ ಪ್ರಕ್ಷುಬ್ಧವಾಗಿರುತ್ತದೆ? (ಗ್ರಹಿಕೆ)
3. ಚಿನ್ನಮ್ಮನ ಕುಟುಂಬದೊಂದಿಗೆ ಶಾಂಭವಿ ಹೊಳೆಗೆ ಇದ್ದ ಒಡನಾಟ ಎಂತಹುದು? (ಗ್ರಹಿಕೆ)
4. ಮಳೆಗಾಲದಲ್ಲಿ ಹೊಳೆ ಹೇಗೆ ಕಿರಿಕಿರಿ ಎಬ್ಬಿಸುತ್ತದೆ? (ಗ್ರಹಿಕೆ)
5. ಹೊಳೆಯಿಂದ ಉಂಟಾಗುವ ಉಪಟಳಕ್ಕೆ ಧಣಿಗಳು ಕೈಗೊಳ್ಳುತ್ತಿದ್ದ ಪರಿಹಾರೋಪಾಯವೇನು? (ಗ್ರಹಿಕೆ)
6. ಧಣಿಗಳು ಹೊಳೆಯನ್ನು ಹೇಗೆ ಮೂದಲಿಸುತ್ತಿದ್ದರು? (ಗ್ರಹಿಕೆ)
7. ಯಾವ ಯಾವ ವಸ್ತುಗಳು ನೀರು ಪಾಲಾದವು? (ಗ್ರಹಿಕೆ)
8. ಮುಸುರೆ ಪಾತ್ರೆಗಳ 'ಒಡೆಯ' ಏನೆಂದು ಯೋಚಿಸಿದನು? (ಗ್ರಹಿಕೆ)
9. ಧಣಿಪತ್ನಿ ಬೆಳ್ಳಿಲೋಟವನ್ನು ಹೇಗೆ ಪರಿಚಯಿಸಿದ್ದಾಳೆ? (ಗ್ರಹಿಕೆ)
10. ಧಣಿಯ ಬಡಿತದಿಂದ ಗುಡ್ಡ ಬಂಧಮುಕ್ತನಾದುದು ಹೇಗೆ? (ಗ್ರಹಿಕೆ)
11. ಕುದುಪನಿಗೆ ಹನಿಗಣ್ಣಾಗಲು ಕಾರಣವೇನು? (ಗ್ರಹಿಕೆ)

### ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):

1. ಅದಕ್ಕೂ ಚಿನ್ನಮ್ಮನ ಪುಟ್ಟ ಸಂಸಾರದ ಬಗ್ಗೆ ಅದೆಷ್ಟು ಪ್ರೀತಿ ವಾತ್ಸಲ್ಯ. (ಅಭಿವ್ಯಕ್ತಿ)
2. ಕಾವಿಗೆ ಕೂತ ಹೇಂಟೆಯಂತೆ – ಒಡಲು ಯಾವತ್ತೂ ವ್ಯಗ್ರ-ಪ್ರಕ್ಷುಬ್ಧ. (ಅಭಿವ್ಯಕ್ತಿ)
3. 'ಗದ್ದೆಯಲ್ಲಿ ಬಿತ್ತುವುದನ್ನು ಮರಳದಿನ್ನೆ ಮೇಲೆ ಬಿತ್ತಿದೆಯಲ್ಲವ ಮಾರಾಯ.....?' (ಅಭಿವ್ಯಕ್ತಿ)
4. ಆತನ ಈಜಿಗೆ ಮೀನುಗಳೇ ನಾಚಬೇಕು. (ಅಭಿವ್ಯಕ್ತಿ)
5. 'ಇಷ್ಟೇನಾ ಪಾತ್ರೆ.... ಇನ್ನ್ಯಾವುದಾದರೂ ಮುಳುಗಿದ್ಯನಾ....?' (ಅಭಿವ್ಯಕ್ತಿ)
6. 'ನನ್ನಪ್ಪ ಮದುವೆಯಲ್ಲಿ ಕೊಟ್ಟ ಬೆಳ್ಳಿಲೋಟವನ್ನು ನುಂಗಿತನಾ....' (ಅಭಿವ್ಯಕ್ತಿ)
7. ಧಣಿಯವರು ಎಂದಾದರೂ ಒಕ್ಕಲು ಮಕ್ಕಳನ್ನು ನಂಬಿದ್ದುಂಟೆ? (ಅಭಿವ್ಯಕ್ತಿ)
8. 'ನಮ್ಮ ಊರ ಕೋಡ್ದಬ್ಬು ದೈವದ ಆಣೆಯಿದೆ....' (ಅಭಿವ್ಯಕ್ತಿ)
9. ಮೂರು ಬೇಸಿಗೆಯವರೆಗೆ ಚಿನ್ನಮ್ಮನ ದುಡಿತಕ್ಕೆ ಪಡಿಯಿಲ್ಲ. (ಅಭಿವ್ಯಕ್ತಿ)
10. ಪಾವಕ್ಕಿ ಕಮ್ಮಿ ಮಾಡಿದರೆ ಸುಮ್ಮನೆ ಇರ್‍ತಿಯೇನೋ ನೀನು? (ಅಭಿವ್ಯಕ್ತಿ)
11. ಇದೇ ಲೋಟವಲ್ಲವೇ.... ತನ್ನ ಬೆವರಿನ ಬೆಲೆ ಕಳೆದದ್ದು. (ಅಭಿವ್ಯಕ್ತಿ)
12. ಹೊಳೆಯ ಆಳ ಮಡುವತ್ತ ಬೆಳ್ಳಿಲೋಟವನ್ನು ಎಸೆದೇಬಿಟ್ಟಳು! (ಅಭಿವ್ಯಕ್ತಿ)

### ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

1. ಚಿನ್ನಮ್ಮ ಮತ್ತು ಆಕೆಯ ಕುಟುಂಬಕ್ಕೆ ಹೊಳೆಯ ಬಗ್ಗೆ ಅಸಹನೆ ಉಂಟಾಗಲು ಕಾರಣವೇನು? (ಪ್ರಶಂಸೆ)
2. ಚಿನ್ನಮ್ಮನ ಕುಟುಂಬ ಹೊಳೆಯ ಬಗ್ಗೆ ಅಸಹನೆ ಹೊಂದಬಾರದೆಂದು ಲೇಖಕಿ ಬಯಸುವುದೇಕೆ? ವಿವರಿಸಿ. (ಪ್ರಶಂಸೆ)
3. ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ. (ಪ್ರಶಂಸೆ)
4. ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ? ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು? (ಪ್ರಶಂಸೆ)

5. ಕಳೆದ ಬೆಳ್ಳಿಲೋಟ ಮತ್ತೆ ಕಂಡಾಗ ಧಣಿಯಲ್ಲಿ ಆತಂಕ, ಗಾಬರಿ, ಭಯ ಉಂಟಾಗಲು ಕಾರಣವೇನು? (ಪ್ರಶಂಸೆ)
6. ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು? ವಿಶ್ಲೇಷಿಸಿ. (ಪ್ರಶಂಸೆ)
7. ತಮ್ಮ ಕುಟುಂಬದ ಮೇಲಿನ ಅಪವಾದವನ್ನು ನಿವಾರಿಸಿಕೊಳ್ಳುವ ಅವಕಾಶವಿದ್ದರೂ ಚಿನ್ನಮ್ಮ ಆ ಸಾಧ್ಯತೆಯನ್ನು ನಿರಾಕರಿಸಲು ಕಾರಣವೇನು? (ಪ್ರಶಂಸೆ)

******

## 6. ಬದುಕನ್ನು ಪ್ರೀತಿಸಿದ ಸಂತ – ಎಚ್.ಆರ್. ರಾಮಕೃಷ್ಣರಾವ್

### ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

1. ದೇವರಿಗೆ ಹತ್ತಿರವಾದವರು ಯಾರು? (ಜ್ಞಾನ)
2. ಚಿಪ್ ಎಂದರೇನು? (ಜ್ಞಾನ)
3. ಕಲಾಂ ಅವರ ಆತ್ಮಚರಿತ್ರೆಯ ಹೆಸರೇನು? (ಜ್ಞಾನ)
4. ಕಲಾಂ ಅವರ ಕ್ರಿಯಾಶೀಲತೆಗೆ ಸಾಕ್ಷಿ ಯಾವುದು? (ಜ್ಞಾನ)
5. ಹೈದರಾಬಾದಿನ ಪ್ರಯೋಗಾಲಯದ ನಿರ್ದೇಶಕರು ಯಾರು? (ಜ್ಞಾನ)
6. ಕಲಾಂರನ್ನು ಶಾಲೆಗೆ ಕಳಿಸುವಂತೆ ಪ್ರೇರೇಪಿಸಿದವರು ಯಾರು? (ಜ್ಞಾನ)
7. ವಿಜ್ಞಾನದ ಅಡಿಪಾಯ ಯಾವುದು? (ಜ್ಞಾನ)
8. ಸಿಕಂದರಾಬಾದಿನ ಶಾಲಾ ಬಾಲಕಿ ನೋಡಿದ ಕ್ಷಿಪಣಿ ಯಾವುದು? (ಜ್ಞಾನ)
9. ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರು? (ಜ್ಞಾನ)
10. ಕಲಾಂರವರು ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ತಿಳಿದಾಗ ಅವರು ಎಲ್ಲಿದ್ದರು? (ಜ್ಞಾನ)
11. ಕಲಾಂರವರು ಯಾವ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು? (ಜ್ಞಾನ)
12. 'ಬದುಕನ್ನು ಪ್ರೀತಿಸಿದ ಸಂತ' ಬರೆದವರು ಯಾರು? (ಜ್ಞಾನ)

### ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

1. ಕಲಾಂ ಅವರ ಬದುಕಿನ ಮಂತ್ರ ಯಾವುದು? (ಗ್ರಹಿಕೆ)
2. ಕಲಾಂ ಅವರು ಆತ್ಮಕತೆ ಬರೆದುದು ಏತಕ್ಕಾಗಿ? (ಗ್ರಹಿಕೆ)
3. ಕಲಾಂ ಅವರು ಬಂಡೆಗಳ ಬಸಿರಲ್ಲಿ ಕಂಡದ್ದೇನು? (ಗ್ರಹಿಕೆ)
4. ಉಪನಿರ್ದೇಶಕ ಸಾರಸ್ವತ ಸಿಕಂದರಾಬಾದ್ ಶಾಲಾ ಬಾಲಕಿ ಬಗೆಗೆ ಹೇಳಿದ ಹೆಮ್ಮೆಯ ಮಾತುಗಳಾವುವು? (ಗ್ರಹಿಕೆ)
5. ಪದ್ಮ ಶೇಷಾದ್ರಿ ಬಾಲಭವನದ ಮಕ್ಕಳಿಗೆ ಕಲಾಂ ಕೇಳಿದ ಪ್ರಶ್ನೆ ಯಾವುದು? (ಗ್ರಹಿಕೆ)
6. ಹದಿನೈದು ವರ್ಷ ತಲುಪುವವರೆಗೆ ನಮಗೆ ಯಾರು ಆದರ್ಶ ಮಾದರಿ? (ಗ್ರಹಿಕೆ)
7. ಉತ್ತಮ ಬದುಕಿಗೆ ಆದರ್ಶ ಮಾದರಿಯ ತ್ರಿಭುಜ ಯಾವುವು? (ಗ್ರಹಿಕೆ)
8. ಸರಿಯಾದ ಶಿಕ್ಷಣ ಏನನ್ನು ಪೋಷಿಸುತ್ತದೆ? (ಗ್ರಹಿಕೆ)
9. ಕಲಾಂ ಹೇಳಿದ ಭಗವದ್ಗೀತೆಯ ಪ್ರಸಿದ್ಧ ಸಾಲುಗಳು ಯಾವುವು? (ಗ್ರಹಿಕೆ)
10. ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು? (ಗ್ರಹಿಕೆ)

### ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):

1. ಭಗವಂತನ ಸೃಷ್ಟಿಯಲ್ಲಿರುವವರೆಲ್ಲ ಆತನ ಬಂಧುಗಳೆ. (ಅಭಿವ್ಯಕ್ತಿ)
2. ಸಾಧ್ಯವಿಲ್ಲ ಎಂದು ಹೇಳುವ ನೂರು ಕಾರಣಗಳ ಬಗ್ಗೆ ನನಗೆ ಸ್ವಲ್ಪವೂ ಆಸಕ್ತಿ ಇಲ್ಲ. (ಅಭಿವ್ಯಕ್ತಿ)
3. ಆ ಹುಡುಗಿಯನ್ನು ಇಲ್ಲಿಗೆ ಯಾಕೆ ಕರೆಸಬಾರದು? (ಅಭಿವ್ಯಕ್ತಿ)
4. ನೀನು ಯಾವ ಸ್ಕೂಲಿನಲ್ಲಿ ಓದುತ್ತಿದ್ದೀಯೆ? (ಅಭಿವ್ಯಕ್ತಿ)
5. ಸರಿಯಾದ ಶಿಕ್ಷಣ ನಮ್ಮ ಯುವಕರಲ್ಲಿ ಆತ್ಮಗೌರವ ಮತ್ತು ಘನತೆಗಳನ್ನು ಪೋಷಿಸುತ್ತದೆ. (ಅಭಿವ್ಯಕ್ತಿ)
6. ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು. (ಅಭಿವ್ಯಕ್ತಿ)

7. ಮಗುವೇ ಮೊದಲ ವಿಜ್ಞಾನಿ.(ಅಭಿವ್ಯಕ್ತಿ)
8. ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು. (ಅಭಿವ್ಯಕ್ತಿ)
9. ಮಿ. ಪ್ರೆಸಿಡೆಂಟ್ ನಿಮ್ಮ ಯಶಸ್ಸಿನ ಗುಟ್ಟೇನು? (ಅಭಿವ್ಯಕ್ತಿ)
10. ಎಲ್ಲ ಮಕ್ಕಳ ಕನಸೂ ಒಂದೇ. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಹೇಗೆ? ವಿವರಿಸಿರಿ. (ಪ್ರಶಂಸೆ)
2. ಚೆನ್ನೈನಲ್ಲಿ ನಡೆದ ಪದ್ಮಶೇಷಾದ್ರಿ ಬಾಲಭವನದ ಪ್ರೌಢಶಾಲೆಯಲ್ಲಿ ನಡೆದ ಕ್ವಿಜ್ ಕಾರ್ಯಕ್ರಮದ ಔಚಿತ್ಯವನ್ನು ಕುರಿತು ವಿವರಿಸಿ. (ಪ್ರಶಂಸೆ)
3. ತಾಯಿ, ತಂದೆ, ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ ಹೇಗೆ? ವಿವರಿಸಿರಿ. (ಪ್ರಶಂಸೆ)
4. ರಾಷ್ಟ್ರಪತಿಯಾಗಿ ಆಯ್ಕೆಯಾದಾಗ ಚೆನ್ನೈನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಕಲಾಂ ಹೇಳಿದ್ದೇನು? ವಿವರಿಸಿ. (ಪ್ರಶಂಸೆ)
5. ತಮ್ಮನ್ನು ಭೇಟಿಯಾದ ಮಕ್ಕಳಿಗೆ ಕಲಾಂ ಹೇಳಿದ್ದೇನು? (ಪ್ರಶಂಸೆ)

******

## 7. ತಿರುಳ್ಗನ್ನಡದ ಬೆಳ್ನುಡಿ – ಮುದ್ದಣ

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ಮುದ್ದಣ ಅರಮನೆಯಿಂದ ಬರುತ್ತಿರುವುದನ್ನು ನಿಂತು ನೋಡಿದವರಾರು? (ಜ್ಞಾನ)
2. ಯಾವ ಕತೆ ಹೇಳಬೇಕೆಂದು ಮನೋರಮೆ ಕೇಳಿದಳು? (ಜ್ಞಾನ)
3. ಶೇಷನು ರಾಮಾಯಣದ ಕತೆಯನ್ನು ಯಾರಿಗೆ ಹೇಳಿದನು? (ಜ್ಞಾನ)
4. ಎಂತಹ ಗದ್ಯದಲ್ಲಿ ಕತೆ ಹೇಳೆಂದು ಮನೋರಮೆ ಕೇಳುವಳು? (ಜ್ಞಾನ)
5. ಮನೋರಮೆ ಬಹುಮಾನವಾಗಿ ಏನನ್ನು ಕೊಡುವೆನೆಂದಳು? (ಜ್ಞಾನ)
6. ವಸುಧೆಗೆ ಒಡೆಯನೆನಿಸಿದವನು ಯಾರು? (ಜ್ಞಾನ)
7. ಕನ್ನಡವು ಕಸ್ತೂರಿಯಲ್ಲವೆ ಎಂದವರಾರು? (ಜ್ಞಾನ)
8. ಯಾವ ಧಾಟಿಯಲ್ಲಿ ಕತೆ ಹೇಳುವುದು ಬೇಡವೆಂದು ಮನೋರಮೆ ಹೇಳಿದಳು? (ಜ್ಞಾನ)
9. ತಿರುಳ್ಗನ್ನಡದ ಬೆಳ್ನುಡಿಯಲ್ಲಿ ಕತೆಯನ್ನು ಹೇಳೆಂದು ಕೇಳಿದವರಾರು? (ಜ್ಞಾನ)
10. ಮುದ್ದಣ ಕಾವ್ಯನಾಮದ ಕವಿಯ ಹೆಸರೇನು? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ಮುದ್ದಣನನ್ನು ಮನೋರಮೆ ಹೇಗೆ ಉಪಚರಿಸಿದಳು? (ಗ್ರಹಿಕೆ)
2. ಮನೋರಮೆ ಕತೆ ಹೇಳೆಂದು ಕೇಳಲು ಕಾರಣವೇನು? (ಗ್ರಹಿಕೆ)
3. ಕತೆಯನ್ನು ಯಾವ ರಸಗಳಲ್ಲಿ ಹೇಳಲೆಂದು ಮುದ್ದಣ ಕೇಳಿದನು? (ಗ್ರಹಿಕೆ)
4. ಯಾವ ಧಾಟಿಯಲ್ಲಿ ಕತೆಯನ್ನು ಹೇಳೆಂದು ಮನೋರಮೆ ಕೇಳಿದಳು? (ಗ್ರಹಿಕೆ)
5. ಅರಮನೆಯಿಂದ ಎಂತಹ ಬಹುಮಾನ ಸಿಗಬಹುದೆಂದು ಮುದ್ದಣ ಹೇಳಿದನು? (ಗ್ರಹಿಕೆ)
6. 'ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಯ್ತು' ಎಂದು ಮನೋರಮೆ ಹೇಳಿದ್ದೇಕೆ? (ಗ್ರಹಿಕೆ)
7. ಸಂಸ್ಕೃತ-ಕನ್ನಡಗಳು ಸೇರಿದರೆ ಹೇಗೆ ಸೊಗಯಿಸುತ್ತದೆ? (ಗ್ರಹಿಕೆ)
8. ಮುದ್ದಣ ಅರಮನೆಯಿಂದ ಮನೆಗೆ ಬಂದ ಬಗೆಯನ್ನು ತಿಳಿಸಿ. (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. ಬಲ್ಲೋನೆಯ ಜಿನುಂಗಿನತ್ತಣಿನೆನ್ನ ಬಗೆಯುಂ ಬೇಸರ್ತುದು. (ಅಭಿವ್ಯಕ್ತಿ)
2. ನಲ್ಗತೆಯಂ ಪೇಳ! (ಅಭಿವ್ಯಕ್ತಿ)

3. ಬಟ್ಟೆದೋರಿಪ ರಸಭರಿತಂ ಚರಿತಮೈಸೆ. (ಅಭಿವ್ಯಕ್ತಿ)
4. ನಿನಗಾವ ರಸದೊಳಿಷ್ಟಂ? (ಅಭಿವ್ಯಕ್ತಿ)
5. ಸೀತಾಪಹರಣ ಕಥನದೊಳ್ ಬಯಕೆಯೆ? (ಅಭಿವ್ಯಕ್ತಿ)
6. ನಾಡೊಳೆನಿತ್ತೋ ರಾಮಾಯಣಂಗಳೊಳವು. (ಅಭಿವ್ಯಕ್ತಿ)
7. ಪದ್ಯಂ ವಧ್ಯಂ; ಗದ್ಯಂ ಹೃದ್ಯಂ. (ಅಭಿವ್ಯಕ್ತಿ)
8. ಕಬ್ಬಮಂ ಕಂಡಲ್ತೆ ಕಚ್ಚಳಿಯನಿತ್ತರ್. (ಅಭಿವ್ಯಕ್ತಿ)
9. ಆನುಂ ನೋಳ್ಪೆಂ ಕತೆಯ ಪುರುಳೆಂತಿರ್ಕುಮೆಂದು. (ಅಭಿವ್ಯಕ್ತಿ)
10. ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು. (ಅಭಿವ್ಯಕ್ತಿ)
11. 'ಕನ್ನಡಂ ಕತ್ತುರಿ'ಯಲ್ತೆ. (ಅಭಿವ್ಯಕ್ತಿ)
12. ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ಮುದ್ದಣ ಅರಮನೆಯಿಂದ ಬಂದ ಪರಿಯನ್ನೂ ಮನೋರಮೆಯ ಉಪಚಾರವನ್ನೂ ವಿವರಿಸಿ. (ಪ್ರಶಂಸೆ)
2. ಒಳ್ಳೆಯದೊಂದು ಕತೆ ಹೇಳಬೇಕೆಂದಾಗ ಮುದ್ದಣನ ಪ್ರತಿಕ್ರಿಯೆಯೇನು? (ಪ್ರಶಂಸೆ)
3. ಎಂತಹ ತಿರುಳು ಕನ್ನಡದಲ್ಲಿ ಕತೆಯನ್ನು ಹೇಳುವುದಾಗಿ ಮುದ್ದಣ ಹೇಳುವನು? (ಪ್ರಶಂಸೆ)
4. ಮುದ್ದಣ–ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ. (ಪ್ರಶಂಸೆ)
5. 'ಪದ್ಯಂ ವಧ್ಯಂ ; ಗದ್ಯಂ ಹೃದ್ಯಂ' ಎಂದು ಮನೋರಮೆ ಹೇಳಲು ಕಾರಣವೇನು? ವಿವರಿಸಿ. (ಪ್ರಶಂಸೆ)
6. 'ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು' ಈ ಮಾತನ್ನು ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿ. (ಪ್ರಶಂಸೆ)

******

## 8. ಹಳ್ಳಿಯ ಚಹಾ ಹೋಟೇಲುಗಳು – ವೀರೇಂದ್ರ ಸಿಂಪಿ

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ಕಲಿಯುಗದ ಅಮೃತ ಯಾವುದು? (ಜ್ಞಾನ)
2. ಮೂರು ಕಾಲಿನ ಕುರ್ಚಿ ಎಲ್ಲಿದೆ? (ಜ್ಞಾನ)
3. ಎತ್ತುಗಳು ಗಕ್ಕೆಂದು ಎಲ್ಲಿ ನಿಲ್ಲುತ್ತವೆ? (ಜ್ಞಾನ)
4. ಬಾಯಿಚಪಲ ಯಾರಿಗೆ ಜಾಸ್ತಿ ಇರುತ್ತದೆ? (ಜ್ಞಾನ)
5. ಲೇಖಕರ ದೃಷ್ಟಿಯಲ್ಲಿ ಹಳ್ಳಿಯ ಚಹಾದ ಅಂಗಡಿ ಹೇಗೆ? (ಜ್ಞಾನ)
6. ಯಾರ ಬಗ್ಗೆ ಮೂಕರ್ಜಿಯ ದೂರನ್ನು ಹಳ್ಳಿಗರು ಕೊಡುತ್ತಾರೆ? (ಜ್ಞಾನ)
7. ಕಲ್ಲಪ್ಪನವರ ಗೂಢ ಪ್ರಶ್ನೆ ಯಾವುದು? (ಜ್ಞಾನ)
8. ಲೋಕಲ್ ಸುದ್ದಿಗಳಿಗೆ ಎಲ್ಲಿ ಪ್ರಾಶಸ್ತ್ಯವಿದೆ? (ಜ್ಞಾನ)
9. ಲೇಖಕರು ಹೇಳುವ ಹಳ್ಳಿಯ ಹೋಟೆಲಿನ ಹೆಸರೇನು? (ಜ್ಞಾನ)
10. ಯಾವುದಕ್ಕೆ ಭೇಟಿ ಕೊಡಬೇಕೆಂದು ಲೇಖಕರು ಹೇಳುತ್ತಾರೆ? (ಜ್ಞಾನ)
11. ಶುಭ್ರ ಸಮವಸ್ತ್ರದ ಮಾಣಿಯನ್ನು ಎಲ್ಲಿ ಕಾಣಬಹುದು? (ಜ್ಞಾನ)
12. ಅನಕ್ಷರಸ್ಥರ ಪಾರ್ಲಿಮೆಂಟು ಎಂದು ಲೇಖಕರು ಯಾವುದನ್ನು ಕರೆದಿದ್ದಾರೆ? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ಪಟ್ಟಣದ ಹೊಟೇಲಿನ ಕಟ್ಟಡ ಹೇಗಿದೆ? (ಗ್ರಹಿಕೆ)
2. ಹಳ್ಳಿಯ ಚಹಾದ ಅಂಗಡಿಯೆಂದರೆ ಹೇಗಿರುತ್ತದೆ? (ಗ್ರಹಿಕೆ)
3. ಭಾವೈಕ್ಯತೆ ಈ ದೇಶದಲ್ಲಿ ಎಲ್ಲಿದೆ? (ಗ್ರಹಿಕೆ)

4. ರೋಗಿಗಳ ಹಾಗೂ ಪಥ್ಯ ಮಾಡುವವರ ಜಿದ್ದು ಎಂತಹುದು? (ಗ್ರಹಿಕೆ)
5. ಗಿಡ್ಡ ಮಾಸ್ತರು ಶಾಲೆಯಲ್ಲಿ ಹುಡುಗರಿಗೆ ಏಕೆ ಹೊಡೆಯುತ್ತಾರೆ? (ಗ್ರಹಿಕೆ)
6. ಹಳ್ಳಿಗರ ಆಕ್ಷೇಪದ ವಿಷಯ ಯಾವುದು? (ಗ್ರಹಿಕೆ)
7. ಸುದ್ದಿಯ ಸೂರಪ್ಪನಾದ ಭರಮಣ್ಣ ಗೊಂಬೆಯನ್ನು ಹೇಗೆ ವರ್ಣಿಸುತ್ತಾನೆ? (ಗ್ರಹಿಕೆ)
8. ಚಹಾಫಳಾರದ ಅಂಗಡಿಯ ಆಜೀವ ಸದಸ್ಯರಾಗಿಬಿಡುವವರು ಯಾರು? (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. ಅದು ಯಾವ ಶಸ್ತ್ರಕ್ಕೂ ಮಣಿಯದು. (ಅಭಿವ್ಯಕ್ತಿ)
2. ಇಂದು ಸ್ಪೆಶಲ್ ಅವಲಕ್ಕಿ ಸೂಸಲ ಮಾಡಿದ್ದೇನೆ. (ಅಭಿವ್ಯಕ್ತಿ)
3. ಅನಕ್ಷರಸ್ಥರ ಪಾರ್ಲಿಮೆಂಟು. (ಅಭಿವ್ಯಕ್ತಿ)
4. ನನ್ನ ದೃಷ್ಟಿಯಲ್ಲಿ ವಾರ್ತಾ ಇಲಾಖೆ ಇದ್ದಂತೆ. (ಅಭಿವ್ಯಕ್ತಿ)
5. ಇಳಕಲ್ ಸೀರೆ ಉಟ್ಟ ಗುಳೇದಗುಡ್ಡ ಕುಪ್ಪಸ ತೊಟ್ಟ ಹೆಣ್ಣಿದ್ದಂತೆ. (ಅಭಿವ್ಯಕ್ತಿ)
6. ಭಜಿಯಂ ತಿನ್ನದ ಜನ್ಮ ವ್ಯರ್ಥ. (ಅಭಿವ್ಯಕ್ತಿ)
7. 'ನನ್ನ ಹೆಸರ್ಲೆ ಹಚ್ರಿ.' (ಅಭಿವ್ಯಕ್ತಿ)
8. ಈಗ ಸಿನೆಮಾ ದೇವತೆಗಳ ದರ್ಶನವೂ ಆಗುತ್ತದೆ. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ಹಳ್ಳಿಯ ಚಹಾದಂಗಡಿಯನ್ನು ಪರಿಚಯಿಸಿ. (ಪ್ರಶಂಸೆ)
2. ಪಟ್ಟಣದ ಚಹಾದಂಗಡಿಗಳು ಹೇಗಿರುತ್ತವೆ? (ಪ್ರಶಂಸೆ)
3. ಹಳ್ಳಿ ಮತ್ತು ಪಟ್ಟಣ ಹೊಟೇಲುಗಳ ಮಾಣಿಯ ಕುರಿತು ಬರೆಯಿರಿ. (ಪ್ರಶಂಸೆ)
4. ಹಳ್ಳಿಗರು ಹೊತ್ತನ್ನು ಹೇಗೆ ಕಳೆಯುತ್ತಾರೆ? ವಿವರಿಸಿ. (ಪ್ರಶಂಸೆ)
5. ಹಳ್ಳಿಯ ಹೊಟೇಲುಗಳಲ್ಲಿ ಬಂದ ನವೀನತೆಯ ಕುರಿತು ಬರೆಯಿರಿ. (ಪ್ರಶಂಸೆ)
6. ಜನರು ತಮ್ಮ ವಿವಿಧ ಬಗೆಯ ಭಾವನೆಗಳಿಗೆ ಹಳ್ಳಿಯ ಚಹಾಹೋಟೆಲಿನಲ್ಲಿ ಹೇಗೆ ಅಭಿವ್ಯಕ್ತಿಯನ್ನೀಯುತ್ತಾರೆ? (ಪ್ರಶಂಸೆ)
7. ಚಹಾದಂಗಡಿಯ ಪರಮಭಕ್ತರು ಯಾರು? ವಿವರಿಸಿ. (ಪ್ರಶಂಸೆ)

******

## : ದೀರ್ಘಗದ್ಯ :

### ಕೃಷ್ಣೇಗೌಡನ ಆನೆ – ಕೆ.ಪಿ.ಪೂರ್ಣಚಂದ್ರ ತೇಜಸ್ವಿ

**ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):**

1. ನಿರೂಪಕರಿಗೆ ಯಾವ ಕೆಲಸ ಖಾಯಮ್ಮಾಗಿತ್ತು? (ಜ್ಞಾನ)
2. ಖಾಕಿ ಪ್ಯಾಂಟ್‌ಧಾರಿ ಕಾಲುಗಳನ್ನು ನೋಡಿ ನಿರೂಪಕರಿಗೆ ಯಾವ ಡಿಪಾರ್ಟ್‌ಮೆಂಟ್ ನೆನಪಿಗೆ ಬಂತು? (ಜ್ಞಾನ)
3. ದುರ್ಗಪ್ಪ ಯಾವುದನ್ನು ತರ್ಲೆ ಡಿಪಾರ್ಟ್‌ಮೆಂಟ್ ಎಂದು ಹೇಳಿದ? (ಜ್ಞಾನ)
4. ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದನು? (ಜ್ಞಾನ)
5. ದುರ್ಗಪ್ಪ ಕೊಡಲಿಯನ್ನು ಎಲ್ಲಿ ಹುಡುಕಿದ? (ಜ್ಞಾನ)
6. ಹಾಳಾಗಿದ್ದ ಕೊಡಲಿ ನೋಡಲು ಹೇಗೆ ಕಾಣುತ್ತಿತ್ತು? (ಜ್ಞಾನ)
7. ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು? (ಜ್ಞಾನ)
8. ಕೃಷ್ಣೇಗೌಡರ ಆನೆಯ ಹೆಸರೇನು? (ಜ್ಞಾನ)
9. ಆನೆಗೆ ಜಗದ್ಗುರುಗಳನ್ನು ಹೊರುವ ಕೆಲಸ ತಪ್ಪಿಹೋದುದೇಕೆ? (ಜ್ಞಾನ)
10. ಸರ್ಕಾರ ಯಾವ ಕಂಪನಿಗೆ ಬೆಂಕಿಕಡ್ಡಿ ಮರ ಕಡಿಯಲು ಗುತ್ತಿಗೆ ಕೊಟ್ಟಿತ್ತು? (ಜ್ಞಾನ)
11. ಆನೆಯ ಮಾವುತನ ಹೆಸರೇನು? (ಜ್ಞಾನ)

12. ಕೃಷ್ಣೇಗೌಡ ದುಡ್ಡಿನ ಮುಖ ನೋಡಿದ್ದು ಯಾವಾಗ? (ಜ್ಞಾನ)
13. ಕೃಷ್ಣೇಗೌಡನ ಆನೆ ಯಾರ ಅಂಗಡಿಯನ್ನು ದೂಡಿ ಬೀಳಿಸಿತ್ತು? (ಜ್ಞಾನ)
14. ರಹಮಾನ್ 'ಐ ವಿಟ್‌ನೆಸ್' ಎಂದು ಯಾರನ್ನು ತೋರಿಸಿದನು? (ಜ್ಞಾನ)
15. ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು? (ಜ್ಞಾನ)
16. ಆನೆ ಇಲ್ಲದ್ದರಿಂದ ವೇಲಾಯುಧ ಎಲ್ಲಿ ಕೆಲಸಕ್ಕೆ ಸೇರಿದ? (ಜ್ಞಾನ)
17. ಫಾರೆಸ್ಟರ್ ಹೆಸರೇನು? (ಜ್ಞಾನ)
18. ನಾಗರಾಜನ ಬಳಿ ಬಂದ ನಿರೂಪಕರು ಏನೆಂದು ಕೇಳಿದರು? (ಜ್ಞಾನ)
19. ನಿರೂಪಕರಿಗಿದ್ದ ಕೆಟ್ಟ ಕುತೂಹಲ ಯಾವುದು? (ಜ್ಞಾನ)
20. ನಿಶೆಯಲ್ಲಿದ್ದ ವೇಲಾಯುಧನಿಗೆ ಸಾಮಿಲ್ಲಿನಲ್ಲಿ ಯಾವ ವಿಚಾರ ಮರೆತುಹೋಯಿತು? (ಜ್ಞಾನ)
21. ಯಾರು ಆನೆಯನ್ನು ಬಾಡಿಗೆ ಕೊಟ್ಟು ಕೆಲಸಕ್ಕೆ ಕರೆದೊಯ್ಯುತ್ತಿದ್ದರು? (ಜ್ಞಾನ)
22. ಕ್ಲೀನರ್ ಹಗ್ಗ ಬಿಚ್ಚುವ ಬದಲು ಯಾರನ್ನು ಹುಡುಕುತ್ತಿದ್ದ? (ಜ್ಞಾನ)
23. ದುರ್ಗಪ್ಪನಿಗೆ ಯಾವ ಲೈನು ನೋಡಿಕೊಳ್ಳುವ ಜವಾಬ್ದಾರಿ ವಹಿಸಲಾಗಿತ್ತು? (ಜ್ಞಾನ)
24. ದಾರಿ ಬದಿಯಲ್ಲಿ ನಿಂತಿದ್ದ ಲೂನ ಯಾರದು? (ಜ್ಞಾನ)
25. ಜಬ್ಬಾರ್ ವೆಟರ್ನರಿ ಆಸ್ಪತ್ರೆಗೆ ಬರಲು ಕಾರಣವೇನು? (ಜ್ಞಾನ)
26. ಪುಟ್ಟಯ್ಯ ಯಾರು? (ಜ್ಞಾನ)
27. ಮುನ್ಸಿಪಾಲಿಟಿ ಪ್ರೆಸಿಡೆಂಟರ ಹೆಸರೇನು? (ಜ್ಞಾನ)
28. ಜಬ್ಬಾರನ ಸಂಬಳ ಎಷ್ಟು? (ಜ್ಞಾನ)
29. ನಿರೂಪಕರ ಪ್ರಕಾರ ಮುನ್ಸಿಪಾಲಿಟಿ ಪ್ರೆಸಿಡೆಂಟರ ಕರ್ತವ್ಯ ಯಾವುದು? (ಜ್ಞಾನ)
30. ಟೆಲಿಫೋನ್ ಕಂಬದಮೇಲೆ ಮೃತನಾದ ಲೈನ್‌ಮೆನ್ ಯಾರು? (ಜ್ಞಾನ)
31. ರಮೇಶ್‌ಬಾಬು ಯಾರು? (ಜ್ಞಾನ)
32. ಕತ್ತಲಲ್ಲಿ ನೆಲದಿಂದ ಮೇಲೆದ್ದು ನೇತಾಡುತ್ತಿದ್ದುದು ಎಷ್ಟನೇ ನಂಬರಿನ ಕಂಬ?(ಜ್ಞಾನ)
33. ಟೆಲಿಫೋನ್ ಸಿಬ್ಬಂದಿ ಯಾರ ವಿರುದ್ಧ ಮುಷ್ಕರ ಹೂಡಿದರು? (ಜ್ಞಾನ)
34. ಹಳೆಕೊಪ್ಪದಲ್ಲಿ ಯಾರ ಮನೆಯ ಮಾಡು ದೊಪ್ಪನೆ ಕುಸಿದುಬಿತ್ತು? (ಜ್ಞಾನ)
35. ಯಾವ ವಿಷಯ ಪ್ರಸ್ತಾಪಿಸಲು ಲೇಖಕರು ಮೀಟಿಂಗಿಗೆ ಹೋಗಿದ್ದರು? (ಜ್ಞಾನ)
36. ಆನೆಯ ಕಾಲಿಗೆ ಸರಪಳಿ ಕಟ್ಟದೆ ಇರಲು ಕೃಷ್ಣೇಗೌಡ ಕೊಟ್ಟ ಕಾರಣವೇನು? (ಜ್ಞಾನ)
37. ರೇಂಜರ್ ಆನೆಗೆ ಶೂಟ್ ಮಾಡುವಂತೆ ಯಾರಿಗೆ ಸೂಚಿಸಿದರು? (ಜ್ಞಾನ)
38. ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು? (ಜ್ಞಾನ)
39. ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ? (ಜ್ಞಾನ)
40. ಆನೆ ಬೇಲಿದಾಟಿ ಹೋಯ್ತೆಂದು ನಾಗರಾಜನಿಗೆ ಹೇಳಿದವರಾರು? (ಜ್ಞಾನ)
41. ಸಾರ್ವಜನಿಕರು ನಾಗರಾಜನ ಸಾವಿನ ಬಗ್ಗೆ ಏನೆಂದು ಯೋಚಿಸಿದರು? (ಜ್ಞಾನ)
42. ಪೊಲೀಸರು ಏನೆಂದು ಮಹಜರು ಬರೆದುಕೊಂಡರು? (ಜ್ಞಾನ)
43. ಕೃಷ್ಣೇಗೌಡನನ್ನು ಕಾಡಿದ ಕಳವಳವೇನು? (ಜ್ಞಾನ)

**ಆ) ಎರಡು ಅಂಕಗಳ ಪ್ರಶ್ನೆಗಳು (ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ಲೇಖಕರಿಗೆ ಜೀಪಿನ ವಿಷಯದಲ್ಲಿ ಯಾವ ಸಲಹೆ ಸರಿತೋರಲಿಲ್ಲ? (ಗ್ರಹಿಕೆ)
2. ಭಾಷೆ ಉಪಯೋಗಿಸಿ ಕರೆಯಬೇಕೆಂದರೆ ಇರುವ ತೊಂದರೆಗಳೇನು? (ಗ್ರಹಿಕೆ)
3. ನಮ್ಮ ಕಡೆ ಕೆಮ್ಮುವುದು ಕಾಲಿಂಗ್ ಬೆಲ್ ಇದ್ದಹಾಗೆ ಎಂದು ನಿರೂಪಕರು ಹೇಳುವುದೇಕೆ? (ಗ್ರಹಿಕೆ)
4. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು? (ಗ್ರಹಿಕೆ)
5. ಕೊಂಬೆ ಲೈನ್ ಮೇಲೆ ಬೀಳಲು ಆನೆ ಕಾರಣವೆಂದು ದುರ್ಗಪ್ಪ ಹೇಗೆ ಹೇಳಿದ? (ಗ್ರಹಿಕೆ)
6. ನಿರೂಪರು ಕೊಡಲಿ ಅಮೂಲ್ಯವಾದುದಾಗಿರಲಿಲ್ಲ ಎಂದು ಹೇಳಲು ಕಾರಣವೇನು? (ಗ್ರಹಿಕೆ)

7. ಕೃಷ್ಣೇಗೌಡನ ಆನೆ ಹುಟ್ಟಿ ಬೆಳೆದ ಬಗೆ ಹೇಗೆ? (ಗ್ರಹಿಕೆ)
8. ಕೃಷ್ಣೇಗೌಡನ ಆನೆ ಮೂಡಿಗೆರೆ ಪೇಟೆಗೆ ಹೇಗೆ ಒಗ್ಗಿಕೊಂಡಿತ್ತು? (ಗ್ರಹಿಕೆ)
9. ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ? (ಗ್ರಹಿಕೆ)
10. ಕೃಷ್ಣೇಗೌಡ ಗೂಳೂರು ಮಠದ ಆನೆಯನ್ನು ಕೊಂಡುಕೊಂಡದ್ದು ಏಕೆ? (ಗ್ರಹಿಕೆ)
11. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು? (ಗ್ರಹಿಕೆ)
12. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ? (ಗ್ರಹಿಕೆ)
13. ರಹಮಾನ್ ಆನೆ ತನ್ನ ಅಂಗಡಿ ಬೀಳಿಸಿತು ಎಂದದ್ದನ್ನು ವೇಲಾಯುಧ ಒಪ್ಪಲಿಲ್ಲವೇಕೆ? (ಗ್ರಹಿಕೆ)
14. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು? (ಗ್ರಹಿಕೆ)
15. ಕೊಡಲಿ ಕುರಿತು ನಿರೂಪಕರು ನಾಗರಾಜನನ್ನು ಪ್ರಶ್ನಿಸಿದಾಗ ಅವನು ಹೇಳಿದ್ದೇನು? (ಗ್ರಹಿಕೆ)
16. ಎಲ್ಲಿಗೆ ಮತ್ತು ಏಕೆ ರಾತ್ರೋರಾತ್ರಿ ಆನೆಯನ್ನು ಕರೆದುಕೊಂಡು ಹೋದರು? (ಗ್ರಹಿಕೆ)
17. ನಿರೂಪಕರಿಗೆ ಆನೆಗಳ ಬಗ್ಗೆ ಯಾವ ಅನುಮಾನ ಮೂಡಿತು? (ಗ್ರಹಿಕೆ)
18. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್‌ಒನ್ ಎನಿಮಿಗಳು ಯಾರು ಯಾರು? (ಗ್ರಹಿಕೆ)
19. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು? (ಗ್ರಹಿಕೆ)
20. ಆನೆ ಮರ ತಳ್ಳುವ ಬಗೆಯನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ? (ಗ್ರಹಿಕೆ)
21. ಡ್ರೈವರ್‌ನ ತಲೆ ಜಜ್ಜಿ ಹೋದದ್ದು ಹೇಗೆ? ಆನೆ ಅದಕ್ಕೆ ಕಾರಣವೆ? (ಗ್ರಹಿಕೆ)
22. ತನ್ನ ಕೆಲಸ ಅತ್ಯಂತ ಅಪಾಯಕಾರಿಯೆಂದು ದುರ್ಗಪ್ಪ ವಿವರಿಸಿದ್ದು ಹೇಗೆ? (ಗ್ರಹಿಕೆ)
23. ಪೋಸ್ಟಲ್ ಡಿಪಾರ್ಟ್‌ಮೆಂಟ್ ಸೇವೆ ವಿಸ್ತರಿಸಿದ್ದು ಜಬ್ಬಾರನ ಮೇಲೆ ಬೀರಿದ ಪರಿಣಾಮವೇನು? (ಗ್ರಹಿಕೆ)
24. ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ? (ಗ್ರಹಿಕೆ)
25. ನಿರೂಪಕರು ಕ್ಯಾಲಿಕ್ಯುಲೇಟರಿನಲ್ಲಿ ಲೆಕ್ಕಹಾಕಿ ಜಬ್ಬಾರ್‌ಗೆ ಏನೆಂದರು? (ಗ್ರಹಿಕೆ)
26. ನಾಯಿ ಕಚ್ಚಿದ್ದೆಲ್ಲಿ ಎಂದಾಗ ಜಬ್ಬಾರ್ ಇರುಸುಮುರುಸಿನಿಂದ ಏನು ಹೇಳಿದನು? (ಗ್ರಹಿಕೆ)
27. ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದ? (ಗ್ರಹಿಕೆ)
28. ಜಬ್ಬಾರ್ ತಾನು ವೆಟರ್ನರಿ ಆಸ್ಪತ್ರೆಗೆ ಬಂದುದಕ್ಕೆ ಕೊಟ್ಟ ಕಾರಣವೇನು? (ಗ್ರಹಿಕೆ)
29. ನಾಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು? (ಗ್ರಹಿಕೆ)
30. ನಾಯಿಗಳ ಸಂಖ್ಯೆ ನಿಯಂತ್ರಣಕ್ಕೆ ಬಾರದಿರಲು ಖಾನ್‌ಸಾಹೇಬ ಕೊಟ್ಟ ಕಾರಣವೇನು? (ಗ್ರಹಿಕೆ)
31. ಆನೆಯೇ ತಿಪ್ಪಣ್ಣನ ಸಾವಿಗೆ ಕಾರಣವೆಂದು ದುರ್ಗಪ್ಪ ಹೇಳಿದಾಗ ನಿರೂಪಕರ ಪ್ರತಿಕ್ರಿಯೆ ಏನು? (ಗ್ರಹಿಕೆ)
32. ಶಂಕ್ರಪ್ಪ, ಕಂಬದಲ್ಲಿ ಏನೋ ಸೇರ್ಕೊಂಡಿದೆ ಎಂದಾಗ ರಮೇಶ್‌ಬಾಬುಗೆ ಹೊಳೆದ ಸಂಗತಿ ಯಾವುದು? (ಗ್ರಹಿಕೆ)
33. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು? (ಗ್ರಹಿಕೆ)
34. ಆನೆಯನ್ನು ಇತರರಿಗೆ ದಾಟಿಸಿಬಿಡಲು ಕೃಷ್ಣೇಗೌಡನಿಗಿದ್ದ ತೊಡಕುಗಳೇನು? (ಗ್ರಹಿಕೆ)
35. ಬೇಸಿಗೆ ಬಂತೆಂದರೆ ಮೂಡಿಗೆರೆಯ ಜನರಲ್ಲಿ ಕೆದರುವ ಭಾವನೆಗಳಾವುವು? (ಗ್ರಹಿಕೆ)
36. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ? (ಗ್ರಹಿಕೆ)
37. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಸಾವಿಗೆ ಆನೆ ಕಾರಣವಲ್ಲವೆಂದು ವೇಲಾಯುಧ ಯಾರಿಗೂ ಹೇಳಲಿಲ್ಲವೇಕೆ?
38. ವೇಲಾಯುಧನ ಸಾವಿಗೂ ಕೃಷ್ಣೇಗೌಡನ ಆನೆಗೂ ಸಂಬಂಧವಿಲ್ಲ ಎಂಬುದನ್ನು ಪ್ರಕಾಶ್ ಯಾವ ಆಧಾರದ ಮೇಲೆ ಹೇಳಿದರು? (ಗ್ರಹಿಕೆ)
39. ಖೇಡಿಗಳು ನಾಗರಾಜನನ್ನು ಖೂನಿ ಮಾಡಿರುವರೆಂದು ರಾಮಪ್ಪ ಹೇಗೆ ವಿವರಿಸಿದ? (ಗ್ರಹಿಕೆ)
40. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು? (ಗ್ರಹಿಕೆ)
41. ಗುರುತುಸಿಗದ ಹೆಣ ವೇಲಾಯುಧನದು ಎಂದು ತಿಳಿದಮೇಲೆ ಪೋಲೀಸರಿಗೆ ಬಂದ ಪೀಕಲಾಟವೇನು? (ಗ್ರಹಿಕೆ)

**ಇ) ಮೂರು ಅಂಕಗಳ ಪ್ರಶ್ನೆಗಳು (ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು):**

1. ನಮ್ಮ ಕಡೆ ಕೆಮ್ಮು ಕಾಲಿಂಗ್‌ಬೆಲ್ ಇದ್ದಹಾಗೆ. (ಅಭಿವ್ಯಕ್ತಿ)
2. ಕರೆಂಟು ಕೆಲಸಕ್ಕೆ ಕೊಡಲಿ ಯಾಕೋ? (ಅಭಿವ್ಯಕ್ತಿ)

3. ಆ ಮರದ ಕೆಳಗೆ ಬುಟ್ಟಿಗಟ್ಲೆ ಬಿದ್ದಿಲ್ಲವ ಅದರ ಲದ್ದಿ! (ಅಭಿವ್ಯಕ್ತಿ)
4. ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ. (ಅಭಿವ್ಯಕ್ತಿ)
5. ರೆಹಮಾನ್ ಎರಡು ಮಾತು ಅನ್ನಬಾರದ್ದನ್ನು ಅಂದುಬಿಟ್ಟ. (ಅಭಿವ್ಯಕ್ತಿ)
6. ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೋ. (ಅಭಿವ್ಯಕ್ತಿ)
7. ಕೃಷ್ಣೇಗೌಡರ ಆನೆ ಇಂಥ ಪುಂಡು ಆನೆ ಎಂದು ಗೊತ್ತಿರಲಿಲ್ಲ. (ಅಭಿವ್ಯಕ್ತಿ)
8. ವೆಪನ್ ಸಾರ್, ವೆಪನ್ ನಮಗೆ ಮುಖ್ಯ. (ಅಭಿವ್ಯಕ್ತಿ)
9. ನಿನ್ನ ಪುಕಾರೇನಿದ್ರೂ ಬರವಣಿಗೇಲಿ ಇರಬೇಕು. (ಅಭಿವ್ಯಕ್ತಿ)
10. ಡ್ರೈವರಣ್ಣ ಎತ್ಲಾಗಿ ಹೋದ! ಇಲ್ಲೇ ಇದ್ನಲ್ಲ! (ಅಭಿವ್ಯಕ್ತಿ)
11. ಕುಡುಕ್‌ನನ್ನಮಗನೆ ಎಂಥ ಗಂಡಾಂತ್ರ ತಂದಿಟ್ಟೆ ನೋಡು. (ಅಭಿವ್ಯಕ್ತಿ)
12. ಕುಶಾಲಿಗಂತ ಸೊಂಡಿಲು ಬೀಸಿದರೆ ಸಾಕಲ್ಲ. (ಅಭಿವ್ಯಕ್ತಿ)
13. ಅಯ್ಯೋ ಯಾವೋ ಮದ್ವೆಮನೆ ಕಾಗದ ಸಾರ್. (ಅಭಿವ್ಯಕ್ತಿ)
14. ಪೋಸ್ಟುಬಾಕ್ಸ್‌ಗಳನ್ನು ನೇತುಹಾಕುವುದು ಕಡಿಮೆ ಖರ್ಚಲ್ಲವೆ! (ಅಭಿವ್ಯಕ್ತಿ)
15. ಹದಿನಾಲ್ಕು ಇಂಜೆಕ್ಷನ್ ಹೊಟ್ಟೇಗೆ ಚುಚ್ಚಿಸ್ಕೋತೀನಿ. (ಅಭಿವ್ಯಕ್ತಿ)
16. ಕಂತ್ರಿನಾಯಿಗಳನ್ನು ಕಡಿಮೆ ಮಾಡೋದಕ್ಕೆ ಆಗೋಲ್ವೇ? (ಅಭಿವ್ಯಕ್ತಿ)
17. ಹೌದಾ ಎಲ್ಲಿ ಕಚ್ಚಿತೋ ಜಬ್ಬಾರ್? (ಅಭಿವ್ಯಕ್ತಿ)
18. ಕೃಷ್ಣೇಗೌಡರ ಆನೆಗೂ ಕಚ್ಚಿದೆ ಅಂತ ವರ್ತಮಾನ ಉಂಟಪ್ಪ. (ಅಭಿವ್ಯಕ್ತಿ)
19. ದುಣ್ಣಮುಂಡೆ ಆನೆಯನ್ನು ತೂಗೋದಕ್ಕೆ ತಕ್ಕಡಿ ಎಲ್ಲಿಂದ ತರ್ತೀರ ಹೇಳಿ. (ಅಭಿವ್ಯಕ್ತಿ)
20. ನಂಗೇನು ಈ ನಾಯಿಗಳನ್ನ ಕಂಡರೆ ಪ್ರೀತೀನಾ ಸ್ವಾಮಿ! (ಅಭಿವ್ಯಕ್ತಿ)
21. ಹೊರಗಡೆಯಿಂದ ಇಲ್ಲಿಗೆ ಎಕ್ಸ್‌ಪೋರ್ಟ್ ಆದವು. (ಅಭಿವ್ಯಕ್ತಿ)
22. ಮುನಿಸಿಪಲ್ ಪ್ರೆಸಿಡೆಂಟಾಗಿ ಈ ಊರನ್ನು ಸ್ವಚ್ಛವಾಗಿಡೋದು ನಿಮ್ಮ ಕರ್ತವ್ಯ. (ಅಭಿವ್ಯಕ್ತಿ)
23. ಇನ್ನು ಮೇಲೆ ನಾಯಿ ಕೊಂದರೆ ಬಾಲ ತಗೊಂಡು ಬಂದು ತೋರಿಸಬೇಕು ಅಂತ ಹೇಳಿ. (ಅಭಿವ್ಯಕ್ತಿ)
24. ಕಂಬದ ಮೇಲೇ ಯಾಕೋ ಕೈಲಾಸ ಕಂಡಹಾಗೆ ಇದೆಯಲ್ಲಾ. (ಅಭಿವ್ಯಕ್ತಿ)
25. ಈ ಕಂಬದೊಳ್ಗೆ ಏನೋ ಸೇರ್ಕೊಂಡಿದೆ. (ಅಭಿವ್ಯಕ್ತಿ)
26. ಸತ್ತಿರೋ ತಿಪ್ಪಣ್ಣನಿಗೂ, ಎಲ್ಲೋ ಓಡಾಡಿಕೊಂಡಿರೋ ಆನೆಗೂ ಕಟ್ಟೇರಲ್ಲಯ್ಯ. (ಅಭಿವ್ಯಕ್ತಿ)
27. ಅದು ಸತ್ರೆ ಸಾಯಲಿ ಬಿಡೋ. ಅದ್ಕೇನು ಮಕ್ಳಾ ಮರಿಯಾ? (ಅಭಿವ್ಯಕ್ತಿ)
28. ಇತ್ತಲಾಗಿ ಮುಖ ಹಾಕಲಿ ಅದನ್ನು ಕೋವೀಲೆ ಹೊಡೀತೀನಿ. (ಅಭಿವ್ಯಕ್ತಿ)
29. ಕಾಡಾನೆಗಳ ಕಾಟಕ್ಕೂ ಈ ಹೆಣ್ಣಾನೆಯೇ ಕಾರಣ. (ಅಭಿವ್ಯಕ್ತಿ)
30. ಸತ್ತಿರೋದು ನಿಮ್ಮದು ಇವತ್ತಲ್ಲಾ ನಾಳೆ ನೀವೇ ಕೊಂದು ತಿನ್ನೋ ಪ್ರಾಣಿ. (ಅಭಿವ್ಯಕ್ತಿ)
31. ಸರಿಯಾದ ವೆಪನ್ ಕೊಟ್ಟರೆ ಅದನ್ನು ಈಗಿಂದೀಗಲೇ ಶೂಟ್ ಮಾಡಿ ಬಿಡುತ್ತೇನೆ. (ಅಭಿವ್ಯಕ್ತಿ)
32. ಆನೆ ಮಾತ್ರ ಏನು ಮಾಡಿದರೂ ಸುಮ್ಮನಿರ್ತೀಯ. ಅದು ಹೆಣ್ಣಾನೆ ತಿಳುಕೋ! (ಅಭಿವ್ಯಕ್ತಿ)
33. ಆನೆ ಬೇಲಿ ದಾಟಿ ಹೋಯ್ತು ಸಾರ್. (ಅಭಿವ್ಯಕ್ತಿ)
34. ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ. (ಅಭಿವ್ಯಕ್ತಿ)

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ. (ಪ್ರಶಂಸೆ)
2. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ. (ಪ್ರಶಂಸೆ)
3. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು? (ಪ್ರಶಂಸೆ)
4. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ? (ಪ್ರಶಂಸೆ)
5. ಎಲ್ಲರ ನಿರೀಕ್ಷೆ ಸುಳ್ಳಾಗುವಂತೆ ಕೃಷ್ಣೇಗೌಡ ಆನೆಯನ್ನು ಹೇಗೆ ಸಾಕಿದನು? (ಪ್ರಶಂಸೆ)
6. ಆನೆ ರೆಹಮಾನನ ಅಂಗಡಿ ಬೀಳಿಸಿದ ಸಂದರ್ಭವನ್ನು ಚಿತ್ರಿಸಿ. (ಪ್ರಶಂಸೆ)

7. ಕಾಡಾನೆಗಳ ಹಾವಳಿ ನಿರೂಪಕರ ಅನುಭವಕ್ಕೆ ಬಂದುದು ಹೇಗೆ? (ಪ್ರಶಂಸೆ)
8. ಮೂಡಿಗೆರೆಯಲ್ಲಿ ಪ್ರಕಾಶ್ ಮಾಡಿದ ಭಾಷಣದ ಪರಿಣಾಮಗಳನ್ನು ವಿವರಿಸಿ. (ಪ್ರಶಂಸೆ)
9. ಅರಣ್ಯ ಇಲಾಖೆಯ ಶತ್ರುಗಳ ಕಾರ್ಯಭಾರವನ್ನು ನಾಗರಾಜ ವಿವರಿಸಿದ್ದು ಹೇಗೆ? (ಪ್ರಶಂಸೆ)
10. ನಿದ್ರೆ ಮಂಪರಿನಲ್ಲಿದ್ದ ಡ್ರೈವರ್ ಪರಂಧಾಮಕ್ಕೆ ಹೋದ ಸಂದರ್ಭವನ್ನು ವಿವರಿಸಿ. (ಪ್ರಶಂಸೆ)
11. ಡ್ರೈವರ್ ಸಾವಿನ ಸುದ್ದಿಯನ್ನು ಶಿವೇಗೌಡ ಮತ್ತಿತರರು ಹೇಗೆ ಮುಚ್ಚಿ ಹಾಕಿದರು? (ಪ್ರಶಂಸೆ)
12. ದುರ್ಗಪ್ಪನಿಗೆ ಲೈನ್‌ಮೆನ್ ಕೆಲಸ ರೋಸಿ ಹೋಗಲು ಕಾರಣಗಳೇನು? (ಪ್ರಶಂಸೆ)
13. ಪೋಸ್ಟ್‌ಮನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ? (ಪ್ರಶಂಸೆ)
14. ಪುಟ್ಟಯ್ಯ ತನ್ನ ಅಸಹಾಯಕತೆಯನ್ನು ಹೇಗೆ ವಿವರಿಸುತ್ತಾನೆ? (ಪ್ರಶಂಸೆ)
15. ಜಬ್ಬಾರ್ ಮತ್ತು ಪುಟ್ಟಯ್ಯ ಸೇರಿ ನಿರೂಪಕರನ್ನು ಖಾನ್ ಸಾಹೇಬನ ಬಳಿ ಹೋಗುವಂತೆ ಪುಸಲಾಯಿಸಿದ ರೀತಿಯನ್ನು ವಿವರಿಸಿ. (ಪ್ರಶಂಸೆ)
16. ಟೆಲಿಫೋನ್ ಲೈನ್‌ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ. (ಪ್ರಶಂಸೆ)
17. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡನ ಆನೆ ಕಾರಣವೆ? ವಿವರಿಸಿ. (ಪ್ರಶಂಸೆ)
18. ಪುರಪ್ರಮುಖರ ಮೀಟಿಂಗಿನಲ್ಲಿ ನಡೆದ ವಾಗ್ವಾದವನ್ನು ಸಂಗ್ರಹಿಸಿ. (ಪ್ರಶಂಸೆ)
19. ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣಗಳೇನು? (ಪ್ರಶಂಸೆ)
20. ವೇಲಾಯುಧನ ಸಾವಿನ ಸಂದರ್ಭವನ್ನು ಚಿತ್ರಿಸಿ. (ಪ್ರಶಂಸೆ)
21. ತನ್ನ ಆನೆಯ ಬಗ್ಗೆ ಕೃಷ್ಣೇಗೌಡನಲ್ಲಿ ಬೇಸರ ಮೂಡಲು ಕಾರಣಗಳೇನು? (ಪ್ರಶಂಸೆ)
22. ಕೃಷ್ಣೇಗೌಡನ ಆನೆ ಕತೆಯಲ್ಲಿ ಬರುವ ಭ್ರಷ್ಟವ್ಯವಸ್ಥೆಯ ಚಿತ್ರಣವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. (ಪ್ರಶಂಸೆ)
23. ಆನೆಯು, ಕತೆಯಲ್ಲಿ ಬರುವ ಬಾಯಿಲ್ಲದ ಜನರ ಸಂಕೇತವಾಗಿರುವುದನ್ನು ವಿವರಿಸಿ. (ಪ್ರಶಂಸೆ)
24. ಕೃಷ್ಣೇಗೌಡನ ಆನೆ ನೀಳ್ಗತೆಯಲ್ಲಿ ಪ್ರಸ್ತಾಪವಾಗಿರುವ ಆನೆ–ಮಾನವರ ನಡುವಿನ ಸಂಘರ್ಷದ ನಿಜಕಾರಣಗಳನ್ನು ವಿಶ್ಲೇಷಿಸಿ.(ಪ್ರಶಂಸೆ)
25. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು? ವಿವರಿಸಿ. (ಪ್ರಶಂಸೆ)

******

**: ರಚನೆ ಮತ್ತು ಭಾಷಾಭ್ಯಾಸ :**

**ಪದ್ಯಭಾಗದ ಭಾವಾರ್ಥ ರಚನೆ : ಈ ಒಟ್ಟು 17 ಪದ್ಯಭಾಗಗಳಲ್ಲಿ ಹಳಗನ್ನಡದ 1, ಹೊಸಗನ್ನಡದ ಪದ್ಯಭಾಗದಲ್ಲಿ 1 ಮಾತ್ರ ಆಯ್ಕೆ ಮಾಡಿಕೊಡತಕ್ಕದ್ದು.**

1. ಸಮಧಿಕರಾರ್ ಜಗತ್ತ್ರಯದೊಳಿನ್ನೆನಗೆನ್ನೊಳಿದಿರ್ಚುವನ್ನರಾರ್
ಸಮರದೊಳೆಂದು ತನ್ನ ಭುಜದಂಡವನೀಕ್ಷಿಸಿ ಜಾನಕೀಮುಖಾ
ಬ್ಜವನವಲೋಕಿಸಲ್ ಕರಮೆ ಕಾತರನಾಗಿ ವಿಯಚ್ಚರಾಧಿಪಂ
ಪ್ರಮದವನಕ್ಕೆ ಬಂದನರಲಂಬುಗಳಿಲ್ಲದ ಕಾಮನೆಂಬಿನಂ

2. ರಾವಣನ ರೂಪು ಸೀತಾ
ದೇವಿಗೆ ತೃಣಕಲ್ಪಮಾಯ್ತು ಪತಿಭಕ್ತಿಯೊಳಾ
ರೀ ವನಿತೆಯ ತೆಱದಿಂ ಸ
ದ್ಭಾವಮನೊಳಕೊಂಡ ಪುಣ್ಯವತಿಯರ್ ಸತಿಯರ್

3. ಕರುಣಿಸುವೊಡೆನಗೆ ದಶಕಂ
ಧರ ಧುರದೊಳ್ ರಘುತನೂಜನಾಯುಃ ಪ್ರಾಣಂ
ಬರೆಗಂ ಬಾರದಿರೆನುತಂ
ಧರಿತ್ರಿಯೊಳ್ ಮೈಯನೊಕ್ಕು ಮೂರ್ಛೆಗೆ ಸಂದಳ್

4. ಇವರಂ ಪ್ರಾಣಪ್ರಿಯರಂ
ನೆವಮಿಲ್ಲದೆ ಕರ್ಮವಶಮೆ ನೆವಮನಸೆ ಕಂದ
ರ್ಪವಿಮೋಹದಿಂದಗಲ್ಲಿದೆ
ನವಿವೇಕಿಯೆನೆನ್ನ ಕುಲದ ಪೆಂಪಟಿವಿನೆಗುಂ

5. ಒಲೆಹತ್ತಿ ಉರಿದೆಡೆ ನಿಲಬಹುದಲ್ಲದೆ
ಧರೆಹತ್ತಿ ಉರಿದೆಡೆ ನಿಲಲುಬಾರದು
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ,
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆಹಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ ।

6. ಪರುಷದ ಗೃಹದೊಳಗಿದ್ದು, ತಿರಿವನೆ ಮನೆಮನೆಯ?
ತೊರೆಯೊಳಗಿದ್ದವನು ತೃಷೆಯಗಲರಸುವನೆ ಕೆರೆಯುದಕವ?
ಮಂಗಳಲಿಂಗ ಲಿಂಗದ ಮೇಲೆ ಇದ್ದು
ಅನ್ಯಲಿಂಗಗಳ ನೆನೆವನೆ ನಿಮ್ಮ ಭಕ್ತನು
ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ ।

7. ಎಲ್ಲರೊಳು ಕಲಿಭಿಮನೇ ಮಿಡು
ಕುಳ್ಳ ಗಂಡನು ಹಾನಿ ಹರಿಬಕೆ
ನಿಲ್ಲದಂಗೈಸುವನು ಕಡು ಹೀಹಾಳಿಯುಳ್ಳವನು
ಖುಲ್ಲನಿವನುಪಟಳವನಾತಂ
ಗೆಲ್ಲವನು ಹೇಳುವೆನು ಬಳಿಕವ
ನಲ್ಲಿ ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ

8. ರಮಣ ಕೇಳುಳಿದವರು ತನ್ನನು
ರಮಿಸುವರು ಮಾನಾರ್ಥವೆನೆ ನಿ
ರ್ಗಮಿಸುವರು ನೀನಲ್ಲದುಳಿದವರುಚಿತ ಬಾಹಿರರು
ಮಮತೆಯಲಿ ನೀನೋಡು ಚಿತ್ತದ
ಸಮತೆಯನು ಬೀಳ್ಕೊಡು ಕುತಾರನ
ಯಮನ ಕಾಣಿಸಿ ಕರುಣಿಸೆಂದಳು ಕಾಂತೆ ಕೈ ಮುಗಿದು

9. ಇನ್ನು ಹುಟ್ಟದೆಯಿರಲಿ ನಾರಿಯ
ರೆನ್ನವೊಲು ಭಂಗಿತರು ಭುವನದೊ
ಳಿನ್ನು ಜನಿಸಲುಬೇಡ ಗಂಡರು ಭೀಮಸನ್ನಿಭರು
ಎನ್ನವೊಲು ಪಾಂಡವರವೊಲಂ ಸಂ
ಪನ್ನ ದುಃಖಿಗಳಾರು ನವೆದರು
ಮುನ್ನಿನವರೊಳಗೆಂದು ದ್ರೌಪದಿ ಹಿರಿದು ಹಲುಬಿದಳು.

10. ಕುರುಳ ನೇವರಿಸಿದನು ಗಲ್ಲವ
ನೊರೆಸಿ ಮುಂಡಾಡಿದನು ಮಂಚದ
ಹೊರೆಯ ಗಿಂಡಿಯ ನೀರಿನಲಿ ತೊಳೆದನು ಮುಖಾಂಬುಜವ

ಅರಸಿ ಬಿಡು ಬಿಡು ಖಾತಿಯನು ವಿ
ಸ್ತರಿಸಲೇಕೆಮ್ಮಣ್ಣನಾಜ್ಞೆಯ
ಗೆರೆಯ ದಾಂಟಿದೆ ದಾಂಟಿದೆನು ಹೋಗೆಂದನಾ ಭೀಮ

11. ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ ।
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ ॥
ಕೆಲವಂ ಸಜ್ಜನ ಸಂಘದಿಂದಲರಿಯಲ್ ಸರ್ವಜ್ಞನಪ್ಪಂ ನರಂ ।
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀ ಚೆನ್ನ ಸೋಮೇಶ್ವರಾ ॥

12. ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣು ಇಲ್ಲ
ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ
ರಸದಲ್ಲಿ ಸ್ವಾದವು ವಿಷದಂತೆ ಇರುತಿಹ

13. ಹಾಲುಂಡ ತವರೀಗೆ ಏನೆಂದು ಹರಸಲಿ ।
ಹೊಳೆದಂಡಿಲಿರುವ ಕರಕೀಯ । ಕುಡಿಯಂಗ]
ಹಬ್ಬಲಿ ಅವರ ರಸಬಳ್ಳಿ

14. ಸಾವಿರ ಗಾಲಿ ಉರುಳಿ ಹೊರಳುವ ರಸ್ತೆಯಂಚಿನೆಲ್ಲೋ
ಕೈ ಹಿಡಿದು ನಡೆಸಿದವಳು, ಇರುವ ಒಂದಿಂಚು
ಕೋಣೆಯಲ್ಲೋ ಹೊರಲೋಕವನು ಪರಿಚಯಿಸಿ
ಎಚ್ಚರಿಕೆ ಕೊಟ್ಟವಳು.

15. ಯಾವಾಗೋ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನಕೇಳಿ
ಮೊದಲಾಗಲೀಗ ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಿ
ಜೀವನದ ನದಿಗೆ ಸೆಳವಿಹುದು, ಮರಣ ಬಂದೀತು ಕ್ಷಣವು ಉರುಳಿ
ಹೋದವರು ತಿರುಗಿ ಬಂದಾರೆ, ಅವರು ಬರಲಿಕ್ಕು ಇಲ್ಲ ಮರಳಿ

16. ನೀವು ಬಡಿದ ಸುತ್ತಿಗೆಗಳು
ಮೊಳೆಗಳು
ಮಕುಟ ಹೆಣೆದ ಮುಳ್ಳುಗಳು
ಹಬ್ಬಿಸಿದ ಸುಳ್ಳುಗಳು
ರೋಮನರ ಕಿವಡೆಬ್ಬಿಸುವ ಕೊಂಬುಗಳು
ಕಾಳರಾಯನ ಗುಜರಿ ಸೇರಿಲ್ಲ
ವೇಷ ಮರೆಸಿವೆ ಅಷ್ಟೆ, ಈ ಎಲ್ಲ ಕೇಡುಗಳು ;
ರೈಫಲ್ಲು, ಟ್ಯಾಂಕು, ಬಾಂಬು, ಗ್ರನೇಡುಗಳು
ಅವಕ್ಕೆ ಚಲನೆಯೊದಗಿಸಿವೆ ;
ನಿಮ್ಮವೇ ಬಲಿಷ್ಟ ಕೈಯಿಗಳು
ಎದೆಯಾಳದ ಮುಯ್ಯಿಗಳು,

17. ಹಂಚಿಕೊಂಡಿದ್ದಾರೆ ಅಪ್ಪ ಅಮ್ಮನನ್ನು
ಇಲ್ಲಿ ದೊಡ್ಡ ಮಗನ ತಾವಲ್ಲಿ ಮುದುಕಿ, ಸದ್ಯ ಕನ್ನಡ ದೇಶ
ಮಗ ಸೊಸೆ ಹೊರಗೆ ಹೋದಾಗಲಾದರೂ ನಾಲ್ಕು ಮಾತಾಡಿ
ತೀರಿಸಿಕೊಳ್ಳುತ್ತಾಳೆ ಬಾಯತುರಿಕೆ, ಪಾಪ ಮುದುಕ ದೂರದ
ಅಸ್ಸಾಮಿನಲ್ಲಿ, ಅಲ್ಲಿಯ ಮಾತು ಅವನಿಗೆ ಸಸೇಮಿರಬರದು

**ಅರ್ಥ ಬರೆಯಿರಿ : ಪ್ರಶ್ನೆ ಸಂಖ್ಯೆ 43 ರಿಂದ 49 ರವರೆಗೆ ಸೂಚನೆಗಳಿಗನುಸಾರವಾಗಿ 7 ಪ್ರಶ್ನೆಗಳಲ್ಲಿ 6 ಪ್ರಶ್ನೆಗಳಿಗೆ ಉತ್ತರಿಸಿ ಎಂದು ಕೇಳುವ ಭಾಗದಲ್ಲಿ ಈ ಕೆಳಗಿನ ಪದಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಳ್ಳತಕ್ಕದ್ದು.**

| | | | | | | |
|---|---|---|---|---|---|---|
| 1. ಖೇಚರ | 2. ಭೃಂಗ | 3. ಭಂಗ | 4. ಪ್ರಮೋದ | 5. ಅರವಿಂದ | 6. ಕಾಮ | 7. ತೃಣ |
| 8. ತಲ್ಲಣ | 9. ಕಂಬನಿ | 10. ಪುಳಕ | 11. ಅಶ್ರುಜಲ | 12. ಡಂಬಕ | 13. ಅಂಧಕ | 14. ಪಥ |
| 15. ಕುಬ್ಜ | 16. ಶಿರ | 17. ಅಂಗ | 18. ಗೃಹ | 19. ಸಸೇಮಿರ | 20. ಸೋಪಾನ | 21. ಅಹಿತ |
| 22. ಕೇಡು | 23. ಧರಿತ್ರಿ | 24. ಸತಿ | 25. ಹೆದೆ | 26. ತಮ | 27. ಮೊಗರು | 28. ಪುತ್ಥಳಿ |
| 29. ಅಗ್ನಿ | 30. ಶಶಿ | 31. ರಮಣ | 32. ಕಲಿ | 33. ಕಾಲರಾಯ | 34. ನಂಜು | 35. ಕುನ್ನಿ |
| 36. ಸುತ | 37. ಖಗ | 38. ಸಲಿಲ | | | | |

**ಸಮಾನಾರ್ಥಕಗಳು : ಪ್ರಶ್ನೆ ಸಂಖ್ಯೆ 43 ರಿಂದ 49 ರವರೆಗೆ ಸೂಚನೆಗಳಿಗನುಸಾರವಾಗಿ 7 ಪ್ರಶ್ನೆಗಳಲ್ಲಿ 6 ಪ್ರಶ್ನೆಗಳಿಗೆ ಉತ್ತರಿಸಿ ಎಂದು ಕೇಳುವ ಭಾಗದಲ್ಲಿ ಈ ಕೆಳಗಿನ ಸಮಾನಾರ್ಥಕಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಳ್ಳತಕ್ಕದ್ದು.**

| | | | | | | |
|---|---|---|---|---|---|---|
| 1. ಚಂದ್ರ | 2. ಕಾಂತಾರ | 3. ಬಾನು | 4. ಕೂಳು | 5. ನಾರಿ | 6. ಕಾಳ | 7. ಕಣ್ಣು |
| 8. ಉರಗ | 9. ಮನೆ | 10. ಅನಲ | 11. ಅದುರು | 12. ಅಶ್ರು | 13. ಇನ | 14. ಉಂಬು |
| 15. ಇಂಗು | 16. ಒಡಲು | 17. ಉಪಟಳ | 18. ಕಂತೆ | 19. ಕವಲು | 20. ಕಡಲು | 21. ಕಲಹ |
| 22. ಕೊರಗು | 23. ಚಿತ್ತ | 24. ಛಾತಿ | 25. ತೃಷೆ | 26. ತಮ | 27. ದಿಗಿಲು | 28. ದಿನ್ನೆ |
| 29. ಗುಡಿ | 30. ಧನ | 31. ಧಣಿ | 32. ಧನಿಕ | 33. ತಾರೆ | 34. ನಿತ್ರಾಣ | 35. ಪಥ |
| 36. ಪ್ರಮೋದ | 37. ಪರಿಮಳ | 38. ಪುಷ್ಪ | 39. ಬಂಗಾರ | 40. ಬಾಲಕಿ | 41. ಮರ | 42. ಮಾಹೆ |
| 43. ಮಾರ | 44. ಮರ್ಕಟ | 45. ರಮಣ | 46. ವಲ್ಲಭೆ | 47. ವ್ಯಗ್ರ | 48. ಸಮರ | 49. ಸೊರಗು |
| 50. ಸುತ | 51. ಕೇಡು | 52. ಕರ್ಮ | 53. ಸಲಿಲ | 54. ವಕ್ತ್ರ | 55. ಪರಾಭವ | 56. ಕಡುಪು |
| 57. ಡಂಬಕ | 58. ಹಂದೆ | 59. ನಂಜು | 60. ದೀಪ | 61. ಹರಿ | 62. ಕುಂದು | 63. ಮೊರೆ |
| 64. ಖತಿ | 65. ಧರೆ | 66. ಕುನ್ನಿ | 67. ಅಟ್ಟ | 68. ಮಾಗು | 69. ಸಂತೈಸು | 70. ತಾಳ್ಮೆ |
| 71. ಮೀಯು | 72. ಸ್ಫುರಿಸು | 73. ಭಿನ್ನಾಣ | 74. ಸಂಕುಲ | 75. ಸ್ವಾದ | 76. ಪಂಕ | 77. ಉದಕ |

**ನಾನಾರ್ಥಕಗಳು : ಪ್ರಶ್ನೆ ಸಂಖ್ಯೆ 43 ರಿಂದ 49 ರವರೆಗೆ ಸೂಚನೆಗಳಿಗನುಸಾರವಾಗಿ 7 ಪ್ರಶ್ನೆಗಳಲ್ಲಿ 6 ಪ್ರಶ್ನೆಗಳಿಗೆ ಉತ್ತರಿಸಿ ಎಂದು ಕೇಳುವ ಭಾಗದಲ್ಲಿ ಈ ಕೆಳಗಿನ ನಾನಾರ್ಥಕಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಳ್ಳತಕ್ಕದ್ದು.**

| | | | | | | |
|---|---|---|---|---|---|---|
| 1. ಸೂಳೆ | 2. ಕರ | 3. ರಾಗ | 4. ಕಳೆ | 5. ಬಗೆ | 6. ದೊರೆ | 7. ಗಂಡ |
| 8. ಹತ್ತಿ | 9. ಏರಿ | 10. ಅರ್ಥ | 11. ತೊರೆ | 12. ನೆನೆ | 13. ಲಘು | 14. ಗುರು |
| 15. ನರ | 16. ಅರಿ | 17. ಮಡಿ | 18. ತೆರ | 19. ಸಾರು | 20. ನಾವು | 21. ರಸ |
| 22. ಪರಿ | 23. ಕೊನೆ | 24. ನೆರೆ | 25. ಹೊಳೆ | 26. ಎಡೆ | 27. ಗುಡಿ | 28. ಕಲಿ |
| 29. ಮರ್ಯಾದೆ | 30. ಹಿಂಡು | 31. ತಿಳಿ | 32. ಬಟ್ಟೆ | 33. ಉಸಿರು | 34. ಹಿಡಿ | 35. ಹದ್ದು |
| 36. ಅಡಿ | 37. ಕಂದ | 38. ಮುನಿ | 39. ಉತ್ತರ | 40. ಅರಸು | 41. ನಡು | 42. ಎಳೆ |
| 43. ಫಲ | 44. ಕವಿ | 45. ಬಂಟ | 46. ಮುಡಿ | | | |

ಪ್ರಶ್ನೆ ಸಂಖ್ಯೆ 43 ರಿಂದ 49 ರವರೆಗೆ ಸೂಚನೆಗಳಿಗನುಸಾರವಾಗಿ 7 ಪ್ರಶ್ನೆಗಳಲ್ಲಿ 6 ಪ್ರಶ್ನೆಗಳಿಗೆ ಉತ್ತರಿಸಿ ಎಂದು ಕೇಳುವ ಭಾಗದಲ್ಲಿ ಸ್ವಂತ ವಾಕ್ಯ ರಚಿಸಲು ಈ ಕೆಳಗಿನ ನಾನಾರ್ಥಕಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಳ್ಳತಕ್ಕದ್ದು.

1. ದೊರೆ 2. ಅಡಿ 3. ಮುನಿ 4. ಪಡೆ 5. ನೆರೆ 6. ಬಟ್ಟೆ 7. ಉಗಿ 8. ಹದ್ದು 9. ಬಗೆ 10. ಕವಿ 11. ಎಡೆ 12. ಅರಿ

**ತತ್ಸಮ– ತದ್ಭವಗಳು :** ಪ್ರಶ್ನೆ ಸಂಖ್ಯೆ 43 ರಿಂದ 49 ರವರೆಗೆ ಸೂಚನೆಗಳಿಗನುಸಾರವಾಗಿ 7 ಪ್ರಶ್ನೆಗಳಲ್ಲಿ 6 ಪ್ರಶ್ನೆಗಳಿಗೆ ಉತ್ತರಿಸಿ ಎಂದು ಕೇಳುವ ಭಾಗದಲ್ಲಿ ಈ ಕೆಳಗಿನ ತತ್ಸಮ–ತದ್ಭವಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಳ್ಳತಕ್ಕದ್ದು

1. ಭಂಗ 2. ಯಶ 3. ವೀರ 4. ಮುಖ 5. ಧರಾ 6. ಆಕಾಶ 7. ಘೂಕ 8. ಪರೀಕ್ಷಿಸು 9. ಅಗ್ನಿ 10. ಗ್ರಹ 11. ಪರ್ಣ 12. ಬೀಜ 13. ದೃಷ್ಟಿ 14. ಕ್ಷಣ 15. ಪಗೆ 16. ಶಿರ 17. ರಾಜ 18. ವೇಷ 19. ಅಕ್ಷರ 20. ಅಟವಿ 21. ಅಜ್ಜ 22. ಆಶ್ಚರ್ಯ 23. ಆಜ್ಞೆ 24. ಆಯುಷ್ಯ 25. ಉತ್ಸಾಹ 26. ಉದ್ಯೋಗ 27. ಋಜು 28. ಐಶ್ವರ್ಯ 29. ಕಪಿಲೆ 30. ಕರ್ಮ 31. ಕಾವ್ಯ 32. ಕಸ್ತೂರಿ 33. ಕ್ಷೀರ 34. ಗುರು 35. ಗೆಳತಿ 36. ಗೃಹ 37. ಚಂದ್ರ 38. ಚತುರ 39. ಜೂಜು 40. ಪಟ 41. ತ್ಯಾಗ 42. ದರ್ಶನ 43. ದೀಪ 44. ದೇವಕುಲ 45. ಧ್ವನಿ 46. ಪಂಕ್ತಿ 47. ಪಕ್ಷಿ 48. ಪದ್ಮ 49. ಪಶು 50. ಭೃಂಗಾರ 51. ಭೂಮಿ 52. ಮರ್ಕಟ 53. ಮೃಗ 54. ವಿಸ್ತಾರ 55. ಶಬ್ದ 56. ಶಯ್ಯಾ 57. ಶೂನ್ಯ 58. ಸಹಸ್ರ 59. ಸ್ನೇಹ 60. ವಸತಿ 61. ಶಾಲಾ 62. ಆಶಾ 63. ಯುಗ 64. ಯವ್ವನ 65. ಶ್ರೀ

**ನುಡಿಗಟ್ಟು :** ಪ್ರಶ್ನೆ ಸಂಖ್ಯೆ 43 ರಿಂದ 49 ರವರೆಗೆ ಸೂಚನೆಗಳಿಗನುಸಾರವಾಗಿ 7 ಪ್ರಶ್ನೆಗಳಲ್ಲಿ 6 ಪ್ರಶ್ನೆಗಳಿಗೆ ಉತ್ತರಿಸಿ ಎಂದು ಕೇಳುವ ಭಾಗದಲ್ಲಿ ಈ ಕೆಳಗಿನ ನುಡಿಗಟ್ಟುಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಳ್ಳತಕ್ಕದ್ದು

1. ಕಾಲುಕೀಳು 2. ಕಣ್ಣು ಕೆಂಪಗೆ ಮಾಡು 3. ಅನ್ನಕ್ಕೆ ಕಲ್ಲು ಹಾಕು 4. ಎಂಜಲಿಗೆ ಕೈಯೊಡ್ಡು 5. ಎರಡು ಬಗೆ 6. ಕೈಕೊಡು 7. ರಾಮಬಾಣ 8. ಪರದೇಶಿ 9. ತಲೆಗೆ ಹತ್ತು 10. ತಲೆಮೇಲೆ ಮೆರೆಸು 11. ಜನ್ಮಜಾಲಾಡು 12. ಗಾಳಿಸುದ್ದಿ 13. ದಾರಿದೀಪ 14. ಟೋಪಿ ಹಾಕು 15. ಕತ್ತಿ ಮಸೆ 16. ಗಾಳಿಗೆ ತೂರು 17. ಅಜ್ಜನ ಕಾಲದ್ದು 18. ಹಿತ್ತಾಳೆ ಕಿವಿ 19. ಕಪಿಮುಷ್ಟಿ 20. ರೈಲುಬಿಡು 21. ಮುಖ ಊದಿಸು 22. ಎಳ್ಳು ನೀರು ಬಿಡು 23. ಹುಡುಗಾಟಿಕೆ 24. ಮೈಗೆಹತ್ತು 25. ಹೊಟ್ಟೆ ಹೊರೆ 26. ಸಿಂಹಸ್ವಪ್ನ 27. ತಲೆಬಾಗು 28. ಚಳ್ಳೆ ಹಣ್ಣು ತಿನ್ನಿಸು 29. ಗತಿಗಾಣಿಸು 30. ಮೊರೆಹೋಗು 31. ಬೇರೂರು 32. ಒಡುಕುಬಾಯಿ 33. ಕೈ ಬೆಚ್ಚಗೆ ಮಾಡು 34. ಬಾಯಿ ತುರಿಕೆ 35. ಕಡುಬಿನ ಸೂರೆ 36. ಚದುರಂಗದಾಟ 37. ಕಣ್ಣಾಡಿಸು 38. ಕೈಗೊಂಬೆ

**ದ್ವಿರುಕ್ತಿಗಳು :** ಪ್ರಶ್ನೆ ಸಂಖ್ಯೆ 43 ರಿಂದ 49 ರವರೆಗೆ ಸೂಚನೆಗಳಿಗನುಸಾರವಾಗಿ 7 ಪ್ರಶ್ನೆಗಳಲ್ಲಿ 6 ಪ್ರಶ್ನೆಗಳಿಗೆ ಉತ್ತರಿಸಿ ಎಂದು ಕೇಳುವ ಭಾಗದಲ್ಲಿ ಈ ಕೆಳಗಿನ ದ್ವಿರುಕ್ತಿಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಳ್ಳತಕ್ಕದ್ದು

1. ಬೇಗಬೇಗ 2. ದೊಡ್ಡದೊಡ್ಡ 3. ಓಡಿಓಡಿ 4. ನಿಲ್ಲುನಿಲ್ಲು 5. ಹೆಚ್ಚುಹೆಚ್ಚು 6. ಮನೆಮನೆ 7. ಬನ್ನಿಬನ್ನಿ 8. ಅಬ್ಬಬ್ಬಾ 9. ಬೇಡಬೇಡ 10. ನಕ್ಕೂನಕ್ಕೂ 11. ಹೌದುಹೌದು 12. ಚಿಕ್ಕಚಿಕ್ಕ 13. ಬಟ್ಟಬಯಲು 14. ನುಗ್ಗುನುರಿ 15. ಬಗ್ಗುಬಡಿ 16. ತುತ್ತತುದಿ 17. ಕೊನೆಕೊನೆಗೆ 18. ಕಟ್ಟಕಡೆಗೆ 19. ಓಡೋಡಿ 20. ಮಟ್ಟಮಧ್ಯಾಹ್ನ 21. ಹಚ್ಚಹಸಿರು 22. ಕುದಿಕುದಿದು 23. ಕೆಳಕೆಳಗೆ 24. ಮೆಲ್ಲಮೆಲ್ಲನೆ 25. ನಡೆನಡೆದು 26. ಪರಿಪರಿಯಾಗಿ 27. ನಲಿನಲಿದು 28. ಕುಣಿಕುಣಿದು 29. ಬರೆಬರೆದು 30. ನೋಡುನೋಡು 31. ಆಗಲಿಆಗಲಿ 32. ಮೊತ್ತಮೊದಲು 33. ಬಿದ್ದುಬಿದ್ದು 34. ನಡುನಡುವೆ 35. ಹಳೆಹಳೆಯ 36. ಸಹಸ್ರಸಹಸ್ರ 37. ಹೆಜ್ಜೆಹೆಜ್ಜೆ 38. ಹೊಚ್ಚಹೊಸದು 39. ಒಳ್ಳೆತೊಳ್ಳೆತು 40. ಲೇಸುಲೇಸು 41. ತಡೆತಡೆ

**ಗುಣವಾಚಕಗಳು : ಪ್ರಶ್ನೆ ಸಂಖ್ಯೆ 43 ರಿಂದ 49 ರವರೆಗೆ ಸೂಚನೆಗಳಿಗನುಸಾರವಾಗಿ 7 ಪ್ರಶ್ನೆಗಳಲ್ಲಿ 6 ಪ್ರಶ್ನೆಗಳಿಗೆ ಉತ್ತರಿಸಿ ಎಂದು ಕೇಳುವ ಭಾಗದಲ್ಲಿ ಈ ಕೆಳಗಿನ ಗುಣವಾಚಕಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಳ್ಳತಕ್ಕದ್ದು**

| | | | | |
|---|---|---|---|---|
| 1. ಪೊಲ್ಲವಾರ್ತೆ | 2. ಮಂಗಳಲಿಂಗ | 3. ಲಘುವರ್ತನ | 4. ಘೋರಪಾತಕಿ | 5. ಕುಜನರು |
| 6. ಕಲಿಭೀಮ | 7. ಅಪ್ರತಿಮಲ್ಲ | 8. ನಸುಮಿಸುಕು | 9. ಮರಿಗೂಗೆ | 10. ಕಡುಪಾಪ |
| 11. ಹೆಮ್ಮರ | 12. ದುರ್ಗಂಧ | 13. ಬಿನ್ನಾಣದ ಮಾತು | 14. ಬಂಗಾರದ ಬಳೆ | 15. ದುರ್ಜನ |
| 2. 16. ರಸಬಳ್ಳಿ | 17. ಎಳೆನಗೆ | 18. ಹುಸಿನಿದ್ದೆ | 19. ಅವಸರದ ಹೆಜ್ಜೆ | 20. ತುಂಬಿಬಾಳು |
| 21. ಮಣ ಆಯಾಸ | 22. ಕೊರೆವ ಕೂಳು | 23. ಬಲಿಷ್ಟ ಕೈಗಳು | 24. ಹಾಸುಗಂಬಿ | 25. ಕಣ್ಬೆಳಕು |
| 26. ದೊಡ್ಡಗಂಟಲು | 27. ಗಟ್ಟಿಪಾದ | 28. ಉರಿವಬತ್ತಿ | 29. ಬೆಳಕಿನ ಬಿತ್ತ | 30. ಎಡಗಣ್ಣು |
| 31. ಹಿತವಚನ | 32. ಮುಗ್ಧಜೀವಿ | 33. ದಯಾಮೃತ್ಯು | 34. ದೂರದೃಷ್ಟಿ | 35.ಒಳನೋಟ |
| 36. ಕಿರುಹಾದಿ | 37. ಹಸಿರು ಕಂಬಳಿ | 38. ಸಣ್ಣಕುರುಹು | 39. ಹಾಡುಹಕ್ಕಿ | 40. ಶುದ್ಧನೀರು |
| 41. ಕೆಳಹೊಟ್ಟೆ | 42. ಸಣ್ಣಮಕ್ಕಳು | 43. ಉಜ್ವಲಭವಿಷ್ಯ | 44. ಶ್ರೇಷ್ಠವಿಜ್ಞಾನಿ | 45. ಸುದೈವ |
| 46. ಅಪಸ್ವರ | 47. ಪರದೇಶಿ | 48. ಬೆಳ್ಳಿಲೋಟ | 49. ಮರಿಮೀನು | 50. ಕೆನೆಹಾಲು |
| 51. ಸ್ವಚ್ಛಸಮುದ್ರ | 52. ನಳಿನಾನನೆ | 53. ಒಳ್ಳೆಯಡಾಕ್ಟರು | 54. ದೊಡ್ಡಮರ | 55. ಹೂಬಾಣ |
| 56. ಕಾರ್ಮೋಡ | 57. ಉಗ್ರಕೋಟೆ | 58. ಕ್ರೂರಕರ್ಮ | | |

**ವಿಭಕ್ತಿ ಪ್ರತ್ಯಯಗಳು : ಪ್ರಶ್ನೆ ಸಂಖ್ಯೆ 43 ರಿಂದ 49 ರವರೆಗೆ ಸೂಚನೆಗಳಿಗನುಸಾರವಾಗಿ 7 ಪ್ರಶ್ನೆಗಳಲ್ಲಿ 6 ಪ್ರಶ್ನೆಗಳಿಗೆ ಉತ್ತರಿಸಿ ಎಂದು ಕೇಳುವ ಭಾಗದಲ್ಲಿ ಈ ಕೆಳಗಿನ ವಿಭಕ್ತಿಪ್ರತ್ಯಯಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಳ್ಳತಕ್ಕದ್ದು.**

| | | | | | |
|---|---|---|---|---|---|
| 1. ಕದಡಿಹ | 2. ಸಲಿಲಂ | 3. ಧುರದದೊಳ್ | 4. ಇವರಂ | 5. ರಾಮನಿಂ | 6. ಅಂಧಕನು |
| 7. ಗುರುವಿಗೆ | 8. ಯಮಸುತರಿಗೆ | 9. ಕಲಿಭೀಮನೇ | 10. ವಲ್ಲಭನ | 11. ಸಮತೆಯನ್ನು | 12. ಧರ್ಮಜನಿಗೆ |
| 13. ಬಲ್ಲವರಿಂದ | 14. ಮಂತ್ರಿಯು | 15. ಪೈರಿಗೆ | 16. ಧರೆಯೊಳ್ | 17. ಕಟ್ಟಿಗೆಯ | 18. ಪುರಂದರವಿಠಲನ |
| 19. ಹರೆಯಕ್ಕೆ | 20. ಬಸ್‌ಸ್ಟಾಪಿನಲ್ಲಿ | 21. ಮನೆಗೆ | 22. ಅವನಿಗೆ | 23. ಮುದುಕಿಗೆ | 24. ಮೊಮ್ಮಗಳನ್ನು |
| 25. ಬಸಲಿಂಗನಿಗೆ | 26. ವಿಶ್ವಾಸದಿಂದ | 27. ಮುಖದಲ್ಲಿ | 28. ಮಾರ್ಷ್‌ಗೆ | 29. ಗಂಡಸರಲ್ಲಿ | 30. ಅಭಿವೃದ್ಧಿಯ ದೆಸೆಯಿಂದ |
| 31. ಲಾವಾರಸದಲ್ಲಿ | 32. ಪರಿಯವು | 33. ಕುದುಪನನ್ನು | 34. ಅದೃಷ್ಟದಿಂದ | 35. ಧಣಿಗಳಿಂದ | 36. ಕಣ್ಣಿನ ದೆಸೆಯಿಂದ |
| 37. ಚಂದ್ರಪ್ಪನನ್ನು | 38. ಗದ್ಯದೊಳ್ | 39. ರಾವಣನೇ | 40. ಗಿಣಿಯತ್ತಣಿಂ | 41. ಅರಮನೆಯಿಂ | 42. ತಂದೆಯ ದೆಸೆಯಿಂದ |
| 43.ತಿಮ್ಮಪ್ಪನವರಲ್ಲಿ | 44. ಗುಡಿಸಲಿನಿಂದ | 45. ಅವಳಿಗೆ | 46. ಮನೆಯೊಳ್ | 47. ತಿರುಳ್ಗನ್ನಡದ | 48. ಮನೋರಮೆಯಂ |
| 49. ರನ್ನವಣಿಯಂ | 50. ಸೀತೆಯಂ | 51. ಬೆಳ್ನುಡಿಯೊಳ್ | 52. ಕೈಯಲ್ಲಿ | 53. ದುರ್ಜನರು | 54. ವರ್ಷಕಾಲದೊಳು |
| 55. ಕೆಲವಂ | 56. ಬಿಸಿಲಲ್ಲಿ | 57. ಹಣ್ಣಿನಲ್ಲಿ | 58. ಬೆಳಗಿಂದ | 59. ಕೀರ್ತಿಗೆ | 60. ವಾತ್ಸ್ಯಾಯನಂಗೆ |
| 61. ಪಾಪಿಗೆ | 62. ನಡೆಸಿದ | 63. ನೋವಿನಲ್ಲಿ | 64. ಮನೆಯಿಂದ | 65. ನಲ್ಗತೆಯಿಂ | 66. ಜಗತ್ತ್ರಯದೊಳು |
| 67. ರಾಮಚಂದ್ರನ | 68. ಬೇಸಿಗೆಯು | 69. ತಮ್ಮನನ್ನು | 70.ವಿದ್ಯೆಯ | | |

**ಕ್ರಿಯಾಪದಗಳು – ಧಾತು – ಕಾಲಸೂಚಕಗಳು – ನಿಷೇಧಾರ್ಥಕ ರೂಪ**

**ಇವುಗಳನ್ನು ಕುರಿತು ಪ್ರಶ್ನೆ ಸಂಖ್ಯೆ 43 ರಿಂದ 49 ರವರೆಗೆ ಸೂಚನೆಗಳಿಗನುಸಾರವಾಗಿ 7 ಪ್ರಶ್ನೆಗಳಲ್ಲಿ 6 ಪ್ರಶ್ನೆಗಳಿಗೆ ಉತ್ತರಿಸಿ ಎಂದು ಕೇಳುವ ಭಾಗದಲ್ಲಿ ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಳ್ಳತಕ್ಕದ್ದು**

**ಕ್ರಿಯಾಪದಗಳ ಧಾತುಗಳನ್ನು ಗುರುತಿಸಿ :**

| | | | | | |
|---|---|---|---|---|---|
| 1. ಓದಿದನು | 2. ತಿಂದನು | 3. ಬಂದವು | 4. ನಿಂತರು | 5. ಹಾಡುವಳು | 6. ತೋರಿಸು |
| 7. ಕುಡಿದು | 8.ನಲಿಯುತ್ತಾ | 9. ಕಟ್ಟಿಸು | 10. ಓಡುವರು | 11. ಬೀಸುತ್ತಿತ್ತು | 12. ಹೇಳಿದಾಗ |
| 13. ನೋಡಿದನು | 14. ಬರೆಯುವಳು | 15. ಕಲಿಯುವರು | 16. ಹೋದರು | 17. ಹೋಯಿತು | 18. ಅಳುತ್ತಿತ್ತು |
| 19. ಬಾರಿಸುವಳು | 20. ನುಡಿಸುವಳು | 21. ಕೇಳಿದರು | 22. ಎದ್ದರು | 23. ಮಾಡಿದಾಗ | 24.ಬರುತ್ತಿದ್ದರು |
| 25. ತೂಗಿದನು | 26. ಹಿಗ್ಗಿದಳು | 27. ನಡುಗಿದನು | 28. ಹಿಡಿದಳು | 29. ಕೊಟ್ಟನು | 30.ಬೆಳಗುವಳು |
| 31. ಹೊಗಳಿದರು | 32. ಮಿಂಚಿತು | 33. ಹೊಳೆಯುತ್ತಿತ್ತು | 34. ಚಿಗುರಿದವು | 35. ಸಾಕಿದರು | 36. ಹರಡಿತು |

37. ಅಬ್ಬರಿಸಿದನು 38.ಪೂಜಿಸುತ್ತಿದ್ದರು 39.ಧಗಧಗಿಸುತ್ತಿತ್ತು 40. ಚಲಿಸಿದವು 41. ಮಲಗಿತು 42.ಪ್ರಯತ್ನಿಸಿದನು
43. ದುಃಖಿಸಿದರು 44. ಇದ್ದವು 45.ಪ್ರಲಾಪಿಸಿದಳು 46. ಬಿದ್ದಿತು 47.ಕರುಣಿಸೆಂದಳು 48.ಬರೆಯುತ್ತಿದ್ದನು

**ಕ್ರಿಯಾಪದಗಳ ನಿಷೇದಾರ್ಥಕ ರೂಪ ಬರೆಯಿರಿ :**

1. ಹೋಗುವವನು 2. ಬರುವವರು 3. ನೋಡಿದಳು 4. ನೋಡುವವರು 5. ತರುವವರು 6. ಹಾಡುವವರು 7. ಆಡಿದರು
8. ಆಡಿತು 9. ಹೋಗುವಿರಿ 10. ಕೇಳುವರು 11. ತಿನ್ನುವಳು 12. ಬರುವುದು 13. ಹಾಡುವೆ 14. ನೋಡುವುದು
15. ಕರೆಯಿತು 16. ಮರೆಯುವೆ 17. ತಿನ್ನು 18. ಹೋಗುವುದು 19. ನೋಡುವಳು 20. ತಿಂದಿತು 21. ಬರುತ್ತಾರೆ
22. ಮಾಡುವೆ 23. ಹೋಗುವಳು 24. ನಿಲ್ಲುವುದು 25. ಕರೆಯುವರು 26. ಬರೆವನು

**ಕ್ರಿಯಾಪದಗಳ ಕಾಲವನ್ನು ಸೂಚಿಸಿರಿ :**

1. ಹೋದವು 2. ಬರುವವನು 3. ಕುಣಿಯುತ್ತಿತ್ತು 4. ಓದಿದರು 5. ಓಡಿದರು 6. ಬಂದಿತು 7. ನೋಡಿದಳು
8. ಬರುತ್ತಿದ್ದರು 9. ನಿಂತರು 10. ಕರೆವರು 11. ನೋಡಿತು 12. ಹಾಡಿದಳು 13. ಕೇಳುತ್ತಾರೆ 14. ನಗುವರು
15. ತಿಂದನು 16. ಕಟ್ಟುವರು 17. ಹೋಯಿತು 18. ಹೋದರು 19. ಬರುತ್ತಾರೆ 20. ಕೇಳಿದನು 21. ಬಂದಿತು
22. ಕುಣಿವರು 23. ನಲಿಯುತ್ತಾರೆ 24. ಬಂದರು 25. ಸಾಧಿಸುವುದು 26. ಪೊಡಕರಿಸಿತು 27. ಕೇಳ್ದನು 28. ಭಾವಿಸಿದಳ್
29.ತಲ್ಲಣಿಸುತ್ತಿರ್ದ 30.ಅಪೇಕ್ಷಿಸುವೆನು

**ಪ್ರಬಂಧ ರಚನೆ : ಈ ಕೆಳಗಿನ ಯಾವುದಾದರೂ 2 ವಿಷಯಗಳನ್ನು ಆರಿಸತಕ್ಕದ್ದು**

1. ಮತದಾನದ ಜಾಗೃತಿ.
2. ತ್ಯಾಜ್ಯವಸ್ತುಗಳ ಮರುಬಳಕೆಯ ಅಗತ್ಯತೆ.
3. ನಗರ ನೈರ್ಮಲ್ಯವನ್ನು ಕಾಪಾಡುವುದರಲ್ಲಿ ನಾಗರಿಕರ ಪಾತ್ರ.
4. ಕನ್ನಡ ಭಾಷೆಯನ್ನು ಅಭಿವೃದ್ಧಿಗೊಳಿಸುವ ಮಾರ್ಗಗಳು.
5. ಸ್ತ್ರೀ ಭ್ರೂಣಹತ್ಯೆ.
6. ಸಮಾನ ಶಿಕ್ಷಣದ ಅವಶ್ಯಕತೆ.
7. ಕೃಷಿ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಅಗತ್ಯ.
8. ಭ್ರಷ್ಟಾಚಾರವನ್ನು ನಿರ್ಮೂಲನಗೊಳಿಸುವಲ್ಲಿ ಯುವಜನರ ಪಾತ್ರ.
9. ರಾಷ್ಟ್ರೀಯ ಸೇವಾ ಯೋಜನೆಯ ಮಹತ್ವ.
10. ಯೋಗಾಭ್ಯಾಸದ ಉಪಯೋಗಗಳು.
11. ಐತಿಹಾಸಿಕ ಸ್ಥಳಗಳ ಸಂರಕ್ಷಣೆ.
12. ಜೈವಿಕ ಇಂಧನಗಳ ಮಹತ್ವ.
13. ಭಾರತದ ಬಾಹ್ಯಾಕಾಶ ಕ್ಷೇತ್ರದ ಸಾಧನೆ.
14. ಕ್ರೀಡೆ ಮತ್ತು ನಮ್ಮ ಆರೋಗ್ಯ.
15. ಮೂಢನಂಬಿಕೆಗಳು.
16. ಪುಸ್ತಕಗಳ ಮಹತ್ವ.
17. ಹೆಚ್ಚುತ್ತಿರುವ ವೃದ್ಧಾಶ್ರಮಗಳು.
18. ನನ್ನ ಬಾಲ್ಯದ ನೆನಪುಗಳು.
19. ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ.
20. ಮಣ್ಣು-ಅಂತರ್ಜಲ ಸಂರಕ್ಷಣೆ.
21. ಕೆರೆ-ನದಿಗಳ ನೈರ್ಮಲ್ಯೀಕರಣ.
22. ಸಾಂಸ್ಕೃತಿಕ ಚಟುವಟಿಕೆಗಳು.
23. ಮಹಾತ್ಮರ ಜಯಂತಿ.
24. ಬದುಕುವ ಕಲೆ.

25. ಕಂಪ್ಯೂಟರ್.
26. ಮಹಾತ್ಮರ ಜೀವನಚರಿತ್ರೆಗಳ ಮಹತ್ವ.
27. ರಕ್ತದಾನ ಮತ್ತು ನೇತ್ರದಾನಗಳ ಮಹತ್ತ್ವ.
28. ಸ್ವಚ್ಛ ಭಾರತ.
29. ನೋಟು ಅಮಾನ್ಯೀಕರಣ ಮತ್ತು ಕಪ್ಪು ಹಣ.
30. ಡಿಜಿಟಲೀಕರಣದಲ್ಲಿ ಕನ್ನಡ ಭಾಷಾ ಬಳಕೆಯ ಅಗತ್ಯ.

**ಪತ್ರಲೇಖನ : ವೈಯಕ್ತಿಕ ಪತ್ರಲೇಖನ ಹಾಗೂ ವ್ಯಾವಹಾರಿಕ ಪತ್ರಲೇಖನ ಈ ಎರಡರಿಂದಲೂ ತಲಾ ಒಂದೊಂದು ವಿಷಯವನ್ನು ಆರಿಸತಕ್ಕದ್ದು.**

**ಅ. ವೈಯಕ್ತಿಕ ಪತ್ರಲೇಖನ**

1. ಶೈಕ್ಷಣಿಕ ಪ್ರವಾಸಕ್ಕೆ ಅನುಮತಿ ಕೋರಿ ತಂದೆ/ತಾಯಿ/ಪೋಷಕರಿಗೆ ಪತ್ರ ಬರೆಯಿರಿ.
2. ಪರೀಕ್ಷಾ ಸಿದ್ಧತೆಯನ್ನು ತಿಳಿಸಿ ಪೋಷಕರಿಗೆ/ಗೆಳೆಯರಿಗೆ ಪತ್ರ ಬರೆಯಿರಿ.
3. ಮೆಚ್ಚಿದ ಪುಸ್ತಕ/ವ್ಯಕ್ತಿಗಳನ್ನು ಕುರಿತು ಸ್ನೇಹಿತರಿಗೆ ಪತ್ರ ಬರೆಯಿರಿ.
4. ಕಾಲೇಜಿನ ವಾರ್ಷಿಕೋತ್ಸವ/ಕ್ರೀಡಾ ಚಟುವಟಿಕೆಗಳನ್ನು ವಿವರಿಸಿ ಸ್ನೇಹಿತರಿಗೆ/ಸಂಬಂಧಿಕರಿಗೆ ಪತ್ರ ಬರೆಯಿರಿ.
5. ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ/ನಾಡಹಬ್ಬಗಳ ವಿವರ ನೀಡಿ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.
6. ತಾವು ಮಾಡಿರುವ ಪ್ರವಾಸಾನುಭವವನ್ನು ತಿಳಿಸಿ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.
7. ನಿಮ್ಮೂರಿನಲ್ಲಿ ನಡೆಯುವ ಜಾತ್ರೆ, ಸಮ್ಮೇಳನಗಳಿಗೆ ಇಷ್ಟಮಿತ್ರರನ್ನು ಆಹ್ವಾನಿಸಿ ಪತ್ರ ಬರೆಯಿರಿ.

**ಆ. ವ್ಯಾವಹಾರಿಕ ಪತ್ರಲೇಖನ**

1. ವಿದ್ಯುಚ್ಛಕ್ತಿಯ ಸಮರ್ಪಕ ಸರಬರಾಜನ್ನು ಕೋರಿ ಕಾರ್ಯನಿರ್ವಾಹಕ ಅಭಿಯಂತರರಿಗೆ ಬರೆಯುವ ಪತ್ರ.
2. ವರ್ಗಾವಣೆ ಪ್ರಮಾಣ ಪತ್ರ ಮತ್ತು ಅಂಕಪಟ್ಟಿ ಕೋರಿ ಕಾಲೇಜಿನ ಪ್ರಾಚಾರ್ಯರಿಗೆ ಪತ್ರ ಬರೆಯಿರಿ.
3. ನಾಲ್ಕುದಿನಗಳ ರಜೆ ಕೋರಿ ನಿಮ್ಮ ತರಗತಿ ಉಪನ್ಯಾಸಕರಿಗೆ ಪತ್ರ ಬರೆಯಿರಿ.
4. ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆರೆಯಲು ಕೋರಿ ಸಂಬಂಧಪಟ್ಟ ಬ್ಯಾಂಕಿನ ವ್ಯವಸ್ಥಾಪಕರಿಗೆ ಪತ್ರ ಬರೆಯಿರಿ.
5. ಶೈಕ್ಷಣಿಕ ಸಾಲ ಸೌಲಭ್ಯವನ್ನು ಕೋರಿ ಸಂಬಂಧಪಟ್ಟ ಬ್ಯಾಂಕಿನ ವ್ಯವಸ್ಥಾಪಕರಿಗೆ ಪತ್ರ ಬರೆಯಿರಿ.
6. ನಿಮ್ಮ ಊರಿನ ರಸ್ತೆ ದುರಸ್ತಿ, ಸೂಕ್ತ ಬಸ್ ಸಂಪರ್ಕ ವ್ಯವಸ್ಥೆಯನ್ನು ಕೋರಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಪತ್ರ ಬರೆಯಿರಿ.
7. ನಿಮ್ಮ ಮೆಚ್ಚಿನ ಪುಸ್ತಕಗಳನ್ನು ಅಂಚೆಮೂಲಕ ತರಿಸಿಕೊಳ್ಳಲು ಯಾವುದಾದರೂ ಪುಸ್ತಕಾಲಯಕ್ಕೆ ಪತ್ರ ಬರೆಯಿರಿ.

**ಗಾದೆ ವಿಸ್ತರಣೆ : ಈ ಕೆಳಗಿನ ಯಾವುದಾದರೂ 2 ವಿಷಯಗಳನ್ನು ಆರಿಸತಕ್ಕದ್ದು.**

1. ಹಾಸಿಗೆ ಇದ್ದಷ್ಟು ಕಾಲು ಚಾಚು.
2. ಕೂತು ಉಂಡರೆ ಕುಡಿಕೆ ಹಣ ಸಾಲದು.
3. ದೇಶ ಸುತ್ತಬೇಕು, ಕೋಶ ಓದಬೇಕು.
4. ಅಜ್ಜಿ ಇಲ್ಲದ ಮನೆ ; ಮಜ್ಜಿಗೆ ಇಲ್ಲದ ಊಟ.
5. ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಸಾಲದು.
6. ಆಳಾಗಿ ದುಡಿ, ಅರಸಾಗಿ ಉಣ್ಣು.
7. ಬೆಳೆಯುವ ಸಿರಿ ಮೊಳಕೆಯಲ್ಲಿ.
8. ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು.
9. ಉಪ್ಪಿಗಿಂತ ರುಚಿ ಇಲ್ಲ ತಾಯಿಗಿಂತ ಬಂಧುವಿಲ್ಲ.
10. ಉತ್ಸಾಹವೇ ಯೌವನ ಚಿಂತೆಯೇ ಮುಪ್ಪು.
11. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.
12. ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು.
13. ಉಪಾಯ ಬಲ್ಲವನಿಗೆ ಅಪಾಯವಿಲ್ಲ.
14. ತಾಳಿದವನು ಬಾಳಿಯಾನು.

## : ಮಾದರಿ ಪ್ರಶ್ನೆಪತ್ರಿಕೆಗಳು :

**ದ್ವಿತೀಯ ಪಿ.ಯು.ಸಿ ಕನ್ನಡ ಭಾಷೆ (01) ಪ್ರಶ್ನೆಪತ್ರಿಕೆ**

**ಪ್ರಶ್ನೆ ಮತ್ತು ಅಂಕಗಳ ವಿತರಣೆ**

| ಕ್ರ. ಸಂ. | ವಿಭಾಗಗಳು | 1 ಅಂಕದ ಪ್ರಶ್ನೆಗಳು | | 2 ಅಂಕದ ಪ್ರಶ್ನೆಗಳು | | 3 ಅಂಕದ ಪ್ರಶ್ನೆಗಳು | | 4 ಅಂಕದ ಪ್ರಶ್ನೆಗಳು | | 5 ಅಂಕದ ಪ್ರಶ್ನೆಗಳು | |
|---|---|---|---|---|---|---|---|---|---|---|---|
| | | ಕೇಳುವ | ಬರೆಯುವ | ಕೇಳುವ | ಬರೆಯುವ | ಕೇಳುವ | ಬರೆಯುವ | ಕೇಳುವ | ಬರೆಯುವ | ಕೇಳುವ | ಬರೆಯುವ |
| 01 | ಪದ್ಯ | 04 | 04 | 05 | 04 | 03 | 02 | 04 | 03 | 02 | 01 |
| 02 | ಗದ್ಯ | 03 | 03 | 04 | 03 | 02 | 01 | 03 | 02 | – | – |
| 03 | ದೀರ್ಘಗದ್ಯ | 03 | 03 | 04 | 03 | 02 | 01 | 03 | 02 | – | – |
| | **ಒಟ್ಟು** | **10** | **10** | **13** | **10** | **07** | **04** | **10** | **07** | **02** | **01** |
| 04 | ಭಾಷಾಭ್ಯಾಸ | – | – | 07 | 06 | – | – | – | – | – | – |
| 05 | ಪ್ರಬಂಧ | – | – | – | – | – | – | – | – | 02 | 01 |
| 06 | ಪತ್ರಲೇಖನ | – | – | – | – | – | – | 02 | 01 | – | – |
| 07 | ಗಾದೆಮಾತು | – | – | – | – | – | – | 02 | 01 | – | – |
| | **ಒಟ್ಟು** | – | – | **07** | **06** | – | – | **04** | **02** | **02** | **01** |
| **ಒಟ್ಟು ಪ್ರಶ್ನೆಗಳು** | | **10** | **10** | **20** | **16** | **07** | **04** | **14** | **09** | **04** | **02** |

* **ಕೇಳುವ ಪ್ರಶ್ನೆಗಳು ಒಟ್ಟು : 55 ಅಂಕಗಳು : 147**
* **ಉತ್ತರಿಸಬೇಕಾದ ಪ್ರಶ್ನೆಗಳು ಒಟ್ಟು : 41 ಅಂಕಗಳು : 100**

## ಮಾದರಿ ಪ್ರಶ್ನೆಪತ್ರಿಕೆ – 1, ದ್ವಿತೀಯ ಪಿ.ಯು.ಸಿ ಕನ್ನಡ ಭಾಷೆ (01)
## ಪ್ರಶ್ನೆಪತ್ರಿಕೆಯ ನೀಲ ನಕ್ಷೆ

| ಕ್ರ. ಸಂ | ಪದ್ಯಭಾಗ | 1 ಅಂಕ | 2 ಅಂಕ | 3 ಅಂಕ | 4 ಅಂಕ | 5 ಅಂಕ | ಒಟ್ಟು ಅಂಕಗಳು |
|---|---|---|---|---|---|---|---|
| 01 | ಕದಡಿದ ಸಲಿಲಂ ತಿಳಿವಂದದೆ | | 1 | | | 1 | 7 |
| 02 | ವಚನಗಳು<br>ಅ) ಬಸವಣ್ಣನವರ ವಚನಗಳು | | | 1 | | | 3 |
| | ಆ) ಉರಿಲಿಂಗಿಪೆದ್ದಿಯ ವಚನಗಳು | 1 | | | | | 1 |
| 03 | ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು | | 1 | | 1 | | 6 |
| 04 | ಪಗೆಯಂ ಬಾಲಕನೆಂಬರೇ | | | | 1 | | 4 |
| 05 | ಜಾಲಿಯ ಮರದಂತೆ | 1 | | | | | 1 |
| 06 | ಹಬ್ಬಲಿ ಅವರ ರಸಬಳ್ಳಿ | | | 1 | | | 3 |
| 07 | ಬೆಳಗು ಜಾವ | | 1 | | | 1 | 7 |
| 08 | ಮುಂಬೈ ಜಾತಕ | 1 | | | 1 | | 5 |
| 09 | ಶಿಲುಬೆ ಏರಿದ್ದಾನೆ | | | 1 | | | 3 |
| 10 | ಒಂದು ಹೂ ಹೆಚ್ಚಿಗೆ ಇಡುತೀನಿ | | | | 1 | | 4 |
| 11 | ಹತ್ತಿ... ಚಿತ್ತ... ಮತ್ತು... | 1 | 1 | | | | 3 |
| 12 | ಒಮ್ಮೆ ನಗುತ್ತೇವೆ | | 1 | | | | 2 |
| | ಗದ್ಯಭಾಗ | | | | | | |
| 01 | ಮುಟ್ಟಿಸಿಕೊಂಡವನು | 1 | | 1 | | | 4 |
| 02 | ವಾಲ್‌ಪರೈ : ಅಭಿವೃದ್ಧಿ ತಂದ ದುರಂತ | | 1 | | 1 | | 6 |
| 03 | ಆಯ್ಕೆಯಿದೆ ನಮ್ಮ ಕೈಯಲ್ಲಿ | | | | 1 | | 4 |
| 04 | ಕನ್ನಡವನ್ನು ಕಟ್ಟುವ ಕೆಲಸ | | 1 | | | | 2 |
| 05 | ಧಣಿಗಳ ಬೆಳ್ಳಿಲೋಟ | 1 | | | 1 | | 5 |
| 06 | ಬದುಕನ್ನು ಪ್ರೀತಿಸಿದ ಸಂತ | | 1 | | | | 2 |
| 07 | ತಿರುಳ್ಗನ್ನಡದ ಬೆಳ್ನುಡಿ | | 1 | | | | 2 |
| 08 | ಹಳ್ಳಿಯ ಚಹಾ ಹೋಟೇಲುಗಳು | 1 | | 1 | | | 4 |
| | ದೀರ್ಘಗದ್ಯ | | | | | | |
| 01 | ಕೃಷ್ಣೇಗೌಡನ ಆನೆ | 3 | 4 | 2 | 3 | | 29 |
| | ಭಾಷಾಭ್ಯಾಸ | | 7 | | | | 14 |
| 01 | ಪ್ರಬಂಧ ರಚನೆ | | | | | 2 | 5 |
| 02 | ಪತ್ರಲೇಖನ | | | | 2 | | 8 |
| 03 | ಗಾದೆಮಾತು ವಿಸ್ತರಣೆ | | | | 2 | | 8 |
| | ಒಟ್ಟು ಪ್ರಶ್ನೆಗಳು | 10 | 20 | 7 | 14 | 4 | 147 |

## ದ್ವಿತೀಯ ಪಿ.ಯು.ಸಿ ಮಾದರಿ ಪ್ರಶ್ನೆ ಪತ್ರಿಕೆ –1

ವಿಷಯ : **ಕನ್ನಡ (01)**

**ಅವಧಿ : 3–15 ಗಂಟೆ** **ಗರಿಷ್ಠ ಅಂಕಗಳು : 100**

**ಅ – ವಿಭಾಗ**

**I. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ :** **1x10=10**

1. ಉರಿಲಿಂಗಪೆದ್ದಿಯ ವಚನಗಳ ಅಂಕಿತ ಯಾವುದು?
2. ಜಾಲಿಯ ಮರ ಯಾರಿಗೆ ಹಣ್ಣು ಕೊಡುವುದಿಲ್ಲ?
3. ಹೊರ ಲೋಕವನ್ನು ಪರಿಚಯಿಸಿ ಎಚ್ಚರಿಕೆ ಕೊಟ್ಟವಳು ಯಾರು?
4. ತೈಲ ತೀರಿದ್ದು ಹೇಗೆ ತಿಳಿಯುತ್ತದೆ?
5. ಸೂತಕವನ್ನು ಪರಿಹರಿಸಲು ಬಸಲಿಂಗ ಏನು ಮಾಡಿದ?
6. ಧಣಿಗಳ ಹೆಸರೇನು?
7. ಲೇಖಕರು ಹೇಳುವ ಹಳ್ಳಿಯ ಹೋಟೇಲಿನ ಹೆಸರೇನು?
8. ಆನೆಯ ಮಾವುತನ ಹೆಸರೇನು?
9. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ಯಾರು?
10. ಆನೆ ಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

**ಆ – ವಿಭಾಗ**

**II. ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :** **2x4=8**

11. ರಾವಣನು ಜಾನಕಿಯನ್ನು ನೋಡಲು ಎಲ್ಲಿಗೆ? ಯಾರು ಬರುವಂತೆ ಬಂದನು?
12. ತೋಳ ಹೊರೆ ನಿಮಗೇಕೆ ಎಂದು ದ್ರೌಪದಿ ಹೇಳಲು ಕಾರಣವೇನು?
13. ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಏನು ಹೇಳಿದ್ದಾರೆ?
14. ಎಣ್ಣೆಯಲ್ಲಿ ನೆನೆದು ಉರಿಯುವ ಬತ್ತಿಯನ್ನು ಯಾವ ಯಾವುದಕ್ಕೆ ಹೋಲಿಸಲಾಗಿದೆ?
15. ಕವಯತ್ರಿ ನಗುವ ನಗು ಎಂತಹುದ್ದು?

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :** **2x3=6**

16. ಮಾರ್ಷ್‌ನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?
17. ನಮ್ಮ ಸಾರ್ವಜನಿಕ ಶಾಲೆಗಳ ಬಗ್ಗೆ ಲೇಖಕರ ಅಭಿಪ್ರಾಯವೇನು?
18. ಪದ್ಮಶೇಷಾದ್ರಿ ಬಾಲಭವನದ ಮಕ್ಕಳಿಗೆ ಕಲಾಂ ಕೇಳಿದ ಪ್ರಶ್ನೆ ಯಾವುದು?
19. ಮನೋರಮೆ ಕತೆ ಹೇಳೆಂದು ಕೇಳಲು ಕಾರಣವೇನು?

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :** **2x3=6**

20. ಕೃಷ್ಣೇಗೌಡನ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?
21. ಡ್ರೈವರ್‌ನ ತಲೆ ಜಜ್ಜಿ ಹೋದದ್ದು ಹೇಗೆ? ಆನೆ ಅದಕ್ಕೆ ಕಾರಣವೇ?
22. ನಾಯಿ ಕಚ್ಚಿದ್ದೆಲ್ಲಿ ಎಂದಾಗ ಜಬ್ಬಾರ್ ಇರಿಸು ಮುರಿಸಿನಿಂದ ಏನು ಹೇಳಿದನು?
23. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

**ಇ – ವಿಭಾಗ**

**III. ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ :** **3x2=6**

24. ಧರೆಹತ್ತಿ ಉರಿದಡೆ ನಿಲಲುಬಾರದು.
25. ನೀ ತಂಪ ನನ್ನ ತವರೀಗಿ.
26. ದಿನನಿತ್ಯ ಶಿಲುಬೆ ಏರಿದ್ದಾನೆ ಜೀಸಸ್.

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ : 3x1=3**

27. ನೀರು ಬಿದ್ದರೆ ಕಣ್ಣು ಹೋಗುವ ಅಪಾಯವಿದೆ.
28. ಅನಕ್ಷರಸ್ಥರ ಪಾರ್ಲಿಮೆಂಟ್.

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ : 3x1=3**

29. ಅಯ್ಯೋ ಯಾವ್ದೊ ಮದ್ವೆಮನೆ ಕಾಗದ ಸಾರ್.
30. ಈ ಕಂಬದೊಳಗೆ ಏನೋ ಸೇರ್‌ಕೊಂಡಿದೆ.

**ಈ – ವಿಭಾಗ**

IV. **ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 4x3=12**

31. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.
32. ಯಾವ ಯಾವ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ.
33. ತಂದೆ – ತಾಯಿಗಳು ಮಗುವಿಗೆ ಗೋಚರಿಸುವ ಬಗೆಯನ್ನು ವಿವರಿಸಿರಿ.
34. ಮುದುಕಿಯ ತಳಮಳ ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ?

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 4x2=8**

35. ಅಂತಾರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್‌ಪರ್ರೈಗೆ ಒದಗಿದ ಸಮಸ್ಯೆಗಳೇನು?
36. ಅದೃಷ್ಟವನ್ನೇ ಅವಲಂಬಿಸಿ ಬದುಕಲು ಸಾಧ್ಯವಿಲ್ಲ ಎಂಬುದನ್ನು ಈ ಲೇಖನ ಹೇಗೆ ಪ್ರತಿಪಾದಿಸುತ್ತದೆ.
37. ಚೆನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು? ವಿಶ್ಲೇಷಿಸಿ.

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 4x2=8**

38. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.
39. ಪೋಸ್ಟ್‌ಮನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?
40. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೇ? ವಿವರಿಸಿ.

**ಉ – ವಿಭಾಗ**

V. **ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ : 5x1=5**

41.
ಕರುಣಿಸುವೊಡೆನಗೆ ದಶಕಂ
ಧರ ಧುರದೊಳ್ ರಘುತನೂಜನಾಯುಃ ಪ್ರಾಣಂ।
ಬರೆಗಂ ಬಾರದಿರೆನುತುಂ
ಧರಿತ್ರಿಯಳ್ ಮೈಯನೊಕ್ಕು ಮೂರ್ಛೆಗೆ ಸಂದಳ್॥

42.
ನಿಶೆಳಿದ ಉಷೆಯ, ಎಳನಗೆಯ ಬಗೆಗೆ, ಸೋತಿರಲು ಜಗವು ಸವಿಗೆ,
ಕಣ್ಣೆದಿರು ಒಂದು, ಕಟ್ಟಿತು ಕನಸು; ಕೂಗೊಂದು ಬಂತು ಕಿವಿಗೆ
ಮಕ್ಕಳಿರ ಕೇಳಿ, ರಸ ಕುಡಿಯಲೇಳಿ, ಹುಸಿನಿದ್ದೆಗಿದ್ದೆ ಸಾಕು.
ಈ ತುಂಬಿ ಬಾಳು, ತುಂಬಿರುವ ತನಕ, ತುಂತುಂಬಿ ಕುಡಿಯಬೇಕು.

**ಭಾಷಾಭ್ಯಾಸ**

VI. **ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗನುಗುಣವಾಗಿ ಉತ್ತರಿಸಿ : 2x6=12**

43. ಈ ಪದಗಳ ಧಾತು ಗುರುತಿಸಿ : ಎದ್ದರು, ಪೇಳಲು
44. ಈ ಪದಗಳ ವಿಭಕ್ತಿಗಳನ್ನು ಹೆಸರಿಸಿ : ಭಾಷೆಗಳ, ಬದುಕನ್ನು
45. ಈ ಪದಗಳ ಗುಣವಾಚಕಗಳನ್ನು ಬರೆಯಿರಿ : ನಲ್ಗತೆ, ತಿರುಳ್ಗನ್ನಡ
46. ಯಾವುದಾದರೂ ಎರಡು ದ್ವಿರುಕ್ತಿಗಳನ್ನು ಬರೆಯಿರಿ.
47. ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ : ಗಾಳಿಸುದ್ಧಿ, ಪರಂಧಾಮಕ್ಕೆ ಹೋಗು

48. ಈ ಪದಗಳ ನಾನಾರ್ಥ ಬರೆಯಿರಿ: ಉರುಳು, ಬೆಳೆ

49. ಈ ಪದಗಳ ತತ್ಸಮ – ತದ್ಭವ ಬರೆಯಿರಿ : ಶಿರ, ಅಗ್ನಿ

**ಆ) ಈ ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ :** **5x1=5**

50. ಮೂಢನಂಬಿಕೆಗಳು

51. ಹೆಚ್ಚುತ್ತಿರುವ ವೃದ್ಧಾಶ್ರಮಗಳು.

**ಇ) ಪತ್ರಲೇಖನ : ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪತ್ರ ಬರೆಯಿರಿ :** **4x1=4**

52. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಹ್ವಾನಿಸಿ ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.

53. ವರ್ಗಾವಣೆ ಪತ್ರ ಕೋರಿ ಪ್ರಾಂಶುಪಾಲರಿಗೆ ಪತ್ರ ಬರೆಯಿರಿ.

**ಈ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ :** **4x1=4**

54. ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು.

55. ತಾಳಿದವನು ಬಾಳಿಯಾನು.

*****

## ಮಾದರಿ ಪ್ರಶ್ನೆಪತ್ರಿಕೆ – 2, ದ್ವಿತೀಯ ಪಿ.ಯು.ಸಿ ಕನ್ನಡ ಭಾಷೆ (01)<br>ಪ್ರಶ್ನೆ ಪತ್ರಿಕೆಯ ನೀಲ ನಕ್ಷೆ

| ಕ್ರ. ಸಂ | ಪದ್ಯಭಾಗ | 1 ಅಂಕ | 2 ಅಂಕ | 3 ಅಂಕ | 4 ಅಂಕ | 5 ಅಂಕ | ಒಟ್ಟು ಅಂಕಗಳು |
|---|---|---|---|---|---|---|---|
| 01 | ಕದಡಿದ ಸಲಿಲಂ ತಿಳಿವಂದದೆ | 1 | | | | 1 | 6 |
| 02 | ವಚನಗಳು<br>ಅ) ಬಸವಣ್ಣನವರ ವಚನಗಳು<br>ಆ) ಉರಿಲಿಂಗಿಪೆದ್ದಿಯ ವಚನಗಳು | | 1 | | | 1 | 7 |
| 03 | ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು | | 1 | | 1 | | 6 |
| 04 | ಪಗೆಯಂ ಬಾಲಕನೆಂಬರೇ | | | | 1 | | 4 |
| 05 | ಜಾಲಿಯ ಮರದಂತೆ | | | 1 | | | 3 |
| 06 | ಹಬ್ಬಲಿ ಅವರ ರಸಬಳ್ಳಿ | 1 | | | 1 | | 5 |
| 07 | ಬೆಳಗು ಜಾವ | 1 | | 1 | | | 4 |
| 08 | ಮುಂಬೈ ಜಾತಕ | | | | 1 | | 4 |
| 09 | ಶಿಲುಬೆ ಏರಿದ್ದಾನೆ | 1 | 1 | | | | 3 |
| 10 | ಒಂದು ಹೂ ಹೆಚ್ಚಿಗೆ ಇಡುತೀನಿ | | | 1 | | | 3 |
| 11 | ಹತ್ತಿ... ಚಿತ್ತ... ಮತ್ತು... | | 1 | | | | 2 |
| 12 | ಒಮ್ಮೆ ನಗುತ್ತೇವೆ | | 1 | | | | 2 |
| | ಗದ್ಯಭಾಗ | | | | | | |
| 01 | ಮುಟ್ಟಿಸಿಕೊಂಡವನು | | | | 1 | | 4 |
| 02 | ವಾಲ್‌ಪರೈ : ಅಭಿವೃದ್ಧಿ ತಂದ ದುರಂತ | 1 | | 1 | | | 4 |
| 03 | ಆಯ್ಕೆಯಿದೆ ನಮ್ಮ ಕೈಯಲ್ಲಿ | | | | 1 | | 4 |
| 04 | ಕನ್ನಡವನ್ನು ಕಟ್ಟುವ ಕೆಲಸ | | | | 1 | | 4 |
| 05 | ಧಣಿಗಳ ಬೆಳ್ಳಿಲೋಟ | 1 | 1 | | | | 3 |
| 06 | ಬದುಕನ್ನು ಪ್ರೀತಿಸಿದ ಸಂತ | | 1 | | | | 2 |
| 07 | ತಿರುಳ್ಗನ್ನಡದ ಬೆಳ್ನುಡಿ | 1 | 1 | | | | 3 |
| 08 | ಹಳ್ಳಿಯ ಚಹಾ ಹೋಟೇಲುಗಳು | | 1 | 1 | | | 5 |
| | ದೀರ್ಘಗದ್ಯ | | | | | | |
| 01 | ಕೃಷ್ಣೇಗೌಡನ ಆನೆ | 3 | 4 | 2 | 3 | | 29 |
| | ಭಾಷಾಭ್ಯಾಸ | | 7 | | | | 14 |
| 01 | ಪ್ರಬಂಧ ರಚನೆ | | | | | 2 | 10 |
| 02 | ಪತ್ರಲೇಖನ | | | | 2 | | 8 |
| 03 | ಗಾದೆಮಾತು ವಿಸ್ತರಣೆ | | | | 2 | | 8 |
| | **ಒಟ್ಟು ಪ್ರಶ್ನೆಗಳು** | 10 | 20 | 7 | 14 | 4 | 147 |

**ದ್ವಿತೀಯ ಪಿ.ಯು.ಸಿ ಮಾದರಿ ಪ್ರಶ್ನೆ ಪತ್ರಿಕೆ –2**

**ವಿಷಯ : ಕನ್ನಡ (01)**

**ಅವಧಿ : 3–15 ಗಂಟೆ** **ಗರಿಷ್ಠ ಅಂಕಗಳು : 100**

**ಅ – ವಿಭಾಗ**

**I. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ:** **1x10=10**

1. ಲಕ್ಷ್ಮೀಧರ ಎಂದರೆ ಯಾರು?
2. ಬ್ಯಾಸಗಿ ದಿವಸಕ್ಕ ಯಾವ ಮರ ತಂಪು?
3. ಜಗವು ಯಾವುದಕ್ಕೆ ಸೋತಿದೆ?
4. ಕ್ರಿಸ್ಮಸ್ ಸಂದರ್ಭದಲ್ಲಿ ಹತ್ತಿ ಯಾವ ಕೆಲಸ ಮಾಡಿದೆ?
5. ಬದುಕುಳಿಯುವ ಛಲತೊಟ್ಟ ಹಾಡು ಹಕ್ಕಿ ಯಾವುದು?
6. ಧಣಿಗಳ ದಾಂಪತ್ಯಕ್ಕೆ ಯಾವುದು ಮೂಕಸಾಕ್ಷಿಯಾಗಿತ್ತು?
7. ಎಂತಹ ಗದ್ಯದಲ್ಲಿ ಕತೆ ಹೇಳೆಂದು ಮನೋರಮೆ ಕೇಳುವಳು?
8. ಹಾಳಾಗಿದ್ದ ಕೊಡಲಿ ನೋಡಲು ಹೇಗೆ ಕಾಣುತ್ತಿತ್ತು?
9. ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು?
10. ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

**ಆ – ವಿಭಾಗ**

**II. ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:** **2x4=8**

11. ಶಿವಪಥವನ್ನು ಅರಿಯದವನನ್ನು ಹೇಗೆ ವಿಡಂಬಿಸಲಾಗಿದೆ?
12. ಭೀಮನೇ ಮಿಡುಕುಳ್ಳ ಗಂಡನೆಂದು ದ್ರೌಪದಿ ಏಕೆ ಭಾವಿಸಿದಳು?
13. ಕ್ರಿಸ್ತ ಎಲ್ಲೆಲ್ಲಿ ಶಿಲುಬೆಗೇರಿದ್ದಾನೆ?
14. ಹತ್ತಿಯ ಬೀಜ ಲೋಕದ ಹಿತಕ್ಕೆ ತನ್ನನ್ನು ಹೇಗೆ ಸುಟ್ಟುಕೊಳ್ಳುತ್ತದೆ?
15. ದನಗಳಿಗೆ ಜನಗಳಿಗೆ ಏನೇನು ಇಲ್ಲ?

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:** **2x3=6**

16. ಮುಸುರೆ ಪಾತ್ರೆಗಳ 'ಒಡೆಯ' ಏನೆಂದು ಯೋಚಿಸಿದನು?
17. ಕಲಾಂ ಅವರ ಬದುಕಿನ ಮಂತ್ರ ಯಾವುದು?
18. ಸಂಸ್ಕೃತ–ಕನ್ನಡಗಳು ಸೇರಿದರೆ ಹೇಗೆ ಸೊಗಯಿಸುತ್ತದೆ?
19. ರೋಗಿಗಳ ಹಾಗೂ ಪಥ್ಯ ಮಾಡುವವರ ಜಿದ್ದು ಎಂತಹುದು?

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:** **2x3=6**

20. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?
21. ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ?
22. ಆನೆಯನ್ನು ಇತರರಿಗೆ ದಾಟಿಸಿಬಿಡಲು ಕೃಷ್ಣೇಗೌಡನಿಗಿದ್ದ ತೊಡಕುಗಳೇನು?
23. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

**ಇ – ವಿಭಾಗ**

**III. ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ:** **3x2=6**

24. ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ.
25. ತುಂಬಿರುವ ತನಕ ತುಂತುಂಬಿ ಕುಡಿಯಬೇಕು.
26. ಮಾತೇ ಮರೆತು ಹೋಗಿದೆ ಕಣೆ.

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3x1=3**

27. ದುರಂತದ ಮೂಲ ಬೀಜಗಳು ಚಹಾಗಿಡದ ರೂಪದಲ್ಲಿ ಬಂದವು.
28. ಅನಕ್ಷರಸ್ಥರ ಪಾರ್ಲಿಮೆಂಟು.

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3x1=3**

29. ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೋ.
30. ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ.

**ಈ – ವಿಭಾಗ**

IV. **ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4x3=12**

31. ತನಗೊದಗಿದ ಅಪಾಯವನ್ನು ನಿವಾರಿಸಿಕೊಳ್ಳುವ ದ್ರೌಪದಿಯ ಜಾಣ್ಮೆಯನ್ನು ವಿವರಿಸಿ.
32. ಜ್ಞಾನವನ್ನು ಹೊಂದುವ ಮಾರ್ಗ ಯಾವುದೆಂಬುದನ್ನು ಸೋಮನಾಥನು ಹೇಗೆ ವಿವರಿಸಿದ್ದಾನೆ?
33. ಜನಪದರು ತಾಯಿ–ತವರಿನ ಬಗೆಗೆ ಇರಿಸಿಕೊಂಡ ಪ್ರೀತಿ ಎಂತಹದು?
34. ನಗರ ಜೀವನದ ಯಾಂತ್ರಿಕ ವಿವರಗಳು 'ಮುಂಬೈ ಜಾತಕ'ದಲ್ಲಿ ಹೇಗೆ ಚಿತ್ರಿತಗೊಂಡಿದೆ? ವಿವರಿಸಿ.

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4x2=8**

35. ಡಾ. ತಿಮ್ಮಪ್ಪನವರ ವ್ಯಕ್ತಿತ್ವವನ್ನು ನಿರೂಪಿಸಿ.
36. ಬದುಕಿನಲ್ಲಿ ಆಯ್ಕೆಗಳು ಮುಖ್ಯ ಎಂಬುದನ್ನು ಲೇಖಕಿ ನೇಮಿಚಂದ್ರ ಹೇಗೆ ನಿರೂಪಿಸಿದ್ದಾರೆ?
37. ಕನ್ನಡಿಗರ ಉದ್ಯೋಗದ ತೀವ್ರತರ ಸಮಸ್ಯೆಗೆ ಸಂಬಂಧಿಸಿದ ಹಾ.ಮಾ.ನಾಯಕರ ಅಭಿಪ್ರಾಯಗಳನ್ನು ತಿಳಿಸಿ.

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4x2=8**

38. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?
39. ನಿದ್ರೆ ಮಂಪರಿನಲ್ಲಿದ್ದ ಡ್ರೈವರ್ ಪರಂಧಾಮಕ್ಕೆ ಹೋದ ಸಂದರ್ಭವನ್ನು ವಿವರಿಸಿ.
40. ಕೃಷ್ಣೇಗೌಡನ ಆನೆ ಕತೆಯಲ್ಲಿ ಬರುವ ಭ್ರಷ್ಟವ್ಯವಸ್ಥೆಯ ಚಿತ್ರಣವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಉ – ವಿಭಾಗ**

V. **ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ: 5x1=5**

41. ಇವರಂ ಪ್ರಾಣಪ್ರಿಯರಂ
ನೆವಮಿಲ್ಲದೆ ಕರ್ಮವಶಮೆ ನೆವಮನೆ ಕಂದ
ರ್ಪವಿಮೋಹದಿಂದಗಲ್ಚಿದೆ
ನವಿವೇಕಿಯೆನೆನ್ನ ಕುಲದ ಪೆಂಪಳಿವಿನೆಗಂ

42. ಪರುಷದ ಗೃಹದೊಳಗಿದ್ದು, ತಿರಿವನೆ ಮನೆಮನೆಯ?
ತೊರೆಯೊಳಗಿದ್ದವನು, ತೃಷೆಯಾಗಲರಸುವನೆ ಕೆರೆಯುದಕವ?
ಮಂಗಳಲಿಂಗ ಅಂಗದ ಮೇಲೆ ಇದ್ದು,
ಅನ್ಯಲಿಂಗಗಳ ನೆನೆವನೆ ನಿಮ್ಮ ಭಕ್ತನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

**ಭಾಷಾಭ್ಯಾಸ**

VI. **ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗನುಗುಣವಾಗಿ ಉತ್ತರಿಸಿ: 2x6=12**

43. ಈ ಪದಗಳಿಗೆ ಅರ್ಥ ಬರೆಯಿರಿ : ಪರಿಭವ, ವಕ್ತಾರ
44. ಈ ಪದಗಳ ತದ್ಭವರೂಪ ಬರೆಯಿರಿ : ನಿದ್ರಾ, ಭಂಗ
45. ಈ ಪದಗಳ ವಿಭಕ್ತಿಗಳ ಹೆಸರನ್ನು ಬರೆಯಿರಿ : ಬೆಳಗಿಂದ, ಸಲಿಲಂ

46. ಈ ಪದಗಳ ನಾನಾರ್ಥ ಬರೆಯಿರಿ : ಕಲಿ, ಫಲ

47. ಈ ಪದಗಳಲ್ಲಿನ ಗುಣವಾಚಕಗಳನ್ನು ಗುರುತಿಸಿರಿ : ಗೂಗೆಮರಿ, ದುರ್ಗಂಧ

48. ಇವುಗಳ ಕಾಲಸೂಚಕಗಳನ್ನು ಬರೆಯಿರಿ : ಬೀಸುತ್ತಿತ್ತು, ನೋಡಿತು

49. ಈ ಕ್ರಿಯಾಪದಗಳ ನಿಷೇಧರೂಪ ಬರೆಯಿರಿ : ತಿನ್ನು, ಬರೆವೆನು

**ಆ) ಈ ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ: 5x1=5**

50. ರಕ್ತದಾನ ಮತ್ತು ನೇತ್ರದಾನಗಳ ಮಹತ್ತ್ವ.

51. ಸ್ವಚ್ಛ ಭಾರತ.

**ಇ) ಪತ್ರಲೇಖನ : ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪತ್ರ ಬರೆಯಿರಿ: 4x1=4**

52. ನಿಮ್ಮ ಪ್ರವಾಸಾನುಭವದ ಕುರಿತು ಗೆಳೆಯ / ಗೆಳತಿಗೊಂದು ಪತ್ರ ಬರೆಯಿರಿ.

53. ನಿಮ್ಮೂರಿನಲ್ಲಿರುವ ತ್ಯಾಜ್ಯವನ್ನು ವಿಲೇವಾರಿ ಮಾಡುವ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೊಂದು ಪತ್ರ ಬರೆಯಿರಿ.

**ಈ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ: 4x1=4**

54. ಹಣಕ್ಕಿಂತ ಗುಣ ಮುಖ್ಯ .

55. ಹಾಸಿಗೆ ಇದ್ದಷ್ಟು ಕಾಲು ಚಾಚು.

******

## ಮಾದರಿ ಪ್ರಶ್ನೆಪತ್ರಿಕೆ – 3, ದ್ವಿತೀಯ ಪಿ.ಯು.ಸಿ ಕನ್ನಡ ಭಾಷೆ(01)
## ಪ್ರಶ್ನೆಪತ್ರಿಕೆಯ ನೀಲ ನಕ್ಷೆ

| ಕ್ರ. ಸಂ | ಪದ್ಯಭಾಗ | 1 ಅಂಕ | 2 ಅಂಕ | 3 ಅಂಕ | 4 ಅಂಕ | 5 ಅಂಕ | ಒಟ್ಟು ಅಂಕಗಳು |
|---|---|---|---|---|---|---|---|
| 01 | ಕದಡಿದ ಸಲಿಲಂ ತಿಳಿವಂದದೆ | 1 | 1 | | | 1 | 8 |
| 02 | ವಚನಗಳು<br>ಅ) ಬಸವಣ್ಣನವರ ವಚನಗಳು<br>ಆ) ಉರಿಲಿಂಗಿಪೆದ್ದಿಯ ವಚನಗಳು | | 1 | | 1 | | 6 |
| 03 | ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು | 1 | | 1 | 1 | | 8 |
| 04 | ಪಗೆಯಂ ಬಾಲಕನೆಂಬರೇ | | | 1 | | | 3 |
| 05 | ಜಾಲಿಯ ಮರದಂತೆ | | 1 | | | | 2 |
| 06 | ಹಬ್ಬಲಿ ಅವರ ರಸಬಳ್ಳಿ | | | | 1 | | 4 |
| 07 | ಬೆಳಗು ಜಾವ | | | 1 | | | 3 |
| 08 | ಮುಂಬೈ ಜಾತಕ | 1 | 1 | | | | 3 |
| 09 | ಶಿಲುಬೆ ಏರಿದ್ದಾನೆ | | | | 1 | | 4 |
| 10 | ಒಂದು ಹೂ ಹೆಚ್ಚಿಗೆ ಇಡುತೀನಿ | | | | | 1 | 5 |
| 11 | ಹತ್ತಿ... ಚಿತ್ತ... ಮತ್ತು... | 1 | | | | | 1 |
| 12 | ಒಮ್ಮೆ ನಗುತ್ತೇವೆ | | 1 | | | | 2 |
| | **ಗದ್ಯಭಾಗ** | | | | | | |
| 01 | ಮುಟ್ಟಿಸಿಕೊಂಡವನು | | | | 1 | | 4 |
| 02 | ವಾಲ್‌ಪರೈ : ಅಭಿವೃದ್ಧಿ ತಂದ ದುರಂತ | | 1 | 1 | | | 5 |
| 03 | ಆಯ್ಕೆಯಿದೆ ನಮ್ಮ ಕೈಯಲ್ಲಿ | | | | 1 | | 4 |
| 04 | ಕನ್ನಡವನ್ನು ಕಟ್ಟುವ ಕೆಲಸ | 1 | | 1 | | | 4 |
| 05 | ಧಣಿಗಳ ಬೆಳ್ಳಿಲೋಟ | | | | 1 | | 4 |
| 06 | ಬದುಕನ್ನು ಪ್ರೀತಿಸಿದ ಸಂತ | | 1 | | | | 2 |
| 07 | ತಿರುಳ್ಗನ್ನಡದ ಬೆಳ್ನುಡಿ | 1 | 1 | | | | 3 |
| 08 | ಹಳ್ಳಿಯ ಚಹಾ ಹೋಟೇಲುಗಳು | 1 | 1 | | | | 3 |
| | **ದೀರ್ಘಗದ್ಯ** | | | | | | |
| 01 | ಕೃಷ್ಣೇಗೌಡನ ಆನೆ | 3 | 4 | 2 | 3 | | 29 |
| | ಭಾಷಾಭ್ಯಾಸ | | 7 | | | | 14 |
| 01 | ಪ್ರಬಂಧ ರಚನೆ | | | | | 2 | 10 |
| 02 | ಪತ್ರಲೇಖನ | | | | 2 | | 8 |
| 03 | ಗಾದೆಮಾತು ವಿಸ್ತರಣೆ | | | | 2 | | 8 |
| | **ಒಟ್ಟು ಪ್ರಶ್ನೆಗಳು** | 10 | 20 | 7 | 14 | 4 | 147 |

## ದ್ವಿತೀಯ ಪಿ.ಯು.ಸಿ ಮಾದರಿ ಪ್ರಶ್ನೆ ಪತ್ರಿಕೆ –3

ವಿಷಯ : **ಕನ್ನಡ (01)**

**ಅವಧಿ : 3–15 ಗಂಟೆ** **ಗರಿಷ್ಠ ಅಂಕಗಳು : 100**

### ಅ – ವಿಭಾಗ

**I. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ:** **1x10=10**

1. ರಾವಣನ ಮಾತು ಕೇಳಿ ಮೂರ್ಛೆ ಹೋದವರು ಯಾರು?
2. ಯಾರ ಬಸುರನ್ನು ಬಗೆಯುವುದಾಗಿ ಭೀಮ ಹೇಳುತ್ತಾನೆ?
3. ಕುಳಿತು ಕೆಮ್ಮುವ ಪ್ರಾಣಿ ಯಾರು?
4. ಚಿತ್ತವನ್ನು ಯಾವುದಕ್ಕೆ ಹೋಲಿಸಲಾಗಿದೆ?
5. ಹಾ.ಮಾ.ನಾಯಕರ ಮೊದಲ ಪ್ರೀತಿ ಯಾವುದು?
6. ಕನ್ನಡವು ಕಸ್ತೂರಿಯಲ್ಲವೆ ಎಂದವರಾರು?
7. ಬಾಯಿಚಪಲ ಯಾರಿಗೆ ಜಾಸ್ತಿ ಇರುತ್ತದೆ?
8. ಹಾಳಾಗಿದ್ದ ಕೊಡಲಿ ನೋಡಲು ಹೇಗೆ ಕಾಣುತ್ತಿತ್ತು?
9. ಪುಟ್ಟಯ್ಯ ಯಾರು?
10. ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

### ಆ – ವಿಭಾಗ

**II. ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:** **2x4=8**

11. ರಾವಣನು ಸೊಕ್ಕಿನಿಂದ ಸೀತೆಯನ್ನುದ್ದೇಶಿಸಿ ಆಡಿದ ಮಾತುಗಳಾವುವು?
12. ಯಾವಾಗ ನಿಲಬಹುದು? ಯಾವಾಗ ನಿಲಲಾಗದು?
13. ಯಾರಿಗೆ ಷಡ್ರಸಾನ್ನವನಿಕ್ಕಿ ಉಪಯೋಗವಿಲ್ಲ? ಏಕೆ?
14. ಮುಂಬೈ ಅವಸರದ ಜೀವನ ಚಿತ್ರಕ್ಕೆ ಎರಡು ಉದಾಹರಣೆ ನೀಡಿ
15. ದನಗಳಿಗೆ ಜನಗಳಿಗೆ ಏನೇನು ಇಲ್ಲ?

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:** **2x3=6**

16. ಈಗ ಹಾಡು ಹಕ್ಕಿಗಳ ನೆಲೆ ಯಾವುದು?
17. ಪದ್ಮ ಶೇಷಾದ್ರಿ ಬಾಲಭವನದ ಮಕ್ಕಳಿಗೆ ಕಲಾಂ ಕೇಳಿದ ಪ್ರಶ್ನೆ ಯಾವುದು?
18. 'ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಯ್ತು' ಎಂದು ಮನೋರಮೆ ಹೇಳಿದ್ದೇಕೆ?
19. ಹಳ್ಳಿಯ ಚಹಾದ ಅಂಗಡಿಯೆಂದರೆ ಹೇಗಿರುತ್ತದೆ?

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:** **2x3=6**

20. ಜಬ್ಬಾರ್ ತಾನು ವೆಟರ್ನರಿ ಆಸ್ಪತ್ರೆಗೆ ಬಂದುದಕ್ಕೆ ಕೊಟ್ಟ ಕಾರಣವೇನು?
21. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?
22. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?
23. ಗುರುತುಸಿಗದ ಹೆಣ ವೇಲಾಯುಧನದು ಎಂದು ತಿಳಿದಮೇಲೆ ಪೋಲೀಸರಿಗೆ ಬಂದ ಪೀಕಲಾಟವೇನು?

### ಇ – ವಿಭಾಗ

**III. ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ:** **3x2=6**

24 ಅನ್ಯ ಲಿಂಗಗಳ ನೆನೆವನೆ ನಿಮ್ಮ ಭಕ್ತನು.

25. ಕೆಲವಂ ಬಲ್ಲವರಿಂದ ಕಲ್ತು..

26. ಹಬ್ಬಲಿ ಅವರ ರಸಬಳ್ಳಿ.

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ:** **3x1=3**

27. ಕೋತಿಗಳಿಗೆ 'ದಯಾಮೃತ್ಯು' ಕರುಣಿಸಲೂ ಕಾನೂನಿನಲ್ಲಿ ಅವಕಾಶವಿಲ
28. ಕನ್ನಡಿಗರು ಮೊದಲು ಕನ್ನಡಿಗರಾಗಬೇಕು.

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ:** **3x1=3**

29. ದುಣ್ಣಮುಂಡೆ ಆನೆಯನ್ನು ತೂಗೋದಕ್ಕೆ ತಕ್ಕಡಿ ಎಲ್ಲಿಂದ ತರ್ತೀರ ಹೇಳಿ.
30. ಆನೆ ಬೇಲಿ ದಾಟಿ ಹೋಯ್ತು ಸಾರ್.

**ಈ – ವಿಭಾಗ**

IV. **ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ:** **4x3=12**

31. ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?
32. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿರಿ.
33. ಜನಪದರು ತಾಯಿ–ತವರಿನ ಬಗೆಗೆ ಇರಿಸಿಕೊಂಡ ಪ್ರೀತಿ ಎಂತಹದು?
34. ನಗರ ಜೀವನದ ಯಾಂತ್ರಿಕ ವಿವರಗಳು ಕವಿತೆಯಲ್ಲಿ ಹೇಗೆ ಚಿತ್ರಿತಗೊಂಡಿದೆ? ವಿವರಿಸಿ.

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ:** **4x2=8**

35. ಬಸಲಿಂಗ ಕೊನೆಯಲ್ಲಿ ತೆಗೆದುಕೊಂಡ ನಿರ್ಧಾರ ಯಾವುದು? ಅದಕ್ಕೆ ಕಾರಣಗಳೇನು?
36. ಸೀತಾ ಎಂಬ ಗೆಳತಿಯ ಗುಣ–ಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ?
37. ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು? ವಿಶ್ಲೇಷಿಸಿ.

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ:** **4x2=8**

38. ಮೂಡಿಗೆರೆಯಲ್ಲಿ ಪ್ರಕಾಶ್ ಮಾಡಿದ ಭಾಷಣದ ಪರಿಣಾಮಗಳನ್ನು ವಿವರಿಸಿ.
39. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡನ ಆನೆ ಕಾರಣವೆ? ವಿವರಿಸಿ.
40. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು? ವಿವರಿಸಿ.

**ಉ – ವಿಭಾಗ**

V. **ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ:** **5x1=5**

41. ಪತ್ತುವಿಡದಿರ್ದನೇ ರವಿ
ಪತ್ತಿದ ಸಂಧ್ಯಾನುರಾಗಮಂ ಮನದಳಿಪಿಂ
ದೆತ್ತಾನುಂ ಪೊಲ್ಲೆನಿಪುದ
ನುತ್ತಮನಾಚರಿಸಿ ಪತ್ತುವಿಡದಿರ್ದಪನೇ

42. ಹಂಚಿಕೊಂಡಿದ್ದಾರೆ ಅಪ್ಪ ಅಮ್ಮನನ್ನು
ಇಲ್ಲಿ ದೊಡ್ಡಮಗನ ತಾವಲ್ಲಿ ಮುದುಕಿ, ಸದ್ಯ ಕನ್ನಡ ದೇಶ
ಮಗ ಸೊಸೆ ಹೊರಗೆ ಹೋದಾಗಲಾದರೂ ನಾಲ್ಕು ಮಾತಾಡಿ
ತೀರಿಸಿಕೊಳ್ಳುತ್ತಾಳೆ ಬಾಯತುರಿಕೆ, ಪಾಪ ಮುದುಕ ದೂರದ
ಅಸ್ಸಾಮಿನಲ್ಲಿ, ಅಲ್ಲಿಯ ಮಾತು ಸಸೇಮಿರ ಬರದು

**ಭಾಷಾಭ್ಯಾಸ**

VI. **ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗನುಗುಣವಾಗಿ ಉತ್ತರಿಸಿ:** **2x6=12**

43. ಈ ಪದಗಳಿಗೆ ಅರ್ಥ ಬರೆಯಿರಿ : ಅಂತರ್ಧಾನ, ಹರಿಬ
44. ಈ ತದ್ಭವ ಪದಗಳ ತತ್ಸಮ ರೂಪ ಬರೆಯಿರಿ : ಮುಕುತಿ, ಸಂತೆ

45. ಈ ಪದಗಳ ವಿಭಕ್ತಿಗಳ ಹೆಸರನ್ನು ಬರೆಯಿರಿ : ಉದಾತ್ತನೊಳ್, ಕುಟುಂಬಕ್ಕೆ

46. ಈ ಪದಗಳ ನಾನಾರ್ಥ ಬರೆಯಿರಿ : ನರ, ಹೊಳೆ

47. ಈ ನುಡಿಗಟ್ಟುಗಳನ್ನು ಬಳಸಿ ವಾಕ್ಯ ರಚಿಸಿ : ತಲೆಕೊಡವು, ಮೂಲೆಗುಂಪು

48. ಈ ದ್ವಿರುಕ್ತಿ ಪದಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ : ಮತ್ತೆಮತ್ತೆ, ಅಡಿಗಡಿಗೆ

49. ಈ ಕ್ರಿಯಾಪದಗಳ ನಿಷೇಧರೂಪ ಬರೆಯಿರಿ : ನಿಲ್ಲುವೆನು, ಬರೆಯುತ್ತಾಳೆ

**ಆ) ಈ ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ:** **5x1=5**

50. ನೋಟು ಅಮಾನ್ಯೀಕರಣ ಮತ್ತು ಕಪ್ಪು ಹಣ

51. ಡಿಜಿಟಲೀಕರಣದಲ್ಲಿ ಕನ್ನಡ ಭಾಷಾ ಬಳಕೆಯ ಅಗತ್ಯ

**ಇ) ಪತ್ರಲೇಖನ : ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪತ್ರ ಬರೆಯಿರಿ:** **4x1=4**

52. ನಿಮ್ಮ ಹಳ್ಳಿಯ ಸಾರಿಗೆ ಅವ್ಯವಸ್ಥೆ ಸರಿಪಡಿಸುವಂತೆ ಕೋರಿ ಸಂಬಂಧಿಸಿದ ಅಧಿಕಾರಿಗಳಿಗೆ ಪತ್ರವೊಂದನ್ನು ಬರೆಯಿರಿ.

53. ನಿಮ್ಮ ಕಾಲೇಜಿನಲ್ಲಿ ಜರುಗಿದ ಪರಿಸರ ಕೂಟ(ಇಕೋ ಕ್ಲಬ್)ದ ಆರಂಭ ಸಮಾರಂಭದ ಕುರಿತು ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.

**ಈ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ:** **4x1=4**

54. ಊರು ಉಪಕಾರವರಿಯದು ಹೆಣ ಸಿಂಗಾರವರಿಯದು

55. ದೇಶ ಸುತ್ತಬೇಕು, ಕೋಶ ಓದಬೇಕು.

*****